ಮಂಗಳವಾರ, ಮೇ 30, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಭಿಮಾನಿ
ಅಹಮದಾಬಾದ್‌ನಲ್ಲಿ ನಡೆದ ಐಪಿಎಲ್ ಫೈನಲ್ ಪಂದ್ಯದ ವೇಳೆ 'ಚೆನ್ನೈ ಸೂಪರ್ ಕಿಂಗ್ಸ್' ತಂಡದ ಅಭಿಮಾನಿಯೊಬ್ಬರು ಕಂಡು ಬಂದಿದ್ದು ಹೀಗೆ...

9 Years
Seva, Sushasan
Garib Kalyan

9 ವರ್ಷಗಳು: ನವಭಾರತ ನಿರ್ಮಾಣ ಬಡವರ ಕಲ್ಯಾಣ ಖಾತ್ರಿ

ಬಡವರ ಸೇವೆ, ವಂಚಿತರಿಗೆ ಗೌರವ

- 80 ಕೋಟಿ ಜನರು ಉಚಿತ ಆಹಾರ ಧಾನ್ಯಗಳನ್ನು ಪಡೆಯುತ್ತಿದ್ದಾರೆ; ಬಡವರು ಮೊದಲ ಬಾರಿಗೆ ಗೌರವ ಮತ್ತು ಭದ್ರತೆಯನ್ನು ಪಡೆದಿದ್ದಾರೆ.
- ಪ್ರದಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ 3 ಕೋಟಿ ಕುಟುಂಬಗಳು ಪಕ್ಕಾ ಮನೆಗಳನ್ನು ಪಡೆದಿವೆ.
- ಸ್ವಚ್ಛ ಭಾರತ್ ಅಡಿಯಲ್ಲಿ ನಿರ್ಮಿಸಲಾದ 11.72 ಕೋಟಿ ಶೌಚಾಲಯಗಳು ಗೌರವಯುತ ಜೀವನವನ್ನು ಖಚಿತಪಡಿಸಿವೆ.
- 12 ಕೋಟಿ ಕುಟುಂಬಗಳು ನಲ್ಲಿ ನೀರಿನ ಸಂಪರ್ಕವನ್ನು ಪಡೆದಿವೆ.

ನಾರಿ ಶಕ್ತಿ – ರಾಷ್ಟ್ರದ ಪ್ರಗತಿಯನ್ನು ಚಾಲನೆ ಮಾಡುತ್ತದೆ

- ಮಹಿಳೆಯರಿಗೆ ಹೊಗೆ ಮುಕ್ತ ಅಡುಗೆ ಮನೆ, ಉಜ್ವಲ ಯೋಜನೆಯಡಿ 9.6 ಕೋಟಿ ಎಲ್ ಪಿ ಜಿ ಸಂಪರ್ಕಗಳು.
- ಮಹಿಳೆಯರಿಗೆ ಗೌರವವನ್ನು ಖಾತ್ರಿಪಡಿಸಲಾಗಿದೆ, ಸಶಸ್ತ್ರ ಪಡೆಗಳಲ್ಲಿ ಕಾಯಂ ನೇಮಕಾತಿ.
- ಮಹಿಳಾ ಫಲಾನುಭವಿಗಳಿಗೆ 27 ಕೋಟಿಗೂ ಹೆಚ್ಚು ಮುದ್ರಾ ಸಾಲಗಳು.

ಪಾವತಿಯ ಹೆರಿಗೆ ರಜೆಯನ್ನು 12 ವಾರಗಳಿಂದ 26 ವಾರಗಳಿಗೆ ಹೆಚ್ಚಿಸಲಾಗಿದೆ.

ಯುವ ಶಕ್ತಿಯ ಆಕಾಂಕ್ಷೆಗಳ ಈಡೇರಿಕೆ

- ಪ್ರತಿ ಎರಡು ದಿನಗಳಲ್ಲಿ ಒಂದು ಕಾಲೇಜು ಮತ್ತು ಪ್ರತಿ ವಾರ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ.
- ಕಳೆದ 9 ವರ್ಷಗಳಲ್ಲಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ 387 ರಿಂದ 693 ಕ್ಕೆ ಏರಿಕೆಯಾಗಿದೆ.
- ಕಳೆದ 9 ವರ್ಷಗಳಲ್ಲಿ 7 ಹೊಸ ಐಐಎಂಗಳು ಮತ್ತು 7 ಹೊಸ ಐಐಟಿಗಳನ್ನು ಸ್ಥಾಪಿಸಲಾಗಿದೆ.
- ಪ್ರಧಾನಮಂತ್ರಿ ಕೌಶಲ ವಿಕಾಸ ಯೋಜನೆ ಅಡಿಯಲ್ಲಿ 1.37 ಕೋಟಿ ಯುವಜನರಿಗೆ ತರಬೇತಿ.
- ಭಾರತವು ವಿಶ್ವದಲ್ಲಿ ಮೂರನೇ ಅತಿದೊಡ್ಡ ಸ್ಟಾರ್ಟ್ ಅಪ್ ಪರಿಸರ ವ್ಯವಸ್ಥೆಯಾಗಿದೆ. ದೇಶದಲ್ಲಿ 97,000 ಕ್ಕೂ ಹೆಚ್ಚು ಸ್ಟಾರ್ಟ್ ಅಪ್ ಗಳು, 100 ಕ್ಕೂ ಹೆಚ್ಚು ಯುನಿಕಾರ್ನ್‌ಗಳಿವೆ.

ರೈತರ ಕಲ್ಯಾಣವನ್ನು ಖಾತ್ರಿಪಡಿಸುವುದು

- ಪಿಎಂ ಕಿಸಾನ್ ಅಡಿಯಲ್ಲಿ 11 ಕೋಟಿಗೂ ಹೆಚ್ಚು ಫಲಾನುಭವಿಗಳು ಪ್ರತಿ ವರ್ಷ ರೂ.6,000 ಪಡೆಯುತ್ತಿದ್ದಾರೆ.
- 9 ವರ್ಷಗಳಲ್ಲಿ ಕೃಷಿ ಬಜೆಟ್‌ನಲ್ಲಿ 6 ಪಟ್ಟು ಹೆಚ್ಚಳ.
- ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಅಡಿಯಲ್ಲಿ 1.33 ಲಕ್ಷ ಕೋಟಿ ರೂ.ಗೂ ಹೆಚ್ಚು ಕ್ಲೇಮ್‌ಗಳನ್ನು ಇತ್ಯರ್ಥಪಡಿಸಲಾಗಿದೆ.
- ಬೇವು ಲೇಪಿತ ಯೂರಿಯಾ, ಮಣ್ಣಿನ ಆರೋಗ್ಯ ಕಾರ್ಡ್‌ಗಳು, ಪ್ರದಾನಮಂತ್ರಿ ಸಿಂಚಯಿ ಯೋಜನೆ, ಇ–ನ್ಯಾಮ್ ರೈತರ ಜೀವನವನ್ನು ಸುಲಭಗೊಳಿಸಿವೆ.

ಎಲ್ಲರಿಗೂ ಕೈಗೆಟುಕುವ, ಲಭ್ಯವಾಗುವ ಮತ್ತು ಗುಣಮಟ್ಟದ ಆರೋಗ್ಯ ರಕ್ಷಣೆ

- ಕಳೆದ 9 ವರ್ಷಗಳಲ್ಲಿ ಏಮ್ಸ್ ಗಳ ಸಂಖ್ಯೆ 8 ರಿಂದ 23 ಕ್ಕೆ ಏರಿಕೆಯಾಗಿದೆ.
- 50 ಕೋಟಿ ಜನರು ಆಯುಷ್ಮಾನ್ ಭಾರತ್ ಅಡಿಯಲ್ಲಿ ವಾರ್ಷಿಕವಾಗಿ ರೂ. 5 ಲಕ್ಷದ ಉಚಿತ ಚಿಕಿತ್ಸೆ ವ್ಯಾಪ್ತಿಗೆ ಒಳಪಟ್ಟಿದ್ದಾರೆ.
- ಜನೌಷಧಿ ಕೇಂದ್ರಗಳಲ್ಲಿ ಶೇ. 50 ರಿಂದ 90 ರಷ್ಟು ಕಡಿಮೆ ಬೆಲೆಯಲ್ಲಿ ಗುಣಮಟ್ಟದ ಔಷಧ ಲಭ್ಯವಿದ್ದು, ಬಡವರ ರೂ. 20,000 ಕೋಟಿ ಉಳಿತಾಯವಾಗಿದೆ.

ನವ ಭಾರತಕ್ಕೆ ಹೊಸ ಯುಗದ ಮೂಲಸೌಕರ್ಯ



- 18 ಸೆಮಿ ಹೈಸ್ಪೀಡ್ ವಂದೇ ಭಾರತ್ ರೈಲುಗಳ ಆರಂಭ.
- 9 ವರ್ಷಗಳಲ್ಲಿ ವಿಮಾನ ನಿಲ್ದಾಣಗಳ ಸಂಖ್ಯೆ 74 ರಿಂದ 148ಕ್ಕೆ ದ್ವಿಗುಣಗೊಂಡಿದೆ.
- ಮೆಟ್ರೋ ರೈಲು ಜಾಲ 5 ರಿಂದ 20 ನಗರಗಳಿಗೆ ವಿಸ್ತರಿಸಿದೆ.
- ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣದ ವೇಗ ದುಪ್ಪಟ್ಟಾಗಿದೆ, 53,000 ಕಿಲೋ ಮೀಟರ್ ಹೆದ್ದಾರಿಗಳನ್ನು ನಿರ್ಮಿಸಲಾಗಿದೆ.
- ಕಳೆದ 9 ವರ್ಷಗಳಲ್ಲಿ 3.53 ಲಕ್ಷ ಕಿ.ಮೀ. ಗ್ರಾಮೀಣ ರಸ್ತೆಗಳನ್ನು ನಿರ್ಮಿಸಲಾಗಿದೆ.

ವಿಶ್ವದಲ್ಲಿ ಹೆಚ್ಚುತ್ತಿರುವ ಭಾರತದ ಸ್ಥಾನಮಾನ

- ಒಟ್ಟು ರಫ್ತು $770 ಬಿಲಿಯನ್ ದಾಟಿದೆ.
- ಭಾರತವು ತನ್ನ ಜಿ–20 ಅಧ್ಯಕ್ಷತೆಯ ಮೂಲಕ ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ಹೊಸ ಉತ್ತೇಜನ ನೀಡಿದೆ.
- ಲಸಿಕೆ ಮೈತ್ರಿ ಮೂಲಕ ಕೋವಿಡ್ ಸಾಂಕ್ರಾಮಿಕದ ಸಮಯದಲ್ಲಿ 100 ಕ್ಕೂ ಹೆಚ್ಚು ದೇಶಗಳಿಗೆ ನೆರವು ನೀಡಲಾಗಿದೆ.
- ಅಂತರರಾಷ್ಟ್ರೀಯ ಯೋಗ ದಿನ, ಅಂತರರಾಷ್ಟ್ರೀಯ ಸೌರ ಒಕ್ಕೂಟ, ಮಿಷನ್ ಲೈಫ್ ಮತ್ತು ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷ ಸೇರಿದಂತೆ ಅನೇಕ ಉಪಕ್ರಮಗಳು ಜಾಗತಿಕ ವೇದಿಕೆಯಲ್ಲಿ ಭಾರತದ ಪ್ರಮುಖ ಪಾತ್ರವನ್ನು ಒತ್ತಿ ಹೇಳುತ್ತಿವೆ.

ವಿರಾಸತ್ ಮತ್ತು ವಿಕಾಸ್

- ಅಯೋಧ್ಯೆಯಲ್ಲಿ ಭವ್ಯವಾದ ರಾಮಮಂದಿರ ನಿರ್ಮಾಣವಾಗುತ್ತಿದೆ.
- ಸಾಂಸ್ಕೃತಿಕ ಮತ್ತು ಅಧ್ಯಾತ್ಮಿಕ ಪರಂಪರೆಯ ತಾಣಗಳ ಪುನರ್ನಿಮಾಣದ ಮೂಲಕ ಜನರ ನಂಬಿಕೆಯನ್ನು ಗೌರವಿಸಲಾಗುತ್ತಿದೆ.
- ಕದಿಯಲಾಗಿದ್ದ 230 ಕ್ಕೂ ಹೆಚ್ಚು ಕಲಾಕೃತಿಗಳನ್ನು ಭಾರತಕ್ಕೆ ತರಲಾಗಿದೆ.
- ವಸಾಹತುಶಾಹಿ ಮನಸ್ಥಿತಿಯನ್ನು ತೊಡೆದುಹಾಕಿ ದೇಶವು ಅಭಿವೃದ್ಧಿ ಹೊಂದಿದ ಭಾರತದತ್ತ ಸಾಗುತ್ತಿದೆ.

"ಇಂದು ನವಭಾರತವು ಹೊಸ ಗುರಿಗಳನ್ನು ನಿಗದಿಮಾಡಿದೆ ಮತ್ತು ಹೊಸ ಮಾರ್ಗಗಳನ್ನು ರುಪಿಸುತ್ತಿದೆ. ಹೊಸ ಹುರುಪು ಮತ್ತು ಹೊಸ ಉತ್ಸಾಹವಿದೆ. ಹೊಸ ಪ್ರಯಾಣ ಮತ್ತು ಹೊಸ ದೃಷ್ಟಿಕೋನವಿದೆ. ದಿಕ್ಕು ಹೊಸದು ಮತ್ತು ಸೃಷ್ಟಿ ಹೊಸದು. ಸಂಕಲ್ಪ ಹೊಸದು, ಆತ್ಮ ವಿಶ್ವಾಸ ಹೊಸದು"

ನರೇಂದ್ರ ಮೋದಿ ಪ್ರಧಾನ ಮಂತ್ರಿ

ಹೆಚ್ಚಿನ ಮಾಹಿತಿಗಾಗಿ NaMo ಆಪ್‌ಗೆ ಭೇಟಿ ನೀಡಿ ಅಥವಾ QR ಕೋಡ್ ಅನ್ನು ಸ್ಕ್ಯಾನ್ ಮಾಡಿ.

CBC 22201/13/0026/2324

ಮುಖ್ಯಮಂತ್ರಿ ಸಚಿವಾಲಯಕ್ಕೆ ತಕ್ಷಣ ಮಾಹಿತಿ ಸಲ್ಲಿಸಲು ಸಿದ್ದರಾಮಯ್ಯ ಸೂಚನೆ

₹1 ಕೋಟಿ ಮೀರಿದ ಟೆಂಡರ್‌ಗಳ ಪರಾಮರ್ಶೆ

• ರಾಜೇಶ್ ರೈ ಚಟ್ಲ

ಬೆಂಗಳೂರು: 'ಆರು ತಿಂಗಳ ಅವಧಿಯಲ್ಲಿ ವಿವಿಧ ಇಲಾಖೆಗಳು ಮತ್ತು ನಿಗಮಗಳು ನೀಡಿದ ₹1 ಕೋಟಿಗೂ ಮೀರಿದ ಎಲ್ಲ ಟೆಂಡರ್‌ಗಳ ಮಾಹಿತಿಯನ್ನು ತಕ್ಷಣ ನನ್ನ ಸಚಿವಾಲಯಕ್ಕೆ ಸಲ್ಲಿಸಬೇಕು' ಎಂದು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಆ ಮೂಲಕ, ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದ ಕೊನೆಯ ಅವಧಿಯಲ್ಲಿ ಒಪ್ಪಿಗೆ ನೀಡಿದ ₹1 ಕೋಟಿ ಮೀರಿದ ಎಲ್ಲ ಟೆಂಡರ್‌ಗಳನ್ನು ಪರಾಮರ್ಶೆಗೆ ಒಳಪಡಿಸಲು ಖುದ್ದು ಮುಖ್ಯಮಂತ್ರಿ ಮುಂದಾಗಿದ್ದಾರೆ.

ಮುಖ್ಯ ಕಾರ್ಯದರ್ಶಿಗೆ ಬರೆದ ಟಿಪ್ಪಣಿಯಲ್ಲಿ, 'ಈ ಹಿಂದಿನ ಸರ್ಕಾರದ ವಿವಿಧ ಇಲಾಖೆಗಳು, ನಿಗಮ, ಮಂಡಳಿಗಳು ಕಾಮಗಾರಿಗಳನ್ನು ಮಾಡಲು ಮತ್ತು ಸೇವೆಗಳನ್ನು ಪಡೆಯಲು ಆರು ತಿಂಗಳಿನಿಂದ ಟೆಂಡರ್‌ಗಳನ್ನು ಕರೆದು ಕಾಮಗಾರಿ ಮತ್ತು ಸೇವೆಗಳ ಆದೇಶಗಳನ್ನು ನೀಡಿದೆ. ಈ ರೀತಿ ನೀಡಲಾಗಿರುವ ಮತ್ತು ನೀಡಲಾಗುತ್ತಿರುವ ಅಂದಾಜು ಪಟ್ಟಿ ₹1 ಕೋಟಿಗೂ ಮೀರುವ ಎಲ್ಲ ಟೆಂಡರ್‌ಗಳ ಬಗ್ಗೆ ಸಂಬಂಧಪಟ್ಟ ಇಲಾಖೆಗಳ ಸರ್ಕಾರದ ಕಾರ್ಯದರ್ಶಿಗಳು ಮತ್ತೊಮ್ಮೆ ಪರಾಮರ್ಶಿಸಿ, ವಿವರಗಳನ್ನು ಸಲ್ಲಿಸಬೇಕು' ಎಂದು ಸೂಚಿಸಿದ್ದಾರೆ.

ಅಷ್ಟೇ ಅಲ್ಲ, 'ಪ್ರತಿ ಕಾಮಗಾರಿಯ ವಿವರಗಳು, ಅಂದಾಜು ಮೊತ್ತ, ಆಡಳಿತಾತ್ಮಕ ಮಂಜೂರಾತಿ ನೀಡಿದ ದಿನ, ಟೆಂಡರ್ ನೀಡಿದ ದಿನ, ಪ್ರಸ್ತುತ ಕಾಮಗಾರಿಯ ಹಂತ ಈ ಐದು ಅಂಶಗಳನ್ನು ನೀಡಿರುವ ನಮೂನೆಯಲ್ಲಿ ಭರ್ತಿ ಮಾಡಿ ಸಲ್ಲಿಸಬೇಕು' ಎಂದೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.

ಮುಖ್ಯಮಂತ್ರಿಯ ಸೂಚನೆಯ ಬೆನ್ನಲ್ಲೆ, ಎಲ್ಲ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳಿಗೆ ಟಿಪ್ಪಣಿ ಕಳುಹಿಸಿರುವ ಮುಖ್ಯ ಕಾರ್ಯದರ್ಶಿ, 'ಮುಖ್ಯಮಂತ್ರಿ ತಿಳಿಸಿದ ನಮೂನೆಯಲ್ಲಿಯೇ ವಿವರಗಳನ್ನು ತಕ್ಷಣ ಮುಖ್ಯಮಂತ್ರಿ ಸಚಿವಾಲಯಕ್ಕೆ ಸಲ್ಲಿಸಬೇಕು' ಎಂದು ನಿರ್ದೇಶನ ನೀಡಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆ, ಜಲ ಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿರುವ ವಿಶ್ವೇಶ್ವರಯ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ಕಾವೇರಿ ನೀರಾವರಿ ನಿಗಮ, ಕೃಷ್ಣಾ ಭಾಗ್ಯ ಜಲ ನಿಗಮ, ಇಂಧನ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆ ₹1 ಕೋಟಿಗೂ ಮೀರಿದ ನೂರಾರು ಕಾಮಗಾರಿಗಳನ್ನು ಈಗಾಗಲೇ ಪಟ್ಟಿ ಮಾಡಲಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೇ 20ರಂದು ಪ್ರಮಾಣವಚನ ಸ್ವೀಕರಿಸಿದ್ದರು. ಆ ಬೆನ್ನಲ್ಲೇ (ಮೇ 22), ಬಿಜೆಪಿ ಸರ್ಕಾರದ ಅವಧಿಯಲ್ಲಿ ಇಲಾಖೆಗಳು ಮತ್ತು ಇಲಾಖೆಗಳ ಅಡಿಯಲ್ಲಿರುವ ನಿಗಮ, ಮಂಡಳಿ, ಪ್ರಾಧಿಕಾರಗಳ ಮೂಲಕ ಕೈಗೊಂಡಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮುಂದಿನ ಹಂತದ ಹಣ ಬಿಡುಗಡೆ ಮತ್ತು ಪಾವತಿಗಳನ್ನು ತಕ್ಷಣದಿಂದ ತಡೆಹಿಡಿಯುವಂತೆ ಆರ್ಥಿಕ ಇಲಾಖೆಗೆ ಮುಖ್ಯಮಂತ್ರಿ ಸೂಚಿಸಿದ್ದರು. ಅದರಂತೆ, ಇಲಾಖೆ ಕಾರ್ಯದರ್ಶಿ ಏಕರೂಪ್ ಕೌರ್ ಸುತ್ತೋಲೆ ಹೊರಡಿಸಿದ್ದರು. ಅದೇ ದಿನ, ಹಿಂದಿನ ಬಿಜೆಪಿ ಸರ್ಕಾರದ ಅವಧಿಯ ಕೊನೆಯಲ್ಲಿ ವಿವಿಧ ಇಲಾಖೆಗಳಲ್ಲಿ ಮಂಜೂರು ಮಾಡಲಾದ ಸುಮಾರು ₹20 ಸಾವಿರ ಕೋಟಿ ಮೌಲ್ಯದ ಕಾಮಗಾರಿಗಳು ಹಾಗೂ ಟೆಂಡರ್ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸುವಂತೆ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ನಿರ್ದೇಶನ ನೀಡಿದ್ದರು.

ಕೆಕೆಆರ್‌ಡಿಬಿಯಲ್ಲಿ ನೂರಾರು ಕಾಮಗಾರಿ

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) 2022–23ನೇ ಸಾಲಿನಲ್ಲಿ ₹ 3,000 ಕೋಟಿ ಅನುದಾನ ನೀಡಲಾಗಿದೆ. ಹಿಂದಿನ ವರ್ಷದಲ್ಲಿ ಉಳಿಕೆಯಾದ ಮೊತ್ತ ₹ 785 ಕೋಟಿ ಸೇರಿ, ಒಟ್ಟು ₹ 3,785 ಕೋಟಿ ವೆಚ್ಚಕ್ಕೆ ಲಭ್ಯವಿತ್ತು. ಟೆಂಡರ್ ಪಡೆದವರಿಗೆ, ಒಟ್ಟು ಮೊತ್ತದಲ್ಲಿ ಶೇ 40ರಷ್ಟು ಹಣವನ್ನು ಮುಂಗಡವಾಗಿ ನೀಡಲಾಗಿದ್ದು, ಆ ಮೊತ್ತ ಸುಮಾರು ₹ 600 ಕೋಟಿಯಷ್ಟಿದೆ. ₹ 1 ಕೋಟಿಗೂ ಮೀರಿದ ನೂರಾರು ಕಾಮಗಾರಿಗಳನ್ನು ಮಂಡಳಿಯ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿದೆ. ಎಲ್ಲ ಕಾಮಗಾರಿಗಳಿಗೆ ತಡೆ ನೀಡುವಂತೆ ಹೊಸ ಸರ್ಕಾರ ಸೂಚಿಸುತ್ತಿದ್ದಂತೆ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಮೂಲಕ ನಡೆಯಬೇಕಿದ್ದ ₹ 9 ಕೋಟಿಯ ಕಾಮಗಾರಿಗೆ ತಡೆ ನೀಡಲಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ತಾ.ಪಂ–ಜಿ.ಪಂ ಚುನಾವಣೆ: 4 ವಾರ ಸಮಯ ಕೋರಿದ ಸರ್ಕಾರ

ಬೆಂಗಳೂರು: 'ಅವಧಿ ಪೂರ್ಣಗೊಂಡ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಗೆ ನಿಗದಿತ ಸಮಯದಲ್ಲಿ ಚುನಾವಣೆ ನಡೆಸಲು ಅನುವು ಮಾಡಿಕೊಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ; ಹೈಕೋರ್ಟ್ ನಿರ್ದೇಶನ ಪಾಲಿಸಲು ರಾಜ್ಯ ಸರ್ಕಾರ ನಾಲ್ಕು ವಾರಗಳ ಕಾಲಾವಕಾಶ ನೀಡುವಂತೆ ಮನವಿ ಮಾಡಿದೆ.

ಈ ಸಂಬಂಧ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಶಶಿಕಿರಣ ಶೆಟ್ಟಿ ಹಾಜರಾಗಿ, 'ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು ಸಂಬಂಧಿಸಿದ ಇಲಾಖೆಗಳ ಸಚಿವರು ಈಗಷ್ಟೇ ಅಧಿಕಾರ ವಹಿಸಿಕೊಂಡಿದ್ದಾರೆ. ಜಿ.ಪಂ-ತಾ.ಪಂ ಚುನಾವಣೆ, ಕ್ಷೇತ್ರ ಮರುವಿಂಗಡಣೆ ಮತ್ತು ಮೀಸಲಾತಿ ನಿಗದಿಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ಆದೇಶದಲ್ಲಿನ ಅಂಶಗಳ ಬಗ್ಗೆ ಅಧ್ಯಯನ ನಡೆಸಬೇಕಿದೆ. ಹೀಗಾಗಿ, ಆದೇಶ ಪಾಲಿಸಲು ನಾಲ್ಕು ವಾರಗಳ ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದರು.

ಈ ಮನವಿಗೆ ರಾಜ್ಯ ಚುನಾವಣಾ ಆಯೋಗದ ಪರ ಹಾಜರಿದ್ದ ಹಿರಿಯ ವಕೀಲ ಕೆ.ಎನ್. ಫಣೀಂದ್ರ ಅವರೂ ಸಹಮತ ವ್ಯಕ್ತಪಡಿಸಿದರು. ಅಂತೆಯೇ, ಈ ಮನವಿಯನ್ನು ಪರಿಗಣಿಸಿದ ನ್ಯಾಯಪೀಠ, ವಿಚಾರಣೆಯನ್ನು ಜೂನ್ 28ಕ್ಕೆ ಮುಂದೂಡಿತು.

ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ಕೊರತೆ: ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸದೇ ಇರುವುದು ನಾಚಿಕೆಗೇಡಿನ ವಿಚಾರ' ಎಂದು ಹೈಕೋರ್ಟ್, ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ.

'ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ–2009 ಮತ್ತು ಈ ಕಾಯ್ದೆಯ ಅನುಸಾರದ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸದೇ ಇರುವ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ' ಎಂಬ ಹಿನ್ನೆಲೆಯಲ್ಲಿ ಹೈಕೋರ್ಟ್, ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ. ಬಿ. ವರಾಳೆ ನೇತೃತ್ವದ ವಿಭಾಗೀಯ ಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣದ ಅಮಿಕಸ್ ಕ್ಯೂರಿ ಹಿರಿಯ ವಕೀಲ ಕೆ. ಎನ್. ಫಣೀಂದ್ರ ಅವರು, 'ರಾಜ್ಯದಲ್ಲಿನ ಹಲವು ಸರ್ಕಾರಿ ಶಾಲೆಗಳಲ್ಲಿ ಕುಡಿಯುವ ನೀರು, ಹೆಣ್ಣು ಮಕ್ಕಳಿಗೆ ಶೌಚಾಲಯ, ಕಾಂಪೌಂಡ್, ಆಟದ ಮೈದಾನದ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಸೌಕರ್ಯಗಳು ಇಲ್ಲ' ಎಂಬ ಅಂಶಗಳನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಈ ವಿವರಣೆಗೆ ಆಘಾತ ವ್ಯಕ್ತಪಡಿಸಿದ ನ್ಯಾಯಪೀಠ, 'ವಿದ್ಯಾರ್ಥಿಗಳಿಗೆ ಕುಡಿಯುವ ನೀರು ಮತ್ತು ಹೆಣ್ಣು ಮಕ್ಕಳಿಗೆ ಶೌಚಾಲಯ ವ್ಯವಸ್ಥೆ ಇಲ್ಲ ಎಂಬುದನ್ನು ನಾವು ಊಹಿಸಲೂ ಆಗದು. ಈ ವಿಷಯದಲ್ಲಿ ಶಾಲೆಗಳ ಮೇಲ್ವಿಚಾರಕರು, ಮೇಲಧಿಕಾರಿಗಳು ಏನು ಮಾಡುತ್ತಿದ್ದಾರೆ. ಮೇಲ್ವಿಚಾರಕರು ಜಿಲ್ಲಾ ಕೇಂದ್ರದ ತಮ್ಮ ಕಚೇರಿಗಳಲ್ಲಿ ಕುಳಿತುಕೊಂಡಿದ್ದಾರೆಯೇ, ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆ ಏಕೆ ಮಾಡುತ್ತಿಲ್ಲ. ಇದು ನಮಗೆ ನಾಚಿಕೆಗೆ ಆಗುವ ವಿಚಾರ ಅಲ್ಲವೇ' ' ಎಂದು ರಾಜ್ಯ ಸರ್ಕಾರದ ಪರ ವಕೀಲರನ್ನು ಖಾರವಾಗಿ ಪ್ರಶ್ನಿಸಿತು.

'ಪ್ರಕರಣದಲ್ಲಿನ ಅರ್ಜಿದಾರರೂ ಆಗಿರುವ ಕಾತ್ಯಾಯಿನಿ ಚಾಮರಾಜ ಅವರು ನ್ಯಾಯಪೀಠಕ್ಕೆ ಸಲ್ಲಿಸಿರುವ ಮೆಮೊದ ಅನುಸಾರ, ಕಲಬುರಗಿಯಲ್ಲಿ 2,000 ಶಾಲೆಗಳ ಪೈಕಿ 22 ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. 126 ಶಾಲೆಗಳಲ್ಲಿ ಶೌಚಾಲಯವೇ ಇಲ್ಲ ಎಂದು ತಿಳಿಸಲಾಗಿದೆ. ಈ ಅರ್ಜಿ 2013ರಲ್ಲಿ ದಾಖಲಾಗಿದ್ದು ನಾವೀಗ 2023ರಲ್ಲಿ ಇದ್ದೇವೆ. ಹತ್ತು ವರ್ಷಗಳಾದರೂ ಪರಿಸ್ಥಿತಿ ಸುಧಾರಿಸಿಲ್ಲ, ಬದಲಿಗೆ ದಯನೀಯವಾಗಿದೆ' ಎಂದು ಅತೃಪ್ತಿ ವ್ಯಕ್ತಪಡಿಸಿತು.

'ಅಮಿಕಸ್ ಕ್ಯೂರಿ ಸಲ್ಲಿಸಿರುವ ಶಿಫಾರಸುಗಳಿಗೆ ಸಂಬಂಧಿಸಿದಂತೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಆಕ್ಷೇಪಣೆ ಸಲ್ಲಿಸಿ' ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ಜೂನ್ 15ಕ್ಕೆ ಮುಂದೂಡಿದೆ.

ಚಕ್ರತೀರ್ಥ ಸಮಿತಿ ಮಾಡಿದ್ದೇನು?

ರಾಜ್ಯದಲ್ಲಿ ಸರ್ಕಾರ ಬದಲಾಗುತ್ತಿದ್ದಂತೆಯೇ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿಯು ಮಾಡಿದ್ದ ಪಠ್ಯ ಪರಿಷ್ಕರಣೆ ಯನ್ನು ಕೈಬಿಟ್ಟು, ಬಂಡಾಯ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ ಸಿದ್ಧಪಡಿಸಿದ್ದ ಪಠ್ಯವನ್ನೇ ಪುನಃ ಜಾರಿಗೊಳಿಸಬೇಕು ಎಂಬ ಕೂಗು ಕೇಳಿಬರುತ್ತಿದೆ

2019ರಲ್ಲಿ ಅಧಿಕಾರ ಹಿಡಿದ ಬಿಜೆಪಿ ಸರ್ಕಾರ ಪಠ್ಯ ಪುಸ್ತಕಗಳಲ್ಲಿ 'ಲೋಪ'ಗಳಿವೆ ಎಂದು ಪ್ರತಿಪಾದಿಸಿತ್ತು. ಅಲ್ಲದೇ 1ರಿಂದ 10ನೇ ತರಗತಿಯ ಭಾಷಾ ವಿಷಯಗಳು, ಪರಿಸರ ಅಧ್ಯಯನ ಹಾಗೂ 6ರಿಂದ 10ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಗಳಲ್ಲಿ ಇರಬಹುದಾದ ಸೂಕ್ಷ್ಮ–ಸಂಕೀರ್ಣ ವಿಷಯಗಳನ್ನು ಪರಿಶೀಲಿಸಿ ಒಂದು ತಿಂಗಳಲ್ಲಿ ವರದಿ ನೀಡುವಂತೆ 2021ರಲ್ಲಿ ರೋಹಿತ್ ಚಕ್ರತೀರ್ಥ ನೇತೃತ್ವದಲ್ಲಿ ಸಮಿತಿ ರಚಿಸಿತ್ತು.

ಈ ಸಮಿತಿಗೆ ಪಠ್ಯ ಪರಿಷ್ಕರಣೆಯ ಅಧಿಕಾರ ಇರಲಿಲ್ಲ. ಪರಿಷ್ಕರಣೆ ಮಾಡಬೇಕಾದರೆ ವಿವಿಧ ಹಂತಗಳಲ್ಲಿ ಅಧ್ಯಯನ, ತಜ್ಞರ ಸಲಹೆ, ಹಲವು ಸುತ್ತಿನ ಸಭೆಗಳನ್ನು ನಡೆಸುವ ಸುದೀರ್ಘ ಕಾಲಾವಧಿಯ ಪ್ರಕ್ರಿಯೆ ನಡೆಸಬೇಕಿತ್ತು. ಅದು ಯಾವುದನ್ನೂ ಮಾಡದೇ, ಕೆಲವು ಪಠ್ಯಗಳನ್ನು ಕೈಬಿಟ್ಟು, ಕೆಲವನ್ನು ಸೇರ್ಪಡೆ ಮಾಡಿ ಒಂದೇ ವರ್ಷದಲ್ಲಿ ವರದಿ ನೀಡಿತ್ತು. ಪಠ್ಯಪುಸ್ತಕ ಮುದ್ರಣಗೊಂಡ ಬಳಿಕವಷ್ಟೇ, ಪರಿಶೀಲನಾ ಸಮಿತಿಗೆ ಪರಿಷ್ಕರಣೆಯ ಅಧಿಕಾರ ನೀಡಿದ ಘಟನೋತ್ತರ ಅನುಮೋದನೆ ನೀಡಲಾಗಿತ್ತು. ಶಿಕ್ಷಕರು, ಪೋಷಕರು ಹಾಗೂ ಆಸಕ್ತರ ಮುಂದೆ ಚರ್ಚೆಗೆ ಅವಕಾಶವನ್ನೇ ಕೊಡದೇ, ಪಠ್ಯಪುಸ್ತಕ ಮುದ್ರಣಕ್ಕೆ ರಹಸ್ಯವಾಗಿ ಆದೇಶ ನೀಡಿದ್ದು ವಿವಾದಕ್ಕೆ ಕಾರಣ ಆಗಿತ್ತು.

'ಬರಗೂರು ಸಮಿತಿಯ ಪಠ್ಯವನ್ನೇ ಮುಂದುವರಿಸಿ'

ಹಿಂದಿನ ಸರ್ಕಾರದ ಅವಧಿಯಲ್ಲಿ ರೂಪಿಸಿದ್ದ ಸಂವಿಧಾನ ವಿರೋಧಿ ಪಠ್ಯಪುಸ್ತಕಗಳನ್ನು ತಕ್ಷಣ ತಡೆ ಹಿಡಿದು, ಹಿಂದೆ ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆಯ ಸಮಿತಿ ಸಿದ್ಧಪಡಿಸಿದ್ದ ಪಠ್ಯಪುಸ್ತಕಗಳನ್ನೇ ಮುಂದುವರಿಸಬೇಕು ಎಂದು 'ಸಮಾನ ಮನಸ್ಕರ ಒಕ್ಕೂಟ' ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದೆ.

ಮುಖ್ಯಮಂತ್ರಿಯವರನ್ನು ಸೋಮವಾರ ಭೇಟಿ ಮಾಡಿದ ಒಕ್ಕೂಟದ ನಿಯೋಗ ಹತ್ತಾರು ಸಲಹೆಗಳಿರುವ ಪತ್ರವನ್ನು ನೀಡಿದೆ. ಒಕ್ಕೂಟದ ಅಧ್ಯಕ್ಷ ಎಸ್.ಜಿ.ಸಿದ್ದರಾಮಯ್ಯ,ಕೆ.ಮರುಳಸಿದ್ದಪ್ಪ, ಬಂಜಗೆರೆ ಜಯಪ್ರಕಾಶ್, ಎಸ್. ಜಾಫೆಟ್ ಮೊದಲಾದವರಿದ್ದರು.

'ಜಾತಿ ಗರ್ವಾಂಧತೆಯ ಹೊಲಸು ತುಂಬಿದ ಪಠ್ಯಪುಸ್ತಕಗಳನ್ನು ಕೂಡಲೇ ಹಿಂದಕ್ಕೆ ಪಡೆಯಬೇಕು. ತಜ್ಞರ ಸಮಿತಿ ರಚಿಸಿ, ಹೊಸ ಪಠ್ಯಪುಸ್ತಕಗಳನ್ನು ರೂಪಿಸಬೇಕು. ಅದಕ್ಕೆ ಸಮಯ ಇಲ್ಲದಿದ್ದರೆ ಹಿಂದಿನ ಪಠ್ಯಗಳನ್ನೇ ಈ ವರ್ಷವೂ ಬೋಧಿಸಬೇಕು. ಎನ್‌ಇಪಿ ರದ್ದುಪಡಿಸಿ, ಹೊಸ ಶಿಕ್ಷಣ ವ್ಯವಸ್ಥೆ ರೂಪಿಸಬೇಕು' ಎಂದು ಅವರು ಕೋರಿದ್ದಾರೆ.

ಪ್ರಮಾದದ ಆರೋಪ

- ಹತ್ತನೇ ತರಗತಿ ಪಠ್ಯ ಪುಸ್ತಕದಲ್ಲಿ ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ್ ಹೆಡಗೇವಾರ್ ಅವರ ಭಾಷಣ ಸೇರ್ಪಡೆ. ಲಂಕೇಶ್ ಅವರ 'ಮೃಗ ಮತ್ತು ಸುಂದರಿ' ಸೇರಿದಂತೆ ಹಲವು ಪಠ್ಯಗಳನ್ನು ಕೈಬಿಟ್ಟು ಶಿವಾನಂದ ಕಳವೆ ಅವರ 'ಸ್ವದೇಶಿ ಸೂತ್ರದ ಸರಳ ಹಬ್ಬ' ಮತ್ತು ಎಂ. ಗೋವಿಂದ ಪೈ ಅವರ 'ನಾನು ಪ್ರಾಸ ಬಿಟ್ಟ ಕಥೆ', ವಿದ್ವಾಂಸ ದಿವಂಗತ ಬನ್ನಂಜೆ ಗೋವಿಂದಾಚಾರ್ಯರ 'ಶುಕನಾಶನ ಉಪದೇಶ' ಮತ್ತು ಶತಾವಧಾನಿ ಆರ್. ಗಣೇಶ್ ಅವರ 'ಶ್ರೇಷ್ಠ ಭಾರತೀಯ ಚಿಂತನೆಗಳು' ಸೇರಿಸಲಾಗಿತ್ತು.
- ಸಾಮಾಜಿಕ ಕ್ರಾಂತಿಯ ಹರಿಕಾರ ಬ್ರಹ್ಮಶ್ರೀ ನಾರಾಯಣ ಗುರುಗಳ ಜೀವನ ಸಾಧನೆ ಪರಿಚಯಿಸುವ ಸುದೀರ್ಘ ಪಾಠವನ್ನು ಕತ್ತರಿಸಿ, ಒಂದು ಪ್ಯಾರಾಕ್ಕೆ ಇಳಿಸಲಾಗಿತ್ತು. ಜತೆಗೆ ಈ ಪಾಠವನ್ನು ಸಮಾಜ ವಿಜ್ಞಾನದಿಂದ ತೆಗೆದು, ಕನ್ನಡ ವಿಷಯಕ್ಕೆ ಸೇರಿಸಲಾಗಿತ್ತು. 12ನೇ ಶತಮಾನದ ಜಗಜ್ಯೋತಿ ಬಸವೇಶ್ವರ, ದಾಸಶ್ರೇಷ್ಠ ಕನಕದಾಸರು, ಡಾ. ಬಿ.ಆರ್. ಅಂಬೇಡ್ಕರ್, ರಾಷ್ಟ್ರ ಕವಿ ಕುವೆಂಪು ಅವರ ಕುರಿತ ವಿಷಯಗಳಲ್ಲೂ ಹಲವು ಅಂಶಗಳನ್ನು ಕೈಬಿಟ್ಟು, ಕೆಲವು ವಿಷಯಗಳನ್ನು ತಿದ್ದುಪಡಿ ಮಾಡುವ ಮೂಲಕ ಯಡವಟ್ಟು ಮಾಡಲಾಗಿತ್ತು.
- ಹತ್ತನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿದ್ದ ವಿಚಾರವಾದಿ ಲೇಖಕ ಜಿ.ರಾಮಕೃಷ್ಣ ಅವರ 'ಭಗತ್ ಸಿಂಗ್' ಪಾಠವನ್ನು ಕೈಬಿಡಲಾಗಿತ್ತು. 'ಯುವ ಬ್ರಿಗೇಡ್'ನ ಚಕ್ರವರ್ತಿ ಸೂಲಿಬೆಲೆ ಅವರು ಬರೆದಿರುವ 'ತಾಯಿ ಭಾರತಿಯ ಅಮರಪುತ್ರರು' ಪಾಠವನ್ನೂ ಸೇರಿಸಲಾಗಿತ್ತು.

ಆರ್‌ಟಿಐ ಕಾರ್ಯಕರ್ತ ಸಾವು: ಇಬ್ಬರು ಪೊಲೀಸರ ಅಮಾನತು

ದಾವಣಗೆರೆ: ಪೊಲೀಸರ ವಶದಲ್ಲಿದ್ದಾಗ ಆರ್‌ಟಿಐ ಕಾರ್ಯಕರ್ತ ಹರೀಶ್ ಹಳ್ಳಿ ಅನುಮಾನಾಸ್ಪದವಾಗಿ ಮೃತಪಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪದ ಹಿನ್ನೆಲೆಯಲ್ಲಿ ಗಾಂಧಿನಗರ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಕೃಷ್ಣಪ್ಪ ಹಾಗೂ ಕಾನ್‌ಸ್ಟೆಬಲ್ ದೇವರಾಜ್ ಅವರನ್ನು ಅಮಾನತು ಮಾಡಲಾಗಿದೆ.

ನಿವೇಶನಗಳನ್ನು ತಮ್ಮ ಹೆಸರಿಗೆ ನೋಂದಣಿ ಮಾಡಿಸಿಕೊಳ್ಳಲು ನಕಲಿ ದಾಖಲೆ ಸೃಷ್ಟಿಸಿದ ಆರೋಪದಡಿ ದಾಖಲಾಗಿದ್ದ ಪ್ರಕರಣದ ವಿಚಾರಣೆಗಾಗಿ ಪೊಲೀಸರು ಹರೀಶ್ ಹಳ್ಳಿ ಅವರನ್ನು ಭಾನುವಾರ ತಡರಾತ್ರಿ ಕಾಕನೂರಿನಲ್ಲಿ ವಶಕ್ಕೆ ಪಡೆದು ಕಾರಿನಲ್ಲಿ ದಾವಣಗೆರೆಗೆ ಕರೆದುಕೊಂಡು ಬರುತ್ತಿದ್ದರು. ತೋಳಹುಣಸೆ ಬಳಿ ಬಂದಾಗ ಹರೀಶ್ ಅವರು ತಪ್ಪಿಸಿಕೊಂಡು ಮೇಲ್ಸೇತುವೆಯಿಂದ ಜಿಗಿದು ಸರ್ವೀಸ್ ರಸ್ತೆಗೆ ಬಿದ್ದಿದ್ದರಿಂದ ಗಾಯಗೊಂಡು ಮೃತಪಟ್ಟಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದರು. ತಮ್ಮ ಪತಿಯನ್ನು ಪೊಲೀಸರೇ ಕೊಲೆ ಮಾಡಿದ್ದಾರೆ ಎಂದು ಹರೀಶ್ ಅವರ ಪತ್ನಿ ಕೆ.ಆರ್. ಲತಾ ದೂರು ನೀಡಿದ್ದರು. ಸದ್ಯಕ್ಕೆ ಇಬ್ಬರು ಪೊಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದ್ದು, ವಿಚಾರಣೆ ಮಾಡಲಾಗುತ್ತಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕೆ.ಅರುಣ್ ತಿಳಿಸಿದರು.

ತನಿಖೆ ಆರಂಭಿಸಿದ ಸಿಐಡಿ: ಪ್ರಕರಣದ ತನಿಖೆಯನ್ನು ಸಿಐಡಿ ಸೋಮವಾರ ಆರಂಭಸಿದೆ. ಡಿಎಸ್‌ಪಿ ಹುದ್ದೆಯ ಅಧಿಕಾರಿ ನೇತೃತ್ವದ ನಾಲ್ವರನ್ನು ಒಳಗೊಂಡಿರುವ ತಂಡವು ದಾವಣಗೆರೆಯಲ್ಲಿ ಘಟನೆ ನಡೆದ ಸ್ಥಳ ಪರಿಶೀಲಿಸಿತು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್
ನಂ. 75, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಮರಳಿ ಶಾಲೆಗೆ... ಬೇಸಿಗೆ ರಜೆ ಮುಗಿಸಿ ಸಂಭ್ರಮದಿಂದಲೇ ಶಾಲೆಗೆ ಬಂದ ವಿದ್ಯಾರ್ಥಿಗಳು ದಾವಣಗೆರೆಯ ಸಿದ್ಧಗಂಗಾ ಶಾಲೆಯ ಆವರಣದಲ್ಲಿ ಸೋಮವಾರ ಲವಲವಿಕೆಯಿಂದ ಕಂಡು ಬಂದಿದ್ದು ಹೀಗೆ –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಸುಳ್ಳು ಮೊಕದ್ದಮೆ ವಾಪಸ್– ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ನಾಡಿನ ಸೌಹಾರ್ದ ಮತ್ತು ಜಾತ್ಯತೀತ ಪರಂಪರೆಯ ರಕ್ಷಣೆಯ ವಿಚಾರದಲ್ಲಿ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ದ್ವೇಷ ರಾಜಕಾರಣವನ್ನು ಬಲಿ ಹಾಕಿ, ಭಯದ ವಾತಾವರಣವನ್ನು ನಿವಾರಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಸಾಹಿತಿಗಳು, ಬರಹಗಾರರು ಮತ್ತು ವಿವಿಧ ಜನಪರ ಸಂಘಟನೆಗಳ ಮುಖ್ಯಸ್ಥರ ಜತೆ ಸೋಮವಾರ ನಡೆದ ಸಭೆಯಲ್ಲಿ ಅವರು ಈ ಭರವಸೆ ನೀಡಿದರು.

ಸಾಹಿತಿಗಳು, ಬರಹಗಾರರು ನೀಡಿದ ಮನವಿ ಸ್ವೀಕರಿಸಿದ ಮುಖ್ಯಮಂತ್ರಿ, 'ಮನವಿಯಲ್ಲಿರುವ ಎಲ್ಲ ಸಂಗತಿಗಳನ್ನು ಗಂಭೀರವಾಗಿ ಪರಿಗಣಿಸುತ್ತೇನೆ' ಎಂದರು. 'ಮತೀಯ ಗೂಂಡಾಗಿರಿ, ದ್ವೇಷದ ರಾಜಕಾರಣ, ತೇಜೋವಧೆ ಮಾಡುವ ಟ್ರೋಲ್‌ಗಳು ಮತ್ತು ಸಾಹಿತಿಗಳಿಗೆ ಬೆದರಿಕೆ ಹಾಕುವವರ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳುವಂತೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಈಗಾಗಲೇ ಖಡಕ್ ಸೂಚನೆ ನೀಡಿದ್ದೇನೆ ಎಂದರು.

ಹಿಜಾಬ್: ಆದೇಶ ಪರಿಷ್ಕರಣೆಗೆ ಮನವಿ

ಶಿಕ್ಷಣ ಸುಧಾರಣೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಏನೆಲ್ಲ ಕ್ರಮ ಕೈಗೊಳ್ಳಬೇಕು ಎಂದು 'ಸಮಾನ ಮನಸ್ಕರ ಒಕ್ಕೂಟ' ಮುಖ್ಯಮಂತ್ರಿಗೆ ನೀಡಿದ ಸಲಹೆಯಲ್ಲಿ ವಿವರಿಸಿದೆ.

- ಹಿಜಾಬ್ ವಿವಾದದಿಂದ ಸಾವಿರಾರು ಹೆಣ್ಣುಮಕ್ಕಳು ಶಿಕ್ಷಣ ವಂಚಿತರಾಗಿದ್ದು, ಸಮವಸ್ತ್ರ ಕುರಿತ ಆದೇಶ ಪರಿಷ್ಕರಿಸಬೇಕು
- ಸಂವಿಧಾನ ವಿರೋಧಿ, ಕೋಮುವಾದಿ ಪಠ್ಯಪುಸ್ತಕಕ್ಕೆ ತಕ್ಷಣ ತಿದ್ದುಪಡಿ ಮಾಡಿ, ಪರಿಷ್ಕರಿಸಬೇಕು
- ರಾಷ್ಟ್ರೀಯ ಶಿಕ್ಷಣ ನೀತಿ ಹಿಂಪಡೆದು, ಸಮ ಸಮಾಜಕ್ಕಾಗಿ ಸಮಾನ ಶಿಕ್ಷಣ ಆಶಯ ಸಾಕಾರಗೊಳಿಸಬೇಕು
- ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡುವ ಕುರಿತ ಸರ್ಕಾರಿ ಆದೇಶ ಹಿಂಪಡೆಯಬೇಕು
- ರದ್ದಾಗಿರುವ ವಿದ್ಯಾರ್ಥಿವೇತನ ಮರು ಜಾರಿಗೊಳಿಸಬೇಕು
- ಸಾಂಸ್ಕೃತಿಕ ಪ್ರತಿಷ್ಠಾನಗಳಲ್ಲಿ ಪ್ರತಿಭಾವಂತರಿಗೆ ಅವಕಾಶ ನೀಡಬೇಕು
- ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಅಧ್ಯಯನ ಸಮಿತಿಯ ವರದಿಯ ಶಿಫಾರಸುಗಳನ್ನು ಜಾರಿ ಮಾಡಬೇಕು.
- ಕನ್ನಡ ಸಾಹಿತ್ಯ ಪರಿಷತ್ತಿನ ಸ್ವಾಯತ್ತತೆ ರಕ್ಷಿಸಲು ಮಸೂದೆ ಮಂಡಿಸಬೇಕು
- ಸಾಹಿತಿ, ಚಿಂತಕರಿಗೆ ನಿರಂತರವಾಗಿ ಬೆದರಿಕೆ ಪತ್ರ ಬರೆಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು
- ವಿಶ್ವವಿದ್ಯಾಲಯಗಳ ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್‌ಗಳಲ್ಲಿ ನಿರ್ದಿಷ್ಟ ಸಮುದಾಯದವರು ಮಾತ್ರ ನೇಮಕಗೊಳ್ಳುವುದಕ್ಕೆ ಕಡಿವಾಣ ಹಾಕಬೇಕು

ಭಾರಿ ಮಳೆ–ಗಾಳಿಗೆ ನೆಲಕಚ್ಚಿದ ಮರಗಳು, ವಿದ್ಯುತ್ ಕಂಬಗಳು

ಸಿಡಿಲಿಗೆ ನಾಲ್ವರ ಸಾವು; ಜಾನುವಾರು ಬಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವೆಡೆ ಸೋಮವಾರ ಗುಡುಗು–ಸಿಡಿಲು ಸಹಿತ ಭಾರಿ ಗಾಳಿ ಮಳೆಯಾಗಿದೆ. ಪ್ರತ್ಯೇಕ ಸ್ಥಳಗಳಲ್ಲಿ ಸಿಡಿಲು ಬಡಿದು ಕುರಿಗಾಯಿ ಮಹಿಳೆ ಸೇರಿ ನಾಲ್ವರು ರೈತರು ಮೃತಪಟ್ಟಿದ್ದಾರೆ. ಹಲವು ಜಾನುವಾರುಗಳೂ ಬಲಿಯಾಗಿವೆ.

ಕಲಬುರಗಿ ಜಿಲ್ಲೆಯ ಅಫಜಲಪುರದ ರೇವೂರ (ಬಿ) ಗ್ರಾಮದ ದರ್ಗಾ ಬಳಿ ಬೇವಿನ ಮರದ ಕೆಳಗೆ ನಿಂತಿದ್ದ ಮಾಳಪ್ಪ ದತ್ತಪ್ಪ ಪೂಜಾರಿ (45) ಸಿಡಿಲಿಗೆ ಸಿಕ್ಕಿ ಮೃತಪಟ್ಟಿದ್ದಾರೆ.

ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಕಿರಿಶ್ಯಾಳದಲ್ಲಿ ದ್ಯಾಮಣ್ಣ ಸಿದ್ದಪ್ಪ ಸೆರೆಕಾರ (20), ಬಳ್ಳಾರಿ ತಾಲ್ಲೂಕಿನ ಕುಂಟನಹಾಳ್‌ನಲ್ಲಿ ರೈತ ಪೊಂಪಣ್ಣ ಅವರು ತಮ್ಮ ಜಮೀನುಗಳಲ್ಲಿ ಕೆಲಸ ಮಾಡುತ್ತಿದ್ದಾಗ ಸಂಜೆ ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ.

ಶಿವಮೊಗ್ಗದ ವಿನೋಬ ನಗರದ ಆಶ್ರಯ 'ಬಿ' ಬಡಾವಣೆಯ ನಿವಾಸಿ ಲಕ್ಷ್ಮೀಬಾಯಿ (28) ಅವರು ಕುರಿಗಳಿಗೆ ಮೇವು ತರಲು ಹೋಗಿದ್ದಾಗ ಸಂಜೆ ಸಿಡಿಲು ಬಡಿದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಫಜಲಪುರ ತಾಲ್ಲೂಕಿನ ಮಣೂರ ಗ್ರಾಮದ ಹೊಲದಲ್ಲಿ ರೈತ ಬಸವರಾಜ ಹೂಗಾರ ಎಂಬುವವರು ಕಟ್ಟಿದ್ದ ಎರಡು ಎತ್ತುಗಳು ಸಿಡಿಲಿಗೆ ಬಲಿಯಾಗಿವೆ.

ಕೆಆರ್‌ಎಸ್ ಬೃಂದಾವನದ ದೋಣಿ ವಿಹಾರಕ್ಕೆ ತೆರಳುವ ಮಾರ್ಗದಲ್ಲಿ ಮರವೊಂದು ಬೇರು ಸಹಿತ ಮುರಿದು ಬಿದ್ದಿತ್ತು

ಕೂಡ್ಲಿಗಿ ತಾಲ್ಲೂಕಿನ ಅರ್ಜುನ ಚಿನ್ನನಹಳ್ಳಿಯಲ್ಲಿ ಎರಡು ಎತ್ತು ಹಾಗೂ ಒಂದು ಹಸು, ಕಾನಹೊಸಹಳ್ಳಿ ಹೋಬಳಿ ವ್ಯಾಪ್ತಿಯ ಸಕಲಾಪುರಹಟ್ಟಿಯಲ್ಲಿ ಐದು ಕುರಿ, ಎರಡು ಟಗರು ಸಿಡಿಲು ಬಡಿದು ಸತ್ತಿವೆ. ಪಟ್ಟಣದ ಕೊಲುಮೆಹಟ್ಟಿ ಸರ್ಕಾರಿ ಶಾಲೆಯ ಬಳಿ ವಿದ್ಯುತ್ ಕಂಬದ ಮೇಲೆ ಮರಬಿದ್ದು, ಶಾಲಾ ಕಾಂಪೌಂಡ್‌ಗೆ ಹಾನಿಯಾಗಿದೆ.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಹೊಸಬೀಡು ಗ್ರಾಮ ವನಿತಾ ನಾಗರಾಜು ಅವರ ಮನೆಗೆ ಸಿಡಿಲು ಬಡಿದು ವಿದ್ಯುತ್ ಉಪಕರಣಗಳು ಹಾನಿಗೀಡಾಗಿವೆ.

ಶಿವಮೊಗ್ಗ ನಗರ, ಸೊರಬ ಹಾಗೂ ರಿಪ್ಪನ್‌ಪೇಟೆಯಲ್ಲಿ ಆಲಿಕಲ್ಲು ಮಳೆಯಾಗಿದೆ. ಶಿವಮೊಗ್ಗ ನಗರದ ಮ್ಯಾಕ್ಸ್ ಆಸ್ಪತ್ರೆಯ ಬಳಿ ಮರ ಬಿದ್ದು ಎರಡು ಕಾರು ಜಖಂಗೊಂಡಿವೆ. ಭಾರಿ ಗಾಳಿ ಮಳೆಗೆ ನಗರದ ಹಲವೆಡೆ ವಿದ್ಯುತ್ ಕಂಬ, ಮರಗಳು ನೆಲಕ್ಕುರುಳಿವೆ.

ದಾವಣಗೆರೆ ನಗರದಲ್ಲಿ ರಾತ್ರಿ ಕೆಲ ಕಾಲ ಗುಡುಗು ಸಹಿತ ಮಳೆ ಸುರಿದಿದೆ. ನಗರ ಸಮೀಪದ ಕೊಡಗನೂರು ಗ್ರಾಮದಲ್ಲಿ ಬಿರುಗಾಳಿಗೆ ಅಡಿಕೆ ಮರಗಳು ನೆಲಕಚ್ಚಿವೆ. ಪಂಪ್‌ಹೌಸ್‌ನ ಚಾವಣಿ ಹಾರಿ ಹೋಗಿದೆ. ಮಾಯಕೊಂಡ, ಹರಿಹರ ತಾಲ್ಲೂಕಿನ ಕಡರನಾಯಕನಹಳ್ಳಿ ಸುತ್ತ ಸಾಧಾರಣ ಮಳೆಯಾಗಿದೆ.

ಹಾಸನ ಜಿಲ್ಲೆಯಲ್ಲಿ ಗುಡುಗು, ಸಿಡಿಲು ಸಹಿತ ಒಂದು ತಾಸಿಗೂ ಹೆಚ್ಚು ಸಮಯ ಧಾರಾಕಾರ ಮಳೆಯಾಗಿದೆ. ಕೆಲವೆಡೆ ಆಲಿಕಲ್ಲು ಮಳೆ ಸುರಿದಿದೆ. ಚಾಮರಾಜನಗರ ಜಿಲ್ಲೆಯ ಹನೂರು ಪಟ್ಟಣ ಸೇರಿ ಸುತ್ತಮುತ್ತಲ ಗ್ರಾಮಗಳಲ್ಲಿ ಗಾಳಿ ಸಹಿತ ಜೋರು ಮಳೆಯಾಯಿತು.

ಕೊಡಗು ಜಿಲ್ಲೆಯ ಗೋಣಿಕೊಪ್ಪಲು, ಪೊನ್ನಂಪೇಟೆ, ಹಾತೂರು, ಕಿರುಗೂರು, ಅತ್ತೂರು, ನಲ್ಲೂರು, ಹುದಿಕೇರಿ, ಬಿ.ಶೆಟ್ಟಿಗೇರಿ, ಕುಂದ ಭಾಗದಲ್ಲಿ ಉತ್ತಮ ಮಳೆಯಾಯಿತು.

ರಾಮನಗರ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆ ಸುರಿಯಿತು. ಜಿಲ್ಲಾ ಕೇಂದ್ರ ರಾಮನಗರದಲ್ಲಿ ಮಧ್ಯಾಹ್ನ ಅರ್ಧ ತಾಸಿಗೂ ಹೆಚ್ಚು ಕಾಲ ಮಳೆಯಾಯಿತು. ರಸ್ತೆಗಳಲ್ಲಿ ನೀರು ತುಂಬಿ ಹರಿಯಿತು. ಹೆದ್ದಾರಿಯಲ್ಲಿಯೂ ನೀರು ನಿಂತಿತ್ತು.

ಮಳೆ: ಕೆಆರ್‌ಎಸ್ ಪ್ರವೇಶ ಬಂದ್

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕೆಆರ್‌ಎಸ್ ಮತ್ತು ಸುತ್ತಮುತ್ತ ಸೋಮವಾರ ಸಂಜೆ ಬಿರುಗಾಳಿ, ಮಳೆಗೆ ಹತ್ತಾರು ಮರ ಮತ್ತು ವಿದ್ಯುತ್ ಕಂಬಗಳು ನೆಲಕಚ್ಚಿವೆ. ಇದರಿಂದ ಬೃಂದಾವನ ಪ್ರವೇಶ ನಿರ್ಬಂಧಿಸಿ, ಪ್ರವಾಸಿಗರನ್ನು ಪ್ರವೇಶದ್ವಾರದಿಂದಲೇ ವಾಪಸ್ ಕಳುಹಿಸಲಾಯಿತು.

ಬೃಂದಾವನದ ದೋಣಿ ವಿಹಾರ ಕೇಂದ್ರದ ಮಾರ್ಗ ಮತ್ತು ಪಾದಚಾರಿ ಮಾರ್ಗದಲ್ಲಿ ಮರಗಳು ಧರೆಗುರುಳಿವೆ. ಕಾವೇರಿ ನೀರಾವರಿ ನಿಗಮದ ಕಚೇರಿಯಿಂದ ಕೆಆರ್‌ಎಸ್ ಅಣೆಕಟ್ಟೆಯ ದಕ್ಷಿಣ ದ್ವಾರಕ್ಕೆ ತೆರಳುವ ಮಾರ್ಗದಲ್ಲಿ ವಿದ್ಯುತ್ ಕಂಬಗಳು ನೆಲಕ್ಕುರಳಿವೆ. ಕೆಲವೆಡೆ ವಿದ್ಯುತ್ ತಂತಿಗಳು ತುಂಡಾಗಿವೆ.

ಕೆಆರ್‌ಎಸ್ ಸಂತೆ ಮೈದಾನದಲ್ಲೂ ಮರಗಳು ಮುರಿದು ಬಿದ್ದಿವೆ. ಕೆಲವೆಡೆ ಮರಗಳು ರಸ್ತೆಗೆ ಅಡ್ಡಲಾಗಿ ಬಿದ್ದು, ವಾಹನ ಸಂಚಾರಕ್ಕೆ ತೊಡಕಾಗಿತ್ತು.

ಬಜಾರ್ ಲೈನ್‌ನ ಸರಸ್ವತಿ ಎಂಬುವವರ ಮನೆ ಚಾವಣಿ ಹಾರಿ ಹೋಗಿದೆ. ಕೆಆರ್‌ಎಸ್ ಗ್ರಾಮದಿಂದ ಪಾಂಡವಪುರ ತಾಲ್ಲೂಕಿನ ಕಟ್ಟೇರಿ ಮತ್ತು ಬೃಂದಾವನ ಸಂಪರ್ಕ ರಸ್ತೆಯಲ್ಲಿರುವ ಚೆಕ್‌ಪೋಸ್ಟ್‌ನ ವಾಹನಗಳ ಶುಲ್ಕ ಸಂಗ್ರಹ ಕೇಂದ್ರದ ಚಾವಣಿಯೂ ಜಖಂಗೊಂಡಿದೆ.

ರಾಜ್ಯದಲ್ಲಿ ಬಿರುಗಾಳಿ ಸಹಿತ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವು ಭಾಗಗಳಲ್ಲಿ ಮಂಗಳವಾರ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಒಳನಾಡು ಜಿಲ್ಲೆಗಳಲ್ಲಿ ಗಾಳಿಯ ವೇಗವು 40ರಿಂದ 50 ಕಿ.ಮೀ, ಕರಾವಳಿ ಜಿಲ್ಲೆಗಳಲ್ಲಿ ಗಾಳಿಯು 30ರಿಂದ 40 ಕಿ.ಮೀ ವೇಗದಲ್ಲಿ ಬೀಸಲಿದೆ. ರಾಜ್ಯದ ಕೆಲವೆಡೆ ಗರಿಷ್ಠ ಉಷ್ಣಾಂಶವು 2ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ. ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಮಂಗಳವಾರ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ.

ಸೋಮವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಕಳೆದ 24 ಗಂಟೆ ಅವಧಿಯಲ್ಲಿ ಚಿಕ್ಕಮಗಳೂರಿನ ಬಾಳೆಹೊನ್ನೂರಿನಲ್ಲಿ 5 ಕಿ.ಮೀ, ಬೆಳಗಾವಿಯ ಕಣಬುರ್ಗಿ, ಹಾವೇರಿಯ ಸವಣೂರು, ಕೊಡಗಿನ ಗೋಣಿಕೊಪ್ಪಲು, ಶ್ರೀಮಂಗಲದಲ್ಲಿ ತಲಾ 2 ಸೆಂ.ಮೀ, ಹಾವೇರಿ, ಬೆಳಗಾವಿ ನಗರ, ಪೊನ್ನಂಪೇಟೆ, ಮೂಡಿಗೆರೆಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ವಿದ್ಯಾರ್ಥಿ ಅನಿಸಿಕೆ

'ಪುಸ್ತಕ ಖರೀದಿಸಿದೆ'

'ಪ್ರಜಾವಾಣಿ' ನೀಡಿದ ವಿದ್ಯಾರ್ಥಿ ವೇತನವು ವಿದ್ಯಾಭ್ಯಾಸಕ್ಕೆ ಸಹಾಯವಾಯಿತು. ಪಿಯುಸಿ, ಸಿಇಟಿ, ನೀಟ್, ಜೆಇಇ ಪರೀಕ್ಷೆಗೆ ತಯಾರಿ ನಡೆಸಲು ಬೇಕಾದ ಪುಸ್ತಕಗಳು, ಸಮವಸ್ತ್ರ ಖರೀದಿಸಿದೆ. ಬಡವಿದ್ಯಾರ್ಥಿಗಳ ಜೀವನ ರೂಪಿಸಲು ಈ ವಿದ್ಯಾರ್ಥಿವೇತನ ಬಹಳ ಅನುಕೂಲವಾಗಿದೆ.

ಮೋನಿಶ್ ಗೌಡ ಎನ್.ಡಿ, ಬೆಂಗಳೂರು

ಸಂಗೀತ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಮೂರು ವರ್ಷಗಳ ಡಿಪ್ಲೊಮಾ ಕೋರ್ಸ್‌ಗೆ, ಚೆನ್ನೈನ 'ದಿ ಮ್ಯೂಸಿಕ್ ಅಕಾಡೆಮಿ ಮದ್ರಾಸ್' ಅರ್ಜಿಗಳನ್ನು ಆಹ್ವಾನಿಸಿದೆ.

ಈ ಕೋರ್ಸ್‌ನಲ್ಲಿ ವಾರ್ಷಿಕ ತಲಾ ಎರಡು ಸೆಮಿಸ್ಟರ್‌ಗಳು ಇರುತ್ತವೆ. ವಾರದಲ್ಲಿ ಐದು ದಿನ ಬೆಳಿಗ್ಗೆ 8ರಿಂದ ಮಧ್ಯಾಹ್ನ 12.30ರವರೆಗೆ ತರಗತಿಗಳು ನಡೆಯಲಿವೆ. 10 + 2 ತರಗತಿ ಉತ್ತೀರ್ಣ ಆಗಿರುವವರು ಮತ್ತು 18 ವರ್ಷದಿಂದ 30 ವರ್ಷದವರು ಈ ಕೋರ್ಸ್‌ಗೆ ಅರ್ಜಿ ಸಲ್ಲಿಸಬಹುದು. ಇ–ಮೇಲ್ ಮೂಲಕ ಅರ್ಜಿ ಸಲ್ಲಿಸಲು ಸಂಸ್ಥೆಯು ಕೋರಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 28112231 / 28115162. ಇ–ಮೇಲ್ ವಿಳಾಸ:music@musicacademymadras.com

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಮಕ್ಕಳಿಗೆ ಎಂಥ ಆಹಾರ ಬೇಕು ಎಂಬ ಅರಿವು ತುಂಬಾ ಮುಖ್ಯ

ಆಳ-ಅಗಲ
ಕ್ರೀಡಾ ಕ್ಷೇತ್ರದಲ್ಲಿ ಲೈಂಗಿಕ ದೌರ್ಜನ್ಯ ಆಂತರಿಕ ದೂರು ಸಮಿತಿಯೇ ಇಲ್ಲ
ಭೀಮಾ ಪಲ್ಸಸ್: ಬೇಕಿದೆ ಅನುದಾನ ಬಲ 8
ಮಣಿಪುರ: ಶಾ ವಾಸ್ತವ್ಯ- ಪರಿಸ್ಥಿತಿ ಅವಲೋಕನ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,846 ▲	18,598 ▲	₹61,800 (ಬೆಂಗಳೂರು)	₹72,900 (ಬೆಂಗಳೂರು)	82.64 ▼

ಮಕ್ಕಳ ಮನಸ್ಸಿಗೆ ವಿಷ ತುಂಬುವ ಪಠ್ಯಕ್ಕೆ ಅವಕಾಶವಿಲ್ಲ, ಲೋಪ ಸರಿಪಡಿಸುವೆವು: ಸಿದ್ದರಾಮಯ್ಯ

ಪಠ್ಯ 'ದೋಷ' ತಿದ್ದುವ ಇರಾದೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಬಿಜೆಪಿ ನೇತೃತ್ವದ ಸರ್ಕಾರ ಈ ಹಿಂದೆ ಪರಿಷ್ಕರಿಸಿ ಕತ್ತರಿ ಹಾಕಿದ್ದ ಪಠ್ಯವನ್ನು ಮಕ್ಕಳ ಪಾಠಕ್ಕೆ ಮತ್ತೆ ಸೇರಿಸಲು ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರ ತೀವ್ರ ಉತ್ಸುಕವಾಗಿದೆ. ಆದರೆ, ಪಠ್ಯ-ಪುಸ್ತಕಗಳು ಈಗಾಗಲೇ ಶಾಲೆಗಳನ್ನು ತಲುಪಿದ್ದು, ಬುಧವಾರದಿಂದ ತರಗತಿಗಳು ಸಹ ಪುನರಾರಂಭವಾಗಲಿವೆ. ಈ ಹಂತದಲ್ಲಿ ಮರುಪರಿಷ್ಕರಣೆಯನ್ನು ಅವಸರದಲ್ಲಿ ಮಾಡಲು ಸಾಧ್ಯವೇ ಎಂಬ ಚರ್ಚೆ ಶುರುವಾಗಿದೆ.

2019ರಲ್ಲಿ ಅಸ್ತಿತ್ವಕ್ಕೆ ಬಂದ ಬಿಜೆಪಿ ಸರ್ಕಾರದಲ್ಲಿ ಪ್ರಾಥಮಿಕ ಶಿಕ್ಷಣ ಸಚಿವರಾಗಿದ್ದ ಎಸ್. ಸುರೇಶ್‌ಕುಮಾರ್ ಅವರು, ಪಠ್ಯಪುಸ್ತಕ ಪರಿಶೀಲನೆಗಾಗಿ ಶಿಕ್ಷಣ ತಜ್ಞರೇ ಅಲ್ಲದ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದರು. ಬಳಿಕ, ಶಿಕ್ಷಣ ಸಚಿವರಾದ ಬಿ.ಸಿ. ನಾಗೇಶ್ ಅವರು, ಪಠ್ಯ ಪರಿಷ್ಕರಣೆ ಹೊಣೆಯನ್ನೂ ಆ ಸಮಿತಿಗೆ ವಹಿಸಿದ್ದರು. ಸಮಿತಿ ನೀಡಿದ್ದ ಸಲಹೆ ಆಧರಿಸಿ, ಪಠ್ಯಗಳನ್ನು ಪರಿಷ್ಕರಣೆ ಮಾಡಿ, ತರಾತುರಿಯಲ್ಲಿ ಮುದ್ರಣಕ್ಕೂ ಕಳುಹಿಸಲಾಗಿತ್ತು. ಇದು ತೀವ್ರ ವಿವಾದಕ್ಕೆ ಕಾರಣವಾಗಿತ್ತು. ಅನೇಕ ಲೇಖಕರು, ಸಾಹಿತಿಗಳು ತಮ್ಮ ಕವಿತೆ, ಲೇಖನಗಳನ್ನು ವಾಪಸ್ ಪಡೆದಿದ್ದರು. ವಿವಾದ ಭುಗಿಲೆದ್ದ ಅವಧಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದ ನಾಗೇಶ್, ಚಕ್ರತೀರ್ಥ ಅವರನ್ನು 'ಐಐಟಿ ಪ್ರೊಫೆಸರ್' ಎಂದು ಸಮರ್ಥಿಸಿಕೊಂಡಿದ್ದು ಅಪಹಾಸ್ಯಕ್ಕೆ ಈಡಾಗಿತ್ತು.

ಪಠ್ಯಪರಿಷ್ಕರಣೆಯನ್ನು ತೀವ್ರವಾಗಿ ಖಂಡಿಸಿದ್ದ ಅಂದಿನ ವಿರೋಧ ಪಕ್ಷ ಕಾಂಗ್ರೆಸ್, ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿತ್ತು. ಅಲ್ಲದೇ, ವೈಜ್ಞಾನಿಕ ಮನೋಭಾವ ಬೆಳೆಸುವ ಪಠ್ಯವನ್ನು ಸೇರಿಸಲಾಗುವುದು ಎಂದೂ ಪ್ರತಿಪಾದಿಸಿತ್ತು.

ಪಠ್ಯಪರಿಷ್ಕರಣೆಯನ್ನು ವಿರೋಧಿಸಿದ ಆಂದೋಲನದಲ್ಲಿ ಸಕ್ರಿಯರಾಗಿದ್ದ ಅನೇಕರು, ಚುನಾವಣೆ ವೇಳೆ ಸಮಾನ ಮನಸ್ಕರ ಒಕ್ಕೂಟವನ್ನು ರಚಿಸಿಕೊಂಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಸೋಮವಾರ ಭೇಟಿ ಮಾಡಿದ ಒಕ್ಕೂಟದ ಪ್ರಮುಖರಿದ್ದ ನಿಯೋಗ, ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ ಪರಿಷ್ಕರಿಸಿದ್ದ ಪಠ್ಯವನ್ನೇ ಮುಂದುವರಿಸುವಂತೆ ಮನವಿ ಮಾಡಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, 'ಮಕ್ಕಳ ಮನಸ್ಸಿಗೆ ವಿಷ ತುಂಬುವ ಪಠ್ಯಕ್ಕೆ ಅವಕಾಶ ನೀಡುವುದಿಲ್ಲ. ಪಠ್ಯ ಮತ್ತು ಪಾಠಗಳ ಮೂಲಕ ಮಕ್ಕಳ ಮನಸ್ಸನ್ನು ಕಲುಷಿತಗೊಳಿಸಲು ನಡೆಸಿರುವ ಕೃತ್ಯವನ್ನು ಕ್ಷಮಿಸಲು ಸಾಧ್ಯವಿಲ್ಲ. ಶೈಕ್ಷಣಿಕ ವರ್ಷ ಆರಂಭ ಆಗಿರುವುದರಿಂದ ಮಕ್ಕಳ ಶಿಕ್ಷಣಕ್ಕೆ ತೊಂದರೆ ಆಗದಂತೆ ಚರ್ಚಿಸಿ ಕ್ರಮ ಕೈಗೊಳ್ಳುತ್ತೇವೆ' ಎಂದು ಭರವಸೆ ನೀಡಿದ್ದಾರೆ.

ಶೇ 90ರಷ್ಟು ಪಠ್ಯ ಪುಸ್ತಕಗಳು ಈಗಾಗಲೇ ಶಾಲೆಯನ್ನು ತಲುಪಿವೆ. ಇದೇ 31ರ ಬುಧವಾರದಿಂದ ಶಾಲೆಗಳು ಆರಂಭವಾಗಲಿವೆ.

5ನೇ ಪುಟ ನೋಡಿ

ಶಾಲೆ ತಲುಪಿದ 3.40 ಕೋಟಿ ಪುಸ್ತಕ

'ರಾಜ್ಯದ ಸರ್ಕಾರಿ, ಅನುದಾನಿತ ಶಾಲೆಗಳ 57 ಲಕ್ಷ ಮಕ್ಕಳಿಗೆ (ಖಾಸಗಿ ಶಾಲೆಗಳನ್ನು ಹೊರತುಪಡಿಸಿ) 3.40 ಕೋಟಿಗೂ ಹೆಚ್ಚು ಪುಸ್ತಕಗಳು ಮುದ್ರಣಗೊಂಡಿವೆ. ಶೇ 90ರಷ್ಟು ಪುಸ್ತಕಗಳು ಶಾಲೆಗಳನ್ನು ತಲುಪಿವೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತ ಆರ್.ವಿಶಾಲ್ 'ಪ್ರಜಾವಾಣಿ'ಗೆ ತಿಳಿಸಿದರು.

'ಉಳಿದ ಪುಸ್ತಕಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿದ್ದು, ಒಂದೆರಡು ದಿನಗಳಲ್ಲಿ ವಿದ್ಯಾರ್ಥಿಗಳಿಗೆ ತಲುಪಲಿವೆ. ಶಾಲೆಗಳಿಗೆ ಸುರಕ್ಷಿತವಾಗಿ ತಲುಪಿಸಲು ಸಾಗಣೆ ವೆಚ್ಚವನ್ನೂ ಬಿಡುಗಡೆ ಮಾಡಲಾಗಿದೆ. ಮೇ 31ರಿಂದ ಅಧಿಕೃತವಾಗಿ ತರಗತಿಗಳೂ ಆರಂಭವಾಗಲಿವೆ' ಎಂದು ಅವರು ಹೇಳಿದರು.

45.05 ಲಕ್ಷ	12.59 ಲಕ್ಷ	44.19 ಲಕ್ಷ	3.40 ಕೋಟಿ
ಸರ್ಕಾರಿ ಶಾಲೆ ಮಕ್ಕಳು	ಅನುದಾನಿತ ಶಾಲೆ ಮಕ್ಕಳು	ಖಾಸಗಿ ಶಾಲೆ ಮಕ್ಕಳು	ಮುದ್ರಣಗೊಂಡ ಪಠ್ಯಪುಸ್ತಕಗಳು

ಸಾಧ್ಯಾಸಾಧ್ಯತೆಗಳು

- ಪಠ್ಯಪುಸ್ತಕಗಳು ಈಗಾಗಲೇ ಶಾಲೆಗಳನ್ನು ತಲುಪಿವೆ. ಈ ಹಂತದಲ್ಲಿ ವಾಪಸ್ ಪಡೆಯುವ ಬದಲು, ವಿವಾದಿತ ಪಾಠಗಳನ್ನು ಬೋಧನೆ ಮಾಡಬಾರದು ಮತ್ತು ಪರೀಕ್ಷೆಗೆ ಪರಿಗಣಿಸಬಾರದು ಎಂಬ ಸುತ್ತೋಲೆ ಹೊರಡಿಸಬಹುದು(ಬಿಜೆಪಿ ಸರ್ಕಾರ ಹೀಗೆ ಮಾಡಿತ್ತು)
- ಹೊಸ ಸಮಿತಿ ರಚಿಸಿ ಬಿಜೆಪಿ ಸರ್ಕಾರದ ಅವಧಿಯಲ್ಲಿನ ತಪ್ಪುಗಳನ್ನು ಸರಿಪಡಿಸಬೇಕಾದರೆ ಸಾಕಷ್ಟು ಸಮಯ ಹಿಡಿಯುತ್ತದೆ. ಅಷ್ಟು ಸಮಯ ಪಠ್ಯಪುಸ್ತಕಗಳನ್ನು ತಡೆಹಿಡಿಯುವುದು ಶೈಕ್ಷಣಿಕ ಪ್ರಗತಿಯ ದೃಷ್ಟಿಯಿಂದ ಅಸಮಂಜಸ ಕ್ರಮ ಎಂಬ ಸಲಹೆ ಕೇಳಿಬಂದಿದೆ
- ಎಲ್ಲ ಪಠ್ಯಪುಸ್ತಕಗಳು ಪರಿಷ್ಕರಣೆ ಮಾಡಿರಲಿಲ್ಲ. ತಿರುಚಿದ ಪಠ್ಯಗಳಿರುವ ಪುಸ್ತಕಗಳನ್ನು ಮಾತ್ರ ವಾಪಸ್ ಪಡೆದರೆ, ವೆಚ್ಚ ಹೆಚ್ಚಾಗದು ಎನ್ನುವ ವಾದವೂ ಇದೆ
- ಸಮಿತಿ ರಚಿಸಿ, ಮುಂದಿನ ಶೈಕ್ಷಣಿಕ ವರ್ಷದ ಹೊತ್ತಿಗೆ ಹೊಸ ಪಠ್ಯಪುಸ್ತಕಗಳನ್ನು ಪೂರೈಸುವ ಲೆಕ್ಕಾಚಾರವೂ ಸರ್ಕಾರದ ಮುಂದಿದೆ

ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಹಿಂದಿನ ಸರ್ಕಾರ ಮಾಡಿದ್ದ ಲೋಪಗಳನ್ನು ಸರಿಪಡಿಸುವ ಕುರಿತು ಮುಖ್ಯಮಂತ್ರಿ ನೇತೃತ್ವದಲ್ಲಿ ಶಿಕ್ಷಣ ತಜ್ಞರ ಜತೆ ಸಭೆ ನಡೆಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು
ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ

ಸಾಕಷ್ಟು ಪರಿಶೀಲನೆ ನಡೆಸಿಯೇ ಪಠ್ಯಪುಸ್ತಕ ಪರಿಷ್ಕರಣೆ ಮಾಡಲಾಗಿತ್ತು. ರೂಪಿಸಿದ ಪಠ್ಯ ಜಾರಿಗೆ ತರುವುದು, ಬಿಡುವುದು ಆಯಾ ಸರ್ಕಾರಗಳಿಗೆ ಬಿಟ್ಟ ವಿಷಯ
ವಿಠಲ್ ಪೋತೇದಾರ್
ಸದಸ್ಯ, ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ (ಬಿಜೆಪಿ ಸರ್ಕಾರದ ಅವಧಿ)

ಈಗಾಗಲೇ ಮುದ್ರಣವಾಗಿ ಬಿಇಒ ಕಚೇರಿ, ಶಾಲೆಗಳಿಗೆ ತಲುಪಿರುವ ಕಲುಷಿತ ಪುಸ್ತಕಗಳನ್ನು ಯಥಾವತ್ತಾಗಿ ವಿತರಿಸಬಾರದು. ಬದಲಾಗಿರುವ ಪ್ರಮುಖ ಪಾಠ ತೆಗೆದು ಹಾಕಿ ಸುತ್ತೋಲೆ ಹೊರಡಿಸಬೇಕು
ನಿರಂಜನಾರಾಧ್ಯ
ಪ್ರಗತಿ ಶಿಕ್ಷಣ ತಜ್ಞ

ರಾಷ್ಟ್ರಗೀತೆಗೆ ಅವಮಾನ ಮಾಡಿದ ಬರಗೂರು ಅವರಿಗೆ ಸರ್ಕಾರ ಮಣೆಹಾಕುತ್ತದೆ. ತಿರುಚಿದ್ದ ಇತಿಹಾಸವನ್ನು ಸರಿಪಡಿಸಿದ್ದ ಪಠ್ಯಪುಸ್ತಕಗಳನ್ನು ಮತ್ತೆ ಬದಲಾಯಿಸಿ, ಹೊಸ ಸರ್ಕಾರ ವೋಟ್ ಬ್ಯಾಂಕ್ ರಾಜಕಾರಣ ಮಾಡುತ್ತಿದೆ
ಬಿ.ಸಿ.ನಾಗೇಶ್, ಮಾಜಿ ಶಿಕ್ಷಣ ಸಚಿವ

ಜೂನ್ 1ಕ್ಕೆ ಅಧಿಕೃತ ತೀರ್ಮಾನ ಸಾಧ್ಯತೆ • ಇಂದು ಮತ್ತೊಂದು ಸುತ್ತಿನ ಸಭೆ

'ಗ್ಯಾರಂಟಿ': ಬೇಕು ₹ 52 ಸಾವಿರ ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆ ಹೊತ್ತಿನಲ್ಲಿ ಕಾಂಗ್ರೆಸ್ ನೀಡಿದ್ದ ಐದು 'ಗ್ಯಾರಂಟಿ' ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ವಾರ್ಷಿಕ ₹ 52,000 ಕೋಟಿ ಬೇಕಾಗಬಹುದು ಎಂದು ಹಣಕಾಸು ಇಲಾಖೆ ಅಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಾಥಮಿಕ ಅಂದಾಜು ಪಟ್ಟಿ ಸಲ್ಲಿಸಿದ್ದಾರೆ.

'ಗ್ಯಾರಂಟಿ' ಯೋಜನೆಗಳನ್ನು ಅನುಷ್ಠಾನ ಮಾಡಬೇಕಿರುವ ಆಹಾರ ಮತ್ತು ನಾಗರಿಕ ಪೂರೈಕೆ, ಇಂಧನ, ಜೀವನೋಪಾಯ, ಉದ್ಯಮಶೀಲತೆ ಮತ್ತು ಕೌಶಲಾಭಿವೃದ್ಧಿ, ಸಾರಿಗೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳು ಹಾಗೂ ಹಣಕಾಸು ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಮುಖ್ಯಮಂತ್ರಿಯವರು ಸೋಮವಾರ ಸಭೆ ನಡೆಸಿದರು. ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಕೂಡ ಸಭೆಯಲ್ಲಿದ್ದರು.

5ನೇ ಪುಟ ನೋಡಿ

ಯಾವ 'ಗ್ಯಾರಂಟಿ'ಗೆ ಎಷ್ಟು ಅನುದಾನ ಬೇಕು?

₹24,000 ಕೋಟಿ ಗೃಹ ಲಕ್ಷ್ಮಿಗೆ
ಮನೆಯ ಯಜಮಾನಿಗೆ ತಿಂಗಳಿಗೆ ₹ 2,000 ನೆರವು ನೀಡುವ ಯೋಜನೆಯನ್ನು ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳಿಗೆ ಸೀಮಿತವಾಗಿ ಅನುಷ್ಠಾನಕ್ಕೆ ತಂದರೂ ವರ್ಷಕ್ಕೆ ₹ 24,000 ಕೋಟಿ ಬೇಕಾಗುತ್ತದೆ. ಗ್ಯಾರಂಟಿ ಯೋಜನೆಗಳಲ್ಲೇ ಅತಿಹೆಚ್ಚು ವೆಚ್ಚದ ಕಾರ್ಯಕ್ರಮ ಇದಾಗಲಿದೆ

₹10,000 ಕೋಟಿ ಅನ್ನಭಾಗ್ಯಕ್ಕೆ
ಈ ಯೋಜನೆಯಡಿ 1.3 ಕೋಟಿ ಕುಟುಂಬಗಳು ಪ್ರಯೋಜನ ಪಡೆಯಲಿವೆ. ಸದ್ಯದ ಮಾಹಿತಿ ಪ್ರಕಾರ, ಈ ಕುಟುಂಬಗಳ 4.30 ಕೋಟಿ ಜನರಿಗೆ ತಿಂಗಳಿಗೆ ತಲಾ ಹತ್ತು ಕೆ.ಜಿ. ಆಹಾರ ಧಾನ್ಯ ವಿತರಿಸಬೇಕಿದೆ. ಇದಕ್ಕಾಗಿ ವರ್ಷಕ್ಕೆ ₹ 10,000 ಕೋಟಿ ವೆಚ್ಚವಾಗಲಿದೆ

₹12,038 ಕೋಟಿ ಗೃಹ ಜ್ಯೋತಿಗೆ
ಈ ಗ್ಯಾರಂಟಿಯಡಿ ಪ್ರತಿ ತಿಂಗಳಿಗೆ 200 ಯೂನಿಟ್ ಉಚಿತವಾಗಿ ಒದಗಿಸಬೇಕಿದೆ. 2.14 ಕೋಟಿಯಷ್ಟು ಗೃಹ ಬಳಕೆ ವಿದ್ಯುತ್ ಸಂಪರ್ಕಗಳು ರಾಜ್ಯದಲ್ಲಿವೆ. ಈ ಎಲ್ಲರಿಗೂ ಉಚಿತ ವಿದ್ಯುತ್ ಒದಗಿಸಿದರೆ ವಾರ್ಷಿಕ ₹ 12,038 ಕೋಟಿ ಹೊರೆ ಬೀಳಲಿದೆ

'ಶಕ್ತಿ'ಯೇ ಸವಾಲು
ಸರ್ಕಾರಿ ನಿಗಮಗಳ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸುವ 'ಶಕ್ತಿ' ಯೋಜನೆ ಅನುಷ್ಠಾನವೇ ಸರ್ಕಾರಕ್ಕೆ ಸವಾಲಾಗಿದೆ. ಉಚಿತ ಪ್ರಯಾಣಕ್ಕೆ ದೂರದ ಮಿತಿ ಅಳವಡಿಸುವ ಕುರಿತು ಅಂತಿಮ ತೀರ್ಮಾನ ಆಗಬೇಕಿದೆ. ಅಲ್ಲದೇ, ನಿತ್ಯವೂ ಪ್ರಯಾಣಿಕರ ಸಂಖ್ಯೆ ಒಂದೇ ರೀತಿ ಇರುವುದಿಲ್ಲ. ಹೀಗಾಗಿ ವೆಚ್ಚದ ಖಚಿತ ಅಂದಾಜು ಮಾಡುವುದು ಸಾಧ್ಯವಾಗುತ್ತಿಲ್ಲ ಎಂದು ಮೂಲಗಳು ತಿಳಿಸಿವೆ.

₹1,200 ಕೋಟಿ ಯುವನಿಧಿ
ಪ್ರಸಕ್ತ ವರ್ಷದ ಸಾಮಾನ್ಯ ಪದವೀಧರರಿಗೆ ಸೀಮಿತವಾಗಿ ಯವನಿಧಿ ಯೋಜನೆ ಜಾರಿಯಾದರೆ ವರ್ಷಕ್ಕೆ ₹ 1,200 ಕೋಟಿ ಬೇಕಾಗುತ್ತದೆ. ಆದರೆ, ಎಂಜಿನಿಯರಿಂಗ್ ಪದವೀಧರರು, ಸ್ನಾತಕೋತ್ತರ ಮತ್ತು ಪಿಎಚ್.ಡಿ ಪದವೀಧರರನ್ನು ಯೋಜನೆಯ ವ್ಯಾಪ್ತಿಗೆ ತಂದರೆ ವೆಚ್ಚ ಹೆಚ್ಚಾಗಬಹುದು ಎಂದು ಅಂದಾಜಿಸಲಾಗಿದೆ

ದೆಹಲಿ: ಬಾಲಕಿಯ ಬರ್ಬರ ಕೊಲೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯ ಜನನಿಬಿಡ ಶಹಬಾದ್ ಡೈರಿ ಪ್ರದೇಶದಲ್ಲಿ ಭಾನುವಾರ ರಾತ್ರಿ 16 ವರ್ಷದ ಬಾಲಕಿಗೆ ಸುಮಾರು 20 ಬಾರಿ ಚಾಕುವಿನಿಂದ ಇರಿಯಲಾಗಿದ್ದು, ಬಳಿಕ ಕಲ್ಲು ಎತ್ತಿ ಹಾಕಿ ಬರ್ಬರವಾಗಿ ಕೊಲೆ ಮಾಡಲಾಗಿದೆ. 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ಟಿಪ್ಪು ಗನ್ ರಫ್ತಿಗೆ ನಿಷೇಧ



ಲಂಡನ್ (ಪಿಟಿಐ): 'ಮೈಸೂರು ಹುಲಿ' ಟಿಪ್ಪು ಸುಲ್ತಾನನಿಗಾಗಿಯೇ ಭಾರತದಲ್ಲಿ ವಿಶೇಷವಾಗಿ ತಯಾರಿಸಿದ್ದ ಆಕರ್ಷಕ ವಿನ್ಯಾಸದ ಗನ್ ಈಗ ಇಂಗ್ಲೆಂಡ್‌ನ ವ್ಯಕ್ತಿಯೊಬ್ಬರ (ಈಗಿನ ಅಂದಾಜು ಮೌಲ್ಯ ₹ 2.04 ಕೋಟಿ) ಸಂಗ್ರಹದಲ್ಲಿದ್ದು, ಅದನ್ನು ರಫ್ತು ಮಾಡದಂತೆ ಬ್ರಿಟನ್ ಸರ್ಕಾರ ನಿಷೇಧ ಹೇರಿದೆ.

ಭಾರತ ಮತ್ತು ಇಂಗ್ಲೆಂಡ್ ಇತಿಹಾಸ ಮತ್ತು 'ಹೋರಾಟದ ಅವಧಿ'ಯ ಸಾರ್ವಜನಿಕ ಅಧ್ಯಯನದ ಉದ್ದೇಶಕ್ಕಾಗಿ ಬ್ರಿಟನ್ ಮೂಲದ ಸಂಸ್ಥೆಗೆ ಈ ಗನ್ ಅನ್ನು ಸ್ವಾಧೀನಕ್ಕೆ ಪಡೆಯಲು ಸಮಯಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

'ಫ್ಲಿಂಟ್‌ಲಾಕ್ ಸ್ಪೋರ್ಟಿಂಗ್ ಗನ್'ನ ವಿಲೇವಾರಿಗೆ ನಿಷೇಧ ಹೇರುವ ತೀರ್ಮಾನವನ್ನು ಬ್ರಿಟನ್‌ನ ಕಲಾ ಮತ್ತು ಪಾರಂಪರಿಕ ಸಚಿವ ಲಾರ್ಡ್ ಸ್ಟೀಫನ್ ಪಾರ್ಕಿನ್‌ಸನ್ ಅವರು ಕಳೆದ ವಾರ ತೆಗೆದುಕೊಂಡಿದ್ದಾರೆ. ಸಾಂಸ್ಕೃತಿಕ ಮಹತ್ವದ ಕಲೆ ಮತ್ತು ಪರಿಕರಗಳ ರಫ್ತು ಕುರಿತ ಪರಿಶೀಲನಾ ಸಮಿತಿಯು (ಆರ್‌ಸಿಇಡಬ್ಲ್ಯುಎ) ಈ ಬಗ್ಗೆ ವರದಿ ಸಲ್ಲಿಸಿತ್ತು.

14 ಬೋರ್‌ನ ಈ ಗನ್ ಅನ್ನು 1793 ಮತ್ತು 1794ರ ನಡುವೆ ತಯಾರಿಸಲಾಗಿದೆ. ಹಕ್ಕಿಗಳ ಶೂಟ್ ಮಾಡುವ ಉದ್ದೇಶಕ್ಕಾಗಿ ವಿನ್ಯಾಸಗೊಳಿಸಲಾಗಿದೆ. ಈ ಗನ್‌ನ ಮೇಲೆ ಅದನ್ನು ತಯಾರಿಸಿರುವ ಅಸದ್ ಖಾನ್ ಮೊಹಮ್ಮದ್ ಅವರ ಹಸ್ತಾಕ್ಷರವಿದೆ. ಒಟ್ಟು 138 ಸೆಂಟಿ ಮೀಟರ್ ಉದ್ದದ ಈ ಗನ್ ಅನ್ನು ತಯಾರಿಸಲು ಗುಣಮಟ್ಟದ ಮರದ ಕೆತ್ತನೆ ಬಳಸಲಾಗಿದ್ದು, ಅದರ ಮೇಲೆ ಚಿನ್ನ ಮತ್ತು ಬೆಳ್ಳಿಯ ಲೇಪನವಿದೆ. ಬೆಳ್ಳಿಯ ಹಿಡಿಕೆ ಮತ್ತು ಸ್ಟೀಲ್ ಬ್ಯಾರಲ್ ಅನ್ನು ಗನ್ ಒಳಗೊಂಡಿದೆ. ಬ್ರಿಟಿಷ್ ವಸಾಹತುಶಾಹಿ ಕಾಲಘಟ್ಟದ ಈ ಗನ್ ಅನ್ನು 1790 ಮತ್ತು 1792ರ ಅವಧಿಯಲ್ಲಿ ಟಿಪ್ಪು ಸುಲ್ತಾನ್ ವಿರುದ್ಧ ಹೋರಾಡಿದ್ದ ಬ್ರಿಟಿಷ್ ಸೇನೆಯ ಜನರಲ್ ಅರ್ಲ್ ಕಾರ್ನ್‌ವಾಲಿಸ್ ಅವರಿಗೆ ಉಡುಗೊರೆ ನೀಡಲಾಗಿತ್ತು ಎಂದು ಹೇಳಲಾಗಿದೆ.

5ನೇ ಪುಟ ನೋಡಿ

ಅಪಘಾತ: 10 ಮಂದಿ ಸಾವು

ಪ್ರಜಾವಾಣಿ ವಾರ್ತೆ

ತಿ.ನರಸೀಪುರ (ಮೈಸೂರು ಜಿಲ್ಲೆ): ತಾಲ್ಲೂಕಿನ ಕುರುಬೂರು ಸಮೀಪದ ಪಿಂಜರಾಪೋಲ್ ಬಳಿ, ಮೈಸೂರು–ಕೊಳ್ಳೇಗಾಲ ರಾಷ್ಟ್ರೀಯ ಹೆದ್ದಾರಿಯಲ್ಲಿ ಇನೋವಾ ಕಾರು ಮತ್ತು ಖಾಸಗಿ ಬಸ್ ನಡುವೆ ಸೋಮವಾರ ಮಧ್ಯಾಹ್ನ ಭೀಕರ ಅಪಘಾತ ಸಂಭವಿಸಿ, ಮೂವರು ಮಕ್ಕಳು, ಮೂವರು ಮಹಿಳೆಯರು ಸೇರಿ 10 ಮಂದಿ ದಾರುಣವಾಗಿ ಸಾವಿಗೀಡಾಗಿದ್ದಾರೆ. ಐವರು ತೀವ್ರವಾಗಿ ಗಾಯಗೊಂಡಿದ್ದಾರೆ.

ಬಳ್ಳಾರಿ ಜಿಲ್ಲೆಯ ಸಂಗನಕಲ್ಲು ಗ್ರಾಮದ ಮಂಜುನಾಥ್ (35), ಪೂರ್ಣಿಮಾ (30), ಪವನ್ (10), ಕಾರ್ತಿಕ್ (8), ಸಂದೀಪ್ (24), ಸುಜಾತಾ (40), ಕೊಟ್ರೇಶ್ (45), ಗಾಯತ್ರಿ (35), ಶ್ರಾವ್ಯಾ (3) ಹಾಗೂ ಚಾಲಕ ಶ್ರೀರಂಗಪಟ್ಟಣದ ಆದಿತ್ಯ (40) ಮೃತರು.

ಮಹದೇಶ್ವರ ಬೆಟ್ಟ ಹಾಗೂ ಬಿಳಿಗಿರಿರಂಗನ ಬೆಟ್ಟಕ್ಕೆ ತೆರಳಿ ಪೂಜೆ ಸಲ್ಲಿಸಿ ವಾಪಸಾಗುತ್ತಿದ್ದಾಗ ಅಪಘಾತ ಸಂಭವಿಸಿತು. 8 ಮಂದಿ ಸ್ಥಳದಲ್ಲೇ ಹಾಗೂ ಇಬ್ಬರು ಆಸ್ಪತ್ರೆಗೆ ಸಾಗಿಸುವಾಗ ಕೊನೆಯುಸಿರೆಳೆದರು.

5ನೇ ಪುಟ ನೋಡಿ

ಕರ್ನಾಟಕ ರಾಜ್ಯ ಸರ್ಕಾರದಲ್ಲಿ
ನೂತನ ಕಂದಾಯ ಸಚಿವರಾಗಿ ನೇಮಕಗೊಂಡಿರುವ
ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ
ಶ್ರೀ ಕೃಷ್ಣ ಬೈರೇಗೌಡ ಅವರಿಗೆ
ಹೃತ್ಪೂರ್ವಕ
ಅಭಿನಂದನೆಗಳು
ಎಂ. ಜಯಗೋಪಾಲಗೌಡ
ಎನ್.ಎನ್. ಶ್ರೀನಿವಾಸಯ್ಯ
ಎನ್.ಕೆ. ಮಹೇಶ್‌ಕುಮಾರ್
ಎಂ. ಹನುಮಂತೇಗೌಡ
ಟಿ.ಜಿ. ಚಂದ್ರು
ಕೆ. ಅಶೋಕನ್
ದಾನೇಗೌಡ
ಕೆ.ಎಂ. ಚೇತನ್
ಆರ್.ಎಂ. ಶ್ರೀನಿವಾಸ್
ಆನಂದ್ ಕುಮಾರ್
ಎಸಿ. ಹರಿಪ್ರಸಾದ್
ಎನ್. ಆದಿರಾಮು
ಟಿ. ವೆಂಕಟರಾಮ್ ರೆಡ್ಡಿ
ವೆಂಕಟಸ್ವಾಮಿ
ಕೆ. ಗೌರೀಶ್
ಬಿ.ಎಂ. ನಾಗೇಶ್
ಗೋಪಾಲ್ ರೆಡ್ಡಿ
ಎಂ. ಪ್ರಸಾದ್ ರೆಡ್ಡಿ
ಲಕ್ಷ್ಮೀಪತಿ
ಶಾಂತ ಕುಮಾರ್
ಕೆ.ಆರ್.ರಾಜು
ಪುಟ್ಟರಾಜು
ಶುಭಕೋರುವವರು : ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಕಾರ್ಯಕರ್ತರು ಹಾಗೂ ಮತದಾರರು

ಒಂದೇ ಕಾಮಗಾರಿಗೆ ಎರಡು–ಮೂರು ಬಿಲ್; 10 ದಿನದಲ್ಲಿ ಪಟ್ಟಿ ನೀಡಲು ಉಪ ಮುಖ್ಯಮಂತ್ರಿ ಸೂಚನೆ

‘ಜನಸ್ನೇಹಿ, ಭ್ರಷ್ಟಾಚಾರ ರಹಿತ ಬಿಬಿಎಂಪಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿಯನ್ನು ಭ್ರಷ್ಟಾಚಾರ ಮುಕ್ತಗೊಳಿಸಿ, ಜನಸ್ನೇಹಿ ವಾತಾವರಣ ನಿರ್ಮಿಸಲಾಗುತ್ತದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದಾರೆ.

ಬೆಂಗಳೂರು ನಗರಾಭಿವೃದ್ಧಿ ಸಚಿವ ಸ್ಥಾನ ಅಧಿಕೃತವಾಗಿ ಘೋಷಣೆಯಾದ ನಂತರ ಪ್ರಥಮವಾಗಿ ಬಿಬಿಎಂಪಿ ಉನ್ನತ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿ ಮಾತನಾಡಿದರು.

‘ಬಿಬಿಎಂಪಿಯಲ್ಲಿ ಕಾಮಗಾರಿಗಳು ಯಾವ ರೀತಿ ನಡೆಯುತ್ತಿವೆ ಎನ್ನುವ ಮಾಹಿತಿ ಇದೆ. ಆ ಕಡೆಯಿಂದ ಈ ಕಡೆಗೊಂದು ಬಿಲ್, ಈ ಕಡೆಯಿಂದ ಆ ಕಡೆಗೊಂದು ಬಿಲ್ ಮಾಡಿರುವುದು ಗೊತ್ತಿದೆ. ಇದೆಲ್ಲ ಮಾಹಿತಿಯನ್ನು 10 ದಿನದಲ್ಲಿ ಕೊಡಿ. ಇಲ್ಲದಿದ್ದರೆ ಅಮಾನತು ಅಷ್ಟೇ ಅಲ್ಲ, ಎಂತಹ ಕ್ರಮವಾಗುತ್ತದೋ ಗೊತ್ತಿಲ್ಲ’ ಎಂದು ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿ ಅಧಿಕಾರಿಗಳು ಹಾಗೂ ಎಂಜಿನಿಯರ್‌ಗಳಿಗೆ ಎಚ್ಚರಿಕೆ ನೀಡಿದ್ದಾರೆ.

‘ಕಳೆದ ಮೂರು ವರ್ಷಗಳಿಂದ ಬೆಂಗಳೂರಲ್ಲಿ ವಿಧಾನಸಭೆ ಕ್ಷೇತ್ರವಾರು ಆಗಿರುವ ಕೆಲಸ, ಯಾವ ಯೋಜನೆಯಡಿ ಆ ಕೆಲಸ ಆಗಿದೆ, ಅದಕ್ಕೆ ಆಗಿರುವ ಖರ್ಚು ವಿವರ, ಕೆಲಸ ಆಗಿರುವ ಬಗ್ಗೆ ಫೋಟೊ, ವಿಡಿಯೊ ಮತ್ತಿತರ ದಾಖಲೆಗಳನ್ನು ಒದಗಿಸಬೇಕು. ಬಿಬಿಎಂಪಿ ಅನುದಾನ ಪಡೆದು ಶುರು ಮಾಡದ ಕೆಲಸ, ಕಾಮಗಾರಿಗಳನ್ನು ಯಥಾಸ್ಥಿತಿಯಲ್ಲಿ ತಡೆ ಹಿಡಿಯಬೇಕು. ಕಾಲಮಿತಿಯೊಳಗೆ ಪೂರ್ಣಗೊಳಿಸದ ಯೋಜನೆ ಕೆಲಸಗಳನ್ನು ತಡೆ ಹಿಡಿಯಬೇಕು’ ಎಂದು ಹೇಳಿದರು.

‘ರಸ್ತೆ ಮತ್ತಿತರ ಕಾಮಗಾರಿಗಳನ್ನು ಏಜೆನ್ಸಿಗಳ ಮೂಲಕವೇ ಮಾಡುವುದಾದರೆ ಪಾಲಿಕೆಯಲ್ಲಿ ಎಂಜಿನಿಯರ್‌ಗಳು ಇರುವುದರ ಔಚಿತ್ಯವಾದರೂ ಏನು’ ಎಂದು ಪ್ರಶ್ನಿಸಿದರು.

‘ನಗರ ಹೊರವಲಯದ ರಸ್ತೆಗಳಲ್ಲಿ ಘನತ್ಯಾಜ್ಯ ವಿಲೇವಾರಿಗೆ ಅವಕಾಶ ನೀಡಬಾರದು. ಒಣ ಮತ್ತು ಹಸಿಕಸ ವೈಜ್ಞಾನಿಕ ವಿಲೇವಾರಿಗೆ ಸಮರ್ಪಕ ವ್ಯವಸ್ಥೆ ಕಲ್ಪಿಸಬೇಕು. ಸ್ವಚ್ಛತೆ, ನೈರ್ಮಲ್ಯ, ಆರೋಗ್ಯ ರಕ್ಷಣೆಗೆ ಆದ್ಯತೆ ನೀಡಬೇಕು. ಅಕ್ರಮಗಳಿಗೆ ಆಸ್ಪದ ಇಲ್ಲದಂತೆ ಟಿಡಿಆರ್ ಯೋಜನೆ ಜಾರಿಗೆ ತರಬೇಕು. ಯಾವುದೇ ಯೋಜನೆ ಕಾಮಗಾರಿ ಆರಂಭಕ್ಕೆ ಮುನ್ನ ಆ ಜಾಗದ ವಿಡಿಯೊ, ಫೋಟೋ ಮಾಡಬೇಕು’ ಎಂದು ಡಿಸಿಎಂ ಸೂಚಿಸಿದರು.

‘ಮಳೆಗಾಲದಲ್ಲಿ ಸರಾಗವಾಗಿ ನೀರು ಹರಿಯಲು ಅಡ್ಡಿಯಾಗಿರುವ ಸ್ಥಳಗಳನ್ನು ಗುರುತಿಸಿ, ಸರಿಪಡಿಸಿ. ಮಳೆ ನೀರು ಸಮಸ್ಯೆಯಿಂದ ಬೆಂಗಳೂರಿಗೇ ಕೆಟ್ಟ ಹೆಸರು ಬರುತ್ತಿದೆ. ಇದನ್ನು ನಿವಾರಿಸುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರದು’ ಎಂದರು.

ಮಾಸ್ಟರ್ ಪ್ಲಾನ್: ‘ನಗರದಲ್ಲಿರುವ ಉದ್ಯಮಿಗಳು, ಮಾಜಿ ಆಯುಕ್ತರು ಸೇರಿದಂತೆ ತಜ್ಞರೊಂದಿಗೆ ಸಭೆ ನಡೆಸಿ ಸಲಹೆ ಪಡೆಯುತ್ತೇನೆ. ನಗರದ ಸಮಗ್ರ ಅಭಿವೃದ್ಧಿಗಾಗಿ ಮಾಸ್ಟರ್ ಪ್ಲಾನ್ ಮಾಡಿ ಅನುಷ್ಠಾನಗೊಳಿಸಲಾಗುತ್ತದೆ. ಒಂದೇ ದಿನದಲ್ಲಿ ಬದಲಾವಣೆ ಆಗಲ್ಲ. ಎಲ್ಲರೂ ಸೇರಿ ಕೆಲಸ ಮಾಡೋಣ’ ಎಂದು ಶಿವಕುಮಾರ್ ಹೇಳಿದರು.

‘ಬಿಬಿಎಂಪಿಯ ಕೆಳಮಟ್ಟದ ಅಧಿಕಾರಿಗಳಲ್ಲಿ ಭ್ರಷ್ಟಾಚಾರ ರಹಿತ ಕೆಲಸ ಆಗಬೇಕಿದೆ. ಜನರನ್ನು ವಿಶ್ವಾಸಾರ್ಹ, ಗೌರವದಿಂದ ಕಾಣಬೇಕು. ಸ್ನೇಹಜೀವಿ ಬಿಬಿಎಂಪಿ ಎಂಬುದನ್ನು ತೋರಿಸಬೇಕು. ಅಭಿವೃದ್ಧಿ ವಿಷಯದಲ್ಲಿ ಸರ್ಕಾರದ ಮೇಲೆ ಅವಲಂಬನೆ ಬೇಡ. ಎಲ್ಲಿ ಸೋರಿಕೆ ಇದೆ ಅದನ್ನು ಸರಿಪಡಿಸಿ. ಕೇಂದ್ರ ಸರ್ಕಾರದಿಂದ ಅನುದಾನ ಬರುವುದಿಲ್ಲ’ ಎಂದರು.

‘ಆಸ್ತಿ ತೆರಿಗೆ ಕುರಿತಂತೆ ಚುನಾವಣೆಗೂ ಮುನ್ನ ಪ್ರಸ್ತಾವ ಸಲ್ಲಿಸಲಾಗಿದೆ. ಇದನ್ನು ನಾನು ಖುದ್ದಾಗಿ ಪರಿಶೀಲನೆ ಮಾಡುತ್ತೇನೆ. ಏಕಾಏಕಿ ತೀರ್ಮಾನ ಮಾಡುವುದಿಲ್ಲ’ ಎಂದು ತಿಳಿಸಿದರು.

‘ಬಿಬಿಎಂಪಿಯಲ್ಲಿ ಶೇ 40ರಷ್ಟು ಕಮಿಷನ್ ಕುರಿತಂತೆ, ನಾನು ಗುತ್ತಿಗೆದಾರರ ಜತೆ ಚರ್ಚೆ ಮಾಡುತ್ತೇನೆ. ಎಲ್ಲಾ ವರ್ಗದ ಜನರ ಜತೆ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ’ ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಿಬಿಎಂಪಿ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದರು. ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯಪುರ ಇದ್ದರು -ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

‘ಮಟ್ಟ ಹಾಕುತ್ತೇನೆ...’

‘ಬಿಬಿಎಂಪಿ ಸಮುದ್ರ ಇದ್ದಂತೆ. ಎಲ್ಲಿ ತೇಲುತ್ತೇವೆಯೋ, ಎಲ್ಲಿ ಮುಳುಗುತ್ತೇವೆಯೋ ಗೊತ್ತಿಲ್ಲ. ರಾಜಕಾರಣಿಗಳು, ಅಧಿಕಾರಿಗಳು ಸೇರಿ ಏನೆಲ್ಲಾ ಮಾಡುತ್ತಾರೆ ಎಂಬುದು ಗೊತ್ತಿದೆ. ನಮ್ಮ ಚುನಾವಣೆ ಹೋರಾಟವೇ ಭ್ರಷ್ಟಾಚಾರ ವಿರುದ್ಧವಾಗಿತ್ತು. ಎಲ್ಲರೂ ಕೆಟ್ಟವರು ಎಂದು ಹೇಳಲ್ಲ. ಒಳ್ಳೆಯವರೂ ಇದ್ದಾರೆ. ಆ ಮಂತ್ರಿಗೆ, ಈ ಮಂತ್ರಿಗೆ, ಶಾಸಕರಿಗೆ, ಅವರಿಗೆ ಇವರಿಗೆ ಚಾಡಿ ಹೇಳಿಕೊಂಡು ಬದುಕುತ್ತೇನೆ ಎನ್ನುವವರನ್ನು ಮಟ್ಟ ಹಾಕುತ್ತೇನೆ’ ಡಿಸಿಎಂ ಶಿವಕುಮಾರ್ ಎಚ್ಚರಿಸಿದರು.

‘ಸಮಯದ ಮಿತಿ ಇಲ್ಲದೇ ದುಡಿಯಬೇಕು. ಶೇ 100ರಷ್ಟು ಬದ್ಧತೆ ಇರಬೇಕು. ಆಡಳಿತಕ್ಕೆ ಚುರುಕು ಮುಟ್ಟಿಸಲು ಒಂದಷ್ಟು ಬದಲಾವಣೆ ಮಾಡುತ್ತೇವೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಯಾರ‍್ಯಾರಿಗೆ ಬೂತ್ ಲೆವೆಲ್ ಆಫೀಸರ್ ಅಂತ ಲೆಟರ್ ಕೊಟ್ರಲ್ಲ, ನಿಮಗೆ ಬುದ್ಧಿ ಇರಲಿಲ್ಲವಾ? ಯಾರ‍್ಯಾರು ಏನೇನೂ ಮಾಡಿದರು, ಎಷ್ಟೆಷ್ಟು ಭ್ರಷ್ಟಾಚಾರ ಮಾಡಿದರು ಅಂತ ಗೊತ್ತಿದೆ. ಈಗ ಬದಲಾವಣೆ ಮಾಡಿಕೊಳ್ಳಿ’ ಎಂದು ಸೂಚಿಸಿದರು.

ಚುನಾವಣೆಗೆ ಸಿದ್ಧರಾಗಲು ಸೂಚನೆ

‘ಬಿಬಿಎಂಪಿಗೆ ಶೀಘ್ರ ಚುನಾವಣೆ ನಡೆಸಲಾಗುತ್ತದೆ. ಅಧಿಕಾರಿಗಳಿಂದಲೇ ಬಹುದಿನಗಳವರೆಗೆ ಪಾಲಿಕೆ ಆಡಳಿತ ನಡೆಸಲು ಅವಕಾಶ ನೀಡುವುದಿಲ್ಲ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ವಾರ್ಡ್‌ಗಳ ಮರುವಿಂಗಡಣೆಗೆ ಸಂಬಂಧಿಸಿದಂತೆ ಸಚಿವರಾದ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಅದನ್ನು ಅಂತಿಮಗೊಳಿಸಿ ಸಂವಿಧಾನದ ಪ್ರಕಾರ ಚುನಾವಣೆ ಮಾಡಲಾಗುತ್ತದೆ’ ಎಂದು ಹೇಳಿದರು.

ಡಿ.ಕೆ. ಶಿವಕುಮಾರ್ ಏನೆಂದರು?

- ಕಾಮಗಾರಿಗೆ ಕೆಲಸ ಆಗದಿದ್ದರೂ ಬಿಲ್ ಮಾಡಲಾಗಿದೆ.
- ನಿಮ್ಮ ಪ್ರಾಮಾಣಿಕತೆಯನ್ನು ಒರೆಗೆ ಹಚ್ಚಿ ನೋಡುತ್ತೇನೆ.
- ನೀವು ಪಟ್ಟಿ ಕೊಡದಿದ್ದರೆ ನಾನೇ ನಿಮಗೆ ಪಟ್ಟಿ ಕೊಡುತ್ತೇನೆ.
- ನಾನು ಹಳ್ಳಿಯಿಂದ ಬಂದಿದ್ದರೂ ನನಗೆ ಮಾಹಿತಿ ಕೊಡುವವರು ಇದ್ದಾರೆ.
- ಕೆಲಸ ಆಗಿರುವ ಜಾಗಗಳಿಗೆ ಹೋಗಿ ಖುದ್ದು ಪರಿಶೀಲನೆ.
- ಕಣ್ಣಲ್ಲಿ ಕಂಡಿದ್ದು ಮಾತ್ರವೇ ನಂಬಿಕೆಗೆ ಅರ್ಹ
- ನಿಮ್ಮ ಗೌರವ ಕಳೆದುಕೊಳ್ಳಬೇಡಿ.
- ನಿಮ್ಮ ಕೆಲಸ ಬೇರೆಯವರು ಮಾಡುವುದಾದರೆ ನೀವು ಇರುವುದಾದರೂ ಏಕೆ?
- ಜನರ ಉಪಯೋಗಕ್ಕೆ ಯೋಜನೆ ಆಗುತ್ತಿದೆಯೋ ಅಥವಾ ಇನ್ಯಾರಾದರೂ ಪ್ರಭಾವಿಗಳ ಅನುಕೂಲಕ್ಕೆ ಯೋಜನೆ ಆಗುತ್ತಿದೆಯೋ ಎಂಬ ಮಾಹಿತಿ ಸಾರ್ವಜನಿಕರಿಗೆ ಸಿಗಲಿ.



ಸುಪ್ರೀಂ ಕೋರ್ಟ್ ತೀರ್ಪು ಜಾರಿಗೊಳಿಸುವಂತೆ ಆಗ್ರಹಿಸಿ ‘ಇಪಿಎಸ್–95 ಬೆಮಸಾ ಮತ್ತು ಕರಾಸ ನಿವೃತ್ತ ನೌಕರರ ಸಂಘ’ದ ಸದಸ್ಯರು ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರಿಗೆ ಸೋಮವಾರ ಮನವಿ ಸಲ್ಲಿಸಿದರು.

ಸುಪ್ರೀಂ ಕೋರ್ಟ್ ತೀರ್ಪು ಅನುಷ್ಠಾನಗೊಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಪಿಎಫ್‌ಒ ಅಧಿಕಾರಿಗಳು ಸುಪ್ರೀಂ ಕೋರ್ಟ್ ತೀರ್ಪು ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿ ಕೇಂದ್ರೀಯ ಭವಿಷ್ಯ ನಿಧಿ ಆಯುಕ್ತರಿಗೆ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರ ಮೂಲಕ ‘ಇಪಿಎಸ್–95 ಬೆಮಸಾ ಮತ್ತು ಕರಾಸ ನಿವೃತ್ತ ನೌಕರರ ಸಂಘ’ ಮನವಿ ಸಲ್ಲಿಸಿದೆ.

‘2022ರ ನವೆಂಬರ್ 4ರಂದು ಸುನೀಲ್ ಕುಮಾರ್ ಹಾಗೂ ಇತರರು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ಅಂತಿಮ ತೀರ್ಪನ್ನು ಇದುವರೆಗೂ ಅನುಷ್ಠಾನಗೊಳಿಸಿಲ್ಲ. ಇಪಿಎಫ್‌ಒ ಕಚೇರಿಯಿಂದ ಇದುವರೆಗೂ ಒಂಬತ್ತು ಸುತ್ತೋಲೆಗಳನ್ನು ಹೊರಡಿಸಿದ್ದರೂ, ಸುಪ್ರೀಂ ಕೋರ್ಟ್‌ನ ತೀರ್ಪಿಗೆ ಪೂರಕವಾಗಿಲ್ಲ. ಈ ಎಲ್ಲ ಸುತ್ತೋಲೆಗಳು ನಿವೃತ್ತರ ಹಿತಾಸಕ್ತಿಗೆ ಮಾರಕವಾಗಿವೆ’ ಎಂದು ಸಂಘದ ಅಧ್ಯಕ್ಷ ಶಂಕರ್ ಕುಮಾರ್ ದೂರಿದ್ದಾರೆ.

‘ದೇಶದ ವಿವಿಧ ಸಂಸ್ಥೆಗಳಲ್ಲಿ ಲಕ್ಷಾಂತರ ಮಂದಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. ಈಗ ನೀಡುತ್ತಿರುವ ಪಿಂಚಣಿಯಿಂದ ಜೀವನ ಸಾಗಿಸುವುದೇ ಕಷ್ಟಕರ. ಅನೇಕ ಪ್ರತಿಭಟನೆಗಳು, ಚಳವಳಿ ನಡೆಸಿದರೂ ಇಪಿಎಫ್‌ಒ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. 2014ಕ್ಕೂ ಮೊದಲು ನಿವೃತ್ತರಾದವರಿಗೆ ಪಿಂಚಣಿ ನೀಡುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಆನ್‌ಲೈನ್ ಅರ್ಜಿ ಸಲ್ಲಿಕೆಯ ಬಗ್ಗೆ ನೌಕರರಿಗೆ ತಿಳಿವಳಿಕೆ ನೀಡಬೇಕು. ಈ ಬಗ್ಗೆ ವ್ಯಾಪಕ ಪ್ರಚಾರ ಮಾಡಬೇಕು. ಹಲವಾರು ಗೊಂದಲಗಳಿಗೆ ಇಪಿಎಫ್‌ಒ ಕಚೇರಿ ಹೊರಡಿಸುವ ವಿವಾದಿತ ಸುತ್ತೋಲೆಗಳೇ ಕಾರಣವಾಗುತ್ತಿವೆ’ ಎಂದು ದೂರಿದರು. ‘ಬಹುತೇಕ ನಿವೃತ್ತರು ಅನಾರೋಗ್ಯದಿಂದ ಬಳಲುತ್ತಿದ್ದು, ಯಾವುದೇ ರೀತಿಯ ವಿಮೆ ಸೌಲಭ್ಯಗಳಿಲ್ಲ. ಈ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಯಥಾವತ್ತಾಗಿ ಕೂಡಲೇ ಅನುಷ್ಠಾನಗೊಳಿಸಬೇಕು’ ಎಂದು ಆಗ್ರಹಿಸಿದರು.

ಜಾನಪದ ವಿ.ವಿ: ಹುದ್ದೆಗಳ ಭರ್ತಿ ಪ್ರಕ್ರಿಯೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾವೇರಿ ಜಿಲ್ಲೆಯಲ್ಲಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಬೋಧಕ ಹಾಗೂ ಬೋಧಕೇತರರ ಹುದ್ದೆಗಳ ಭರ್ತಿಗೆ ನೀಡಿದ್ದ ಅನುಮತಿಯನ್ನು ಉನ್ನತ ಶಿಕ್ಷಣ ಇಲಾಖೆ ತಾತ್ಕಾಲಿಕವಾಗಿ ಹಿಂಪಡೆದಿದೆ.

ವಿವಿಧ ಹುದ್ದೆಗಳ ಕಾಯಂ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆ. ವಿಶ್ವವಿದ್ಯಾಲಯ ನಿಯಮಗಳನ್ನು ಗಾಳಿಗೆ ತೂರಿ ನೇಮಕಾತಿ ಮಾಡುತ್ತಿದೆ ಎಂದು ಜಾನಪದ ವಿಶ್ವವಿದ್ಯಾಲಯದ ಸರ್ವಾಂಗೀಣ ಹಿತರಕ್ಷಣಾ ಟ್ರಸ್ಟ್ ಹಾಗೂ ಇತರರು ದೂರು ಸಲ್ಲಿಸಿದ್ದರು.

ದೂರುಗಳ ಸತ್ಯಾಸತ್ಯತೆ ಪರಿಶೀಲಿಸಲು ಸರ್ಕಾರ ನಿರ್ಧರಿಸಿದ್ದು, ದೂರುಗಳಲ್ಲಿನ ಆರೋಪಗಳನ್ನು ಪರಿಶೀಲಿಸಿ ವಿಸ್ತೃತ ವರದಿ ಸಲ್ಲಿಸಲು ವಿಶ್ವವಿದ್ಯಾಲಯದ ಕುಲಸಚಿವರಿಗೆ ಮೂರು ದಿನಗಳ ಗಡುವು ನೀಡಲಾಗಿದೆ.

ಎನ್‌ಪಿಎಸ್ ಶಾಲೆಗೆ ಡಿಸಿಎಂ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಧಿಕಾರಿಗಳ ಬೇಜವಾಬ್ದಾರಿಯಿಂದ ಯಾರಿಗೂ ತೊಂದರೆ ಆಗಬಾರದು. ಭ್ರಷ್ಟಾಚಾರ ಮುಕ್ತ ಆಡಳಿತ ನೀಡಬೇಕು. ಹೀಗಾಗಿ, ಬಿಬಿಎಂಪಿ, ಬಿಡಿಎ, ಜಲಮಂಡಳಿ ಅಧಿಕಾರಿಗಳೊಂದಿಗೆ ಸಭೆ ಮಾಡಲಾಗುತ್ತಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ರಾಜಾಜಿನಗರದಲ್ಲಿರುವ ನ್ಯಾಷನಲ್ ಪಬ್ಲಿಕ್ ಶಾಲೆಗೆ (ಎನ್‌ಪಿಎಸ್) ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

‘ನಾನು ಓದಿದ ಶಾಲೆಗೆ ಭೇಟಿ ನೀಡಿ ನಮ್ಮ ಗುರುಗಳಾದ ಗೋಪಾಲಕೃಷ್ಣ ಅವರನ್ನು ಭೇಟಿ ಮಾಡಿ, ಆಶೀರ್ವಾದ ಪಡೆದೆ. ಅವರು ಶಿಕ್ಷಣ ಕ್ಷೇತ್ರದಲ್ಲಿ ಬಹಳ ಸಾಧನೆ ಮಾಡಿದ್ದಾರೆ. ಈ ನ್ಯಾಷನಲ್ ಪಬ್ಲಿಕ್ ಶಾಲೆ ದೇಶದಲ್ಲೇ ಮೊದಲ ಸ್ವಾಯತ್ತ ಶಾಲೆಯಾಗಿದೆ’ ಎಂದರು.

‘ಪ್ರತಿ ಪಂಚಾಯ್ತಿ ಮಟ್ಟದಲ್ಲಿ ನವೋದಯ ಮಾದರಿಯ ಉನ್ನತ ಗುಣಮಟ್ಟದ ಶಾಲೆ ಆರಂಭಿಸುವ ಬಗ್ಗೆ ನಮ್ಮ ಪ್ರಣಾಳಿಕೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಇದನ್ನು ಯಾವ ರೀತಿ ಮಾಡಬೇಕು ಎಂದು ಮಾರ್ಗದರ್ಶನ ನೀಡಬೇಕು ಎಂದು ಗೋಪಾಲಕೃಷ್ಣ ಅವರ ಬಳಿ ಮನವಿ ಮಾಡಿದ್ದೇನೆ. ಹಳ್ಳಿಯಿಂದ ಶಿಕ್ಷಣಕ್ಕೆ ಮಕ್ಕಳು ನಗರಕ್ಕೆ ವಲಸೆ ಬರುವುದನ್ನು ತಪ್ಪಿಸಲು ಈ ಕಾರ್ಯಕ್ರಮ ರೂಪಿಸಿದ್ದೇವೆ. ನಾನು ಪರಮೇಶ್ವರ್ ಹಾಗೂ ಪ್ರಾಥಮಿಕ ಶಿಕ್ಷಣ ಸಚಿವರು ಈ ಬಗ್ಗೆ ಚರ್ಚೆ ಮಾಡುತ್ತೇವೆ’ ಎಂದು ತಿಳಿಸಿದರು.

ಸ್ವಚ್ಛತಾ ಕಾರ್ಯ... ಶಾಲೆಗಳು ಸೋಮವಾರದಿಂದ ಆರಂಭವಾಗಿದ್ದರಿಂದ ನಗರದ ನಾಗಶೆಟ್ಟಿಹಳ್ಳಿಯ ಗೋಪಾಲ್ ರಾಮನಾರಾಯಣ ಸರ್ಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಶಾಲಾ ಆವರಣವನ್ನು ಸ್ವಚ್ಛಗೊಳಿಸಿದರು –ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

ರಾಮನಾಥಪುರ ಕೆರೆಯಲ್ಲಿ ಮತ್ತಿಬ್ಬರ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ವಾರಾಂತ್ಯದಲ್ಲಿ ತಾಲ್ಲೂಕು ಸಮೀಪದ ನಂದಿಬೆಟ್ಟಕ್ಕೆ ಬಂದಿದ್ದ ನಾಲ್ವರು ಯುವಕರು ಕುಂದಾಣ ಹೋಬಳಿ ರಾಮನಾಥಪುರ ಕೆರೆಯಲ್ಲಿ ಈಜಲು ಹೋಗಿ ಮೃತಪಟ್ಟ ಪ್ರಕರಣದಲ್ಲಿ ಸೋಮವಾರ ಬೆಳಿಗ್ಗೆ ಮತ್ತೆರೆಡು ಮೃತ ದೇಹಗಳು ಪತ್ತೆಯಾಗಿವೆ.

ಕೆರೆ ಏರಿ ಮೇಲೆ ಯುವಕರ ದ್ವಿಚಕ್ರ ವಾಹನ, ಚಪ್ಪಲಿಗಳನ್ನು ನೋಡಿ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಅಗ್ನಿಶಾಮಕ ದಳದ ಸಹಾಯದಿಂದ ಭಾನುವಾರ ತಡರಾತ್ರಿ ಎರಡು ಮೃತದೇಹವನ್ನು ಹೊರತೆಗೆಯಲಾಗಿತ್ತು. ಇನ್ನಿಬ್ಬರು ನಾಪತ್ತೆಯಾಗಿದ್ದರು.

ಸೋಮವಾರ ಬೆಳಿಗ್ಗೆ ಇಬ್ಬರು ಯುವಕರ ದೇಹ ಪತ್ತೆಯಾಗಿದೆ. ಮೃತರು ಬೆಂಗಳೂರಿನ ಆರ್.ಟಿ.ನಗರದ ಶೇಖ್ ಥೈರ್, ತೋಹಿದ್, ಶಾಹಿದ್ ಮತ್ತು ಫೈಜಲ್ ಎಂದು ಗುರುತಿಸಲಾಗಿದೆ. ವಿಶ್ವನಾಥಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
Visvesvaraya Technological University
“Jnana Sangama”, Belagavi - 590 018, Karnataka State.
Prof. B. E. Rangaswamy, Registrar
Phone: (0831) 2498100
Fax:(0831) 2405467

NOTIFICATION
APPLICATIONS ARE INVITED FOR
“VTU ELIGIBILITY TEST FOR RESEARCH” (VTU-ETR) 2022.
for admission to Research Programmes
for the award of Ph.D. (Full Time/Part Time), and M.S. (Research) Part Time.

Opening date for receipt of filled in application form	Last date for receipt of filled in application form	Date of VTU-ETR 2021-22
07-06-2023	30-06-2023	23-07-2023

For detailed Notification visit website: www.vtu.ac.in.
Sd/-
Registrar

ಎಫ್‌ಐಆರ್ ರದ್ದತಿಗೆ ಅಶ್ವತ್ಥನಾರಾಯಣ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉರಿಗೌಡ-ನಂಜೇಗೌಡರು ಟಿಪ್ಪುವನ್ನು ಮುಗಿಸಿದಂತೆ ಸಿದ್ದರಾಮಯ್ಯ ಅವರನ್ನೂ ಮುಗಿಸಬೇಕು’ ಎಂಬ ಹೇಳಿಕೆಗೆ ಸಂಬಂಧಿಸಿದಂತೆ ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಅಶ್ವತ್ಥನಾರಾಯಣ ಪರ ಸೋಮವಾರ ಹಾಜರಾಗಿದ್ದ ಹಿರಿಯ ವಕೀಲೆ ಲಕ್ಷ್ಮೀ ಅಯ್ಯಂಗಾರ್, ‘ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಪರಿಗಣಿಸಬೇಕು’ ಎಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಇದೇ 30ರಂದು (ಮಂಗಳವಾರ) ಅರ್ಜಿಯನ್ನು ವಿಚಾರಣೆಗೆ ನಿಗದಿಪಡಿಸಿದೆ.

’ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಮೈಸೂರಿನ ದೇವರಾಜ ಠಾಣೆಯ ಪೊಲೀಸರು ಮೇ 24ರಂದು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಲಾಗಿರುವ ಈ ರಿಟ್ ಅರ್ಜಿಯಲ್ಲಿ ದೇವರಾಜ ಠಾಣಾ ಪೊಲೀಸ್ ಮತ್ತು ದೂರುದಾರರೂ ಆದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಅರ್ಜಿ ಇತ್ಯರ್ಥವಾಗುವವರೆಗೆ ಎಫ್‌ಐಆರ್‌ಗೆ ತಡೆ ನೀಡಬೇಕು ಎಂದು ಮಧ್ಯಂತರ ಮನವಿ ಮಾಡಲಾಗಿದೆ.

ಪ್ರಕರಣವೇನು?: ಮಂಡ್ಯದ ಸಾತನೂರಿನಲ್ಲಿ 2022ರ ಫೆಬ್ರುವರಿ 15ರಂದು ನಡೆದಿದ್ದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಅಂದು ಸಚಿವರಾಗಿದ್ದ ಅಶ್ವತ್ಥನಾರಾಯಣ ಅವರು, ‘ಟಿಪ್ಪುವನ್ನು ಉರಿಗೌಡ-ನಂಜೇಗೌಡರು ಮುಗಿಸಿದಂತೆ ಸಿದ್ದರಾಮಯ್ಯ ಅವರನ್ನೂ ಮುಗಿಸಬೇಕು’ ಎಂಬ ಹೇಳಿಕೆ ನೀಡಿದ್ದರೆಂದು ದೂರಲಾಗಿತ್ತು. ಈ ಸಂಬಂಧ ಲಕ್ಷ್ಮಣ್ 2022ರ ಫೆಬ್ರುವರಿ 17ರಂದು ದೂರು ನೀಡಿದ್ದರು. ಈ ದೂರು ಆಧರಿಸಿ ಮೇ 24ರಂದು ಮೈಸೂರಿನ ದೇವರಾಜ ಠಾಣಾ ಪೊಲೀಸರು, ಕ್ರಿಮಿನಲ್ ಬೆದರಿಕೆ ಹಾಗೂ ಗಲಭೆಗೆ ಪ್ರಚೋದನೆ ನೀಡಿದ ಅಪರಾಧಗಳಡಿ ಎಫ್‌ಐಆರ್ ದಾಖಲಿಸಿ, ನಂತರ ಪ್ರಕರಣವನ್ನು ಮಂಡ್ಯ ಠಾಣೆಗೆ ವರ್ಗಾಯಿಸಿದ್ದಾರೆ.

ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ

ಇನ್ನೂ ಎರಡು ವರ್ಷ ‘ಬೊಂಬೆಹಬ್ಬ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಏಳು ದಿನಗಳ ಕಾಲ ಆಯೋಜಿಸಿದ್ದ ಬೊಂಬೆಹಬ್ಬವು ಪ್ರೇಕ್ಷಕರ ಮೆಚ್ಚುಗೆ ಗಳಿಸಿದೆ. ಮುಂದಿನ ಎರಡು ವರ್ಷವೂ ನಗರದಲ್ಲಿಯೇ ಬೊಂಬೆಹಬ್ಬ ನಡೆಸಲಾಗುವುದು’ ಎಂದು ಭಾರತೀಯ ವಿದ್ಯಾಭವನದ ಜಂಟಿ ನಿರ್ದೇಶಕಿ ನಾಗಲಕ್ಷ್ಮಿ ಕೆ. ರಾವ್ ಹೇಳಿದರು.

ಇನ್ಫೊಸಿಸ್ ಫೌಂಡೇಶನ್, ಭಾರತೀಯ ವಿದ್ಯಾಭವನ ಹಾಗೂ ಬುಕ್‌ಬ್ರಹ್ಮ ಸಹಯೋಗದಲ್ಲಿ ಬೊಂಬೆಹಬ್ಬದ ಅಂಗವಾಗಿ ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಸೋಮವಾರ ಬಹುಮಾನ ವಿತರಿಸಿ ಅವರು ಮಾತನಾಡಿದರು.

‘ಬೆಂಗಳೂರಿನ ಜತೆಗೆ ಮುಂಬೈ, ಪುದುಚೇರಿ, ದೆಹಲಿ, ಹೈದರಾಬಾದ್‌ನಲ್ಲಿ ವಿವಿಧ ಬಗೆಯ ಕಲೆಯನ್ನು ಆಧರಿಸಿ ಕಾರ್ಯಕ್ರಮ ನಡೆಸಲಾಗಿತ್ತು. ಬೆಂಗಳೂರಿನ ಬೊಂಬೆಹಬ್ಬದಲ್ಲಿ ವೃತ್ತಿ, ಪ್ರವೃತ್ತಿಯುಳ್ಳ ಕಲಾವಿದರಿಗೆ ವೇದಿಕೆ ಕಲ್ಪಿಸಲಾಗಿತ್ತು. ಈ ಹಬ್ಬದ ಮೂಲಕವೇ ಎಷ್ಟೋ ಕಲಾವಿದರನ್ನು ನಾಡಿಗೆ ಪರಿಚಯಿಸಲಾಯಿತು’ ಎಂದು ಹೇಳಿದರು.

ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್.ಸುರೇಶ್ ಮಾತನಾಡಿ, ‘ಪ್ರಬಂಧ ಸ್ಪರ್ಧೆಗಳು ನಡೆಯುವುದೇ ಅಪರೂಪವಾಗಿವೆ. ಪಠ್ಯದಲ್ಲೂ ಪ್ರಬಂಧಗಳು ಕಾಣಿಸುತ್ತಿಲ್ಲ. ವಿದ್ಯಾರ್ಥಿಗಳಲ್ಲೂ ಕುಳಿತು ಓದುವ ಹಾಗೂ ಬರೆಯುವ ಅಭ್ಯಾಸ ಕಡಿಮೆಯಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಎನ್‌ಎಂಕೆಆರ್‌ವಿ ಮಹಿಳಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಸಂಧ್ಯಾ ಹೆಗಡೆ ಮಾತನಾಡಿ, ‘ಜನಪ್ರಿಯ ಕಲೆಗಳನ್ನಷ್ಟೇ ಮುನ್ನೆಲೆಗೆ ತರುವ ಕೆಲಸ ನಡೆಯುತ್ತಿದೆ. ಆದರೆ, ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ನಡೆದ ಬೊಂಬೆಹಬ್ಬವು ಕಣ್ಮರೆಯಾಗುತ್ತಿರುವ ಕಲಾ ಪ್ರಕಾರಕ್ಕೆ ವೇದಿಕೆ ಕಲ್ಪಿಸಲಾಗಿತ್ತು. ಇದು ಸಂವೇದನಾ ಪೂರ್ಣ ಸಾಂಸ್ಕೃತಿಕ ಹೆಜ್ಜೆ’ ಎಂದು ಶ್ಲಾಘಿಸಿದರು.

ಆಡಳಿತ ಮಂಡಳಿ ಸದಸ್ಯ ರವಿಕುಮಾರ್ ಮಾತನಾಡಿ, ‘ಬೊಂಬೆ ಹಬ್ಬವನ್ನು ಆನ್‌ಲೈನ್‌ನಲ್ಲೇ 3.50 ಲಕ್ಷ ಮಂದಿ ವೀಕ್ಷಿಸಿದ್ದರು. ದೇಶ–ವಿದೇಶದ ಪ್ರೇಕ್ಷಕರೂ ಈ ಹಬ್ಬವನ್ನು ಕಣ್ತುಂಬಿಕೊಂಡರು’ ಎಂದರು.

‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಮಾತನಾಡಿದರು.

ಬುಕ್‌ಬ್ರಹ್ಮದ ಉಪಾಧ್ಯಕ್ಷೆ ಉಷಾ ಪ್ರಸಾದ್, ಸುರಾನಾ ಕಾಲೇಜಿನ ಕನ್ನಡ ವಿಭಾಗದ ಮಂಜುಳಾ ಗೋನಾಳ, ಉಪನ್ಯಾಸಕಿ ಶಿಲ್ಪಾ ಹಾಜರಿದ್ದರು.

ಬೊಂಬೆಹಬ್ಬದ ಅಂಗವಾಗಿ ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್, ಜಂಟಿ ನಿರ್ದೇಶಕಿ ನಾಗಲಕ್ಷ್ಮಿ ಕೆ. ರಾವ್, ಸದಸ್ಯ ರವಿಕುಮಾರ್ ಮತ್ತು ‘ಬುಕ್ ಬ್ರಹ್ಮ’ದ ಉಪಾಧ್ಯಕ್ಷೆ ಉಷಾ ಪ್ರಸಾದ್ ಅವರು ಬಹುಮಾನ ವಿತರಿಸಿದರು. (ಎಡದಿಂದ) ಎಂ.ಎಚ್.ರಶ್ಮಿ, ಕೆ.ವೈ.ಮಧುರಾ, ಎಂ.ಚಿತ್ರಶ್ರೀ, ಎಂ.ಚೈತ್ರಶ್ರೀ, ಗಾಯತ್ರಿ ಹೆಗಡೆ ಗಡಿಗೆಹೊಳೆ, ಆರ್.ಎಸ್.ಪವಿತ್ರಾ, ಎಲ್. ಚಂದನಾ ಬಹುಮಾನ ಸ್ವೀಕರಿಸಿದರು –ಪ್ರಜಾವಾಣಿ ಚಿತ್ರ

ಬಹುಮಾನ ವಿತರಣೆ

ಬೆಂಗಳೂರಿನ ಎನ್‌ಎಂಕೆಆರ್‌ವಿ ಮಹಿಳಾ ಕಾಲೇಜಿನ ವಿದ್ಯಾರ್ಥಿನಿ ಗಾಯಿತ್ರಿ ಹೆಗಡೆ ಗಡಿಗೆಹೊಳೆ (ಪ್ರಥಮ, ₹ 5 ಸಾವಿರ), ಹಾಸನ ಜಿಲ್ಲೆಯ ಹಳೆಬೀಡಿನ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಆರ್.ಎಸ್.ಪವಿತ್ರಾ (ದ್ವಿತೀಯ ಬಹುಮಾನ, ₹ 3 ಸಾವಿರ), ಹಳೆಬೀಡು ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಎಂ.ಚೈತ್ರಶ್ರೀ (ತೃತೀಯ, ₹ 2 ಸಾವಿರ) ಹಾಗೂ ಸಮಾಧಾನಕರ ಬಹುಮಾನಗಳನ್ನು ಎಲ್.ಚಂದನಾ, ಎಂ.ಎಚ್.ರಶ್ಮಿ, ಕೆ.ವೈ.ಮಧುರಾ, ಎಂ.ಚಿತ್ರಶ್ರೀ (ಪುಸ್ತಕ ಬಹುಮಾನ, ಪ್ರಮಾಣ ಪತ್ರ) ಅವರಿಗೆ ವಿತರಣೆ ಮಾಡಲಾಯಿತು.

ನಗರದಲ್ಲಿ ಇಂದು

‘ರಾಷ್ಟ್ರ ನಿರ್ಮಾಣಕ್ಕಾಗಿ ಸಿಎಸ್‌ಆರ್’ ಕುರಿತ ಸಂವಾದ: ನಿಧಿ ಪುಂಡೀರ್, ಆಯೋಜನೆ: ಎಚ್‌ಸಿಎಲ್ ಫೌಂಡೇಷನ್, ಸ್ಥಳ: ಭಾರತ ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ಸಭಾಂಗಣ, ಗಾಂಧಿನಗರ, ಮಧ್ಯಾಹ್ನ 12

ತಿಂಗಳ ಕಾರ್ಯಕ್ರಮ: ‘ಹೊಸ ಸರ್ಕಾರ–ಶೈಕ್ಷಣಿಕ ಮತ್ತು ಸಾಂಸ್ಕೃತಿಕ ನಿರೀಕ್ಷೆ’: ನಿರಂಜನಾರಾಧ್ಯ ವಿ.ಪಿ., ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್, ಆಯೋಜನೆ: ಬಂಡಾಯ ಸಾಹಿತ್ಯ ಸಂಘಟನೆ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 5

‘ಭಗವದ್ಗೀತೆ- ಪ್ರಥಮ ಅಧ್ಯಾಯ’ ಕುರಿತು ಧಾರ್ಮಿಕ ಪ್ರವಚನ: ಸುಧೀಂದ್ರಾಚಾರ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪ್ಲಾಟ್ ಫಾರಂ ರಸ್ತೆ, ಶೇಷಾದ್ರಿಪುರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಬಿಡಿಎ: ಭ್ರಷ್ಟಾಚಾರ ಹಣೆಪಟ್ಟಿ ಕಳಂಕದಿಂದ ಹೊರಗೆ ಬನ್ನಿ – ಡಿಸಿಎಂ ಡಿ.ಕೆ.ಶಿವಕುಮಾರ್

ಡಿ–ನೋಟಿಫಿಕೇಶನ್ ಮಾಡದಂತೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಡಿಎಗೆ ಭ್ರಷ್ಟಾಚಾರ ಕಳಂಕ ಸುತ್ತಿಕೊಂಡಿದ್ದು, ಆ ಹಣೆಪಟ್ಟಿಯಿಂದ ಹೊರಗೆ ತರಬೇಕು' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಾಕೀತು ಮಾಡಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ದಲ್ಲಿ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದ ಅವರು, 'ಕಾನೂನು ಬಾಹಿರ ಚಟುವಟಿಕೆಗಳಿಗೆ ಆಸ್ಪದ ನೀಡದಂತೆ ಕೆಲಸ ನಡೆಸಬೇಕು. ಬಿಡಿಎ ವ್ಯಾಪ್ತಿಯಲ್ಲಿ ಇನ್ನು ಮುಂದೆ ಯಾವುದೇ ಡಿ–ನೋಟಿಫಿಕೇಶನ್ ಮಾಡುವಂತಿಲ್ಲ' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ಕೇವಲ ಅಧಿಸೂಚನೆ ಹೊರಡಿಸಿದರೆ ಸಾಲದು. ಅದಕ್ಕೆ ತಕ್ಕಂತೆ ಕಾಮಗಾರಿ ಗಡುವಿನ ಒಳಗಾಗಿ ಪೂರ್ಣಗೊಳಿಸಬೇಕು. ನಗರದಲ್ಲಿ ವಾಹನ ಸಂಚಾರ ದಟ್ಟಣೆ ವಿಪರೀತವಾಗಿದೆ. ಅದರ ಸುಧಾರಣೆಗೆ ಮೊದಲು ಕ್ರಮ ಕೈಗೊಳ್ಳಬೇಕು. ಅಗತ್ಯ ಸ್ಥಳಗಳಲ್ಲಿ ರಸ್ತೆಗಳ ವಿಸ್ತರಣೆ ಮಾಡಬೇಕು. ಜಮೀನು ಕಳೆದುಕೊಂಡ ಸಂತ್ರಸ್ತರಿಗೆ ಸರಿಯಾದ ಪರಿಹಾರ ವಿತರಣೆ ಮಾಡಬೇಕು' ಎಂದು ಸೂಚಿಸಿದರು.

'ಅನೇಕ ದಿನಗಳಿಂದ ನನೆಗುದಿಗೆ ಬಿದ್ದಿರುವ ಯೋಜನೆಗಳನ್ನು ಪೂರ್ಣಗೊಳಿಸಬೇಕು. 73.40 ಕಿ.ಮೀ ಉದ್ದದ ಪೆರಿಫೆರಲ್ ವರ್ತುಲ ರಸ್ತೆಯನ್ನು ಶೀಘ್ರವೇ ಅನುಷ್ಠಾನಕ್ಕೆ ತರಬೇಕು' ಎಂದು ಸೂಚಿಸಿದರು.

'ಬಿಡಿಎನಲ್ಲಿ ಭ್ರಷ್ಟಾಚಾರ ನಿಲ್ಲಬೇಕು. ಮುಂದೆ ಭ್ರಷ್ಟಾಚಾರ ನಡೆದರೆ ಅದನ್ನು ಸಹಿಕೊಂಡು ಕೂರುವುದಿಲ್ಲ. ನಗರದ ಅಭಿವೃದ್ಧಿಗೆ ಎಲ್ಲ ರೀತಿಯಲ್ಲೂ ಸಹಕಾರ ನೀಡುತ್ತೇನೆ. ಅಧಿಕಾರಿಗಳೂ ಅದಕ್ಕೆ ಬದ್ಧವಾಗಿ ಕೆಲಸ ಮಾಡಬೇಕು' ಎಂದು ಹೇಳಿದರು. ಬಿಡಿಎ ಆಯುಕ್ತ ಕುಮಾರ್‌ನಾಯಕ್ ಹಾಜರಿದ್ದರು.

> **ಬಿಡಿಎನಲ್ಲಿ ದೊಡ್ಡಮಟ್ಟದ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ನಗರದ ಅಭಿವೃದ್ಧಿಗೆ ಯಾವೆಲ್ಲ ಬದಲಾವಣೆಗಳನ್ನು ತರಬೇಕು ಎಂಬುದನ್ನು ಅಧಿಕಾರಿಗಳಿಗೆ ಸೂಚಿಸಿದ್ದೇನೆ.**
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

> **ಬೆಳೆದ ಫಸಲು ಕಾಪಾಡಿಕೊಳ್ಳಲು ಮುಂದಾಗಿದ್ದಕ್ಕೆ ರೈತರ ಮೇಲೆ ಪ್ರಕರಣ ದಾಖಲಿಸಲಾಗಿದೆ. ಎಲ್ಲ ಪ್ರಕರಣಗಳನ್ನೂ ವಾಪಸ್ ಪಡೆಯಬೇಕು.**
> **ಎಂ.ರಮೇಶ್,** ರಾಮಗೊಂಡನಹಳ್ಳಿ

ಡಾ.ಶಿವರಾಮ ಕಾರಂತ ಬಡಾವಣೆ: ಅಭಿವೃದ್ಧಿಪಡಿಸಿದ ಶೇಕಡ 60 ಭೂಮಿಗೆ ಪಟ್ಟು

ಡಾ.ಶಿವರಾಮ ಕಾರಂತ ಬಡಾವಣೆಗೆ ಕೃಷಿ ಜಮೀನು ಕಳೆದುಕೊಂಡಿರುವ ರೈತರಿಗೆ 2013ರ ಭೂಸ್ವಾಧೀನ ಕಾಯ್ದೆ ಅಂತೆಯೇ ಭೂಪರಿಹಾರ ನೀಡಬೇಕು ಅಥವಾ ಅಭಿವೃದ್ಧಿಪಡಿಸಿದ ಶೇ 60ರಷ್ಟು ಭೂಮಿ ನೀಡಬೇಕು ಎಂದು ಆಗ್ರಹಿಸಿ, ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ರೈತರು ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ರೈತರ ಮೇಲೆ ಹಾಕಿರುವ ಪ್ರಕರಣಗಳನ್ನು ವಾಪಸ್ ಪಡೆಯಬೇಕು. ತಕ್ಷಣವೇ ಜಾನುವಾರುಗಳು, ಕುರಿ–ಮೇಕೆಗಳಿಗೆ ಮೇವು ಒದಗಿಸಬೇಕು ಎಂದು ಆಗ್ರಹಿಸಿದರು.

ರೈತ ಕುಟುಂಬಗಳಿಗೆ ತಮ್ಮ ಜೀವನ ನಿರ್ವಹಣೆ, ಮಕ್ಕಳ ವಿದ್ಯಾಭ್ಯಾಸ, ವೃದ್ಧರ ಆರೋಗ್ಯ ತಪಾಸಣೆ, ದೈನಂದಿನ ಬದುಕಿಗಾಗಿ ಯೋಜನೆ ಪೂರ್ಣಗೊಳ್ಳುವ ತನಕ ಮಾಸಾಶನ ನೀಡಬೇಕು ಎಂದು ಸಂತ್ರಸ್ತರು ಕೋರಿದರು.

ಯೋಜನೆ ಮಂಜೂರಾತಿಗೆ ಬಿಡಿಎ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ 2013ರ ಭೂಸ್ವಾಧೀನ ಕಾಯ್ದೆ ಅಡಿಯಲ್ಲೇ ಭೂಪರಿಹಾರ ನೀಡಲಾಗುವುದು ಹೇಳಿತ್ತು. ಅದೇ ಪ್ರಸ್ತಾವಕ್ಕೆ ಸರ್ಕಾರವು ಒಪ್ಪಿಗೆ ಸಹ ನೀಡಿತ್ತು. ರಾಜ್ಯಪತ್ರದಲ್ಲೂ ಅದೇ ಅಂಶವಿದೆ. 2018ರಿಂದ 2020ರ ತನಕ ಜಾರಿ ಮಾಡಿರುವ ನೋಟಿಸ್‌ಗಳಲ್ಲೂ 2013ರ ಭೂಸ್ವಾಧೀನ ಕಾಯ್ದೆ ಪ್ರಕಾರವೇ ಪರಿಹಾರ ನೀಡುತ್ತೇವೆ ಎಂದು ಭರವಸೆ ನೀಡಿತ್ತು. ಆದರೆ, 2021ರ ಈಚೆಗೆ 1894ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನೀಡುತ್ತೇವೆಂದು ಹೇಳಿ ರೈತರನ್ನು ಬಿಡಿಎ ಅಧಿಕಾರಿಗಳು ವಂಚಿಸುತ್ತಿದ್ದಾರೆ ಎಂದು ರಾಮಗೊಂಡನಹಳ್ಳಿ ಎಂ.ರಮೇಶ್ ಅವರು ಸಚಿವರ ಎದುರು ಅಳಲು ತೋಡಿಕೊಂಡರು.

ಸುಪ್ರೀಂ ಕೋರ್ಟ್ ನೇಮಿಸಿರುವ ಸಮಿತಿಯ ಉಸ್ತುವಾರಿಯಲ್ಲಿ ರೈತರ ಸಹಭಾಗಿತ್ವದಲ್ಲಿ ಬಡಾವಣೆ ಅಭಿವೃದ್ಧಿಗೊಳ್ಳಬೇಕಿತ್ತು. ಬಿಡಿಎ ಅಧಿಕಾರಿಗಳು ರೈತರನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ ಎಂದ ಆಪಾದಿಸಿದರು.

ಬೆಳೆ ನಾಶ: ಸಿಗದ ಪರಿಹಾರ

'ಫೆ.24ರಂದು ರೈತರಿಗೆ ಯಾವುದೇ ನೋಟಿಸ್ ನೀಡದೇ ಪೊಲೀಸರೊಂದಿಗೆ ಆಗಮಿಸಿ ಬೆಳೆಗಳನ್ನು ನಾಶ ಪಡಿಸಿದ್ದರು. ಇದರಿಂದ ಜಾನುವಾರುಗಳಿಗೂ ಮೇವು ಇಲ್ಲವಾಗಿದೆ. ಜಾನುವಾರುಗಳಿಗೆ ಮೇವು ಒದಗಿಸಲೂ ಪರಿಹಾರ ನೀಡಿಲ್ಲ' ಎಂದು ಅಳಲು ತೋಡಿಕೊಂಡರು.

'ಈ ಭಾಗದಲ್ಲಿ ರೈತರು ಹೈನುಗಾರಿಕೆಯನ್ನೇ ಅವಲಂಬಿಸಿದ್ದಾರೆ. ರೈತರಿಗೆ ಪುನರ್ವಸತಿ ಕಲ್ಪಿಸದೇ ಬೆಳೆಗಳನ್ನು ನಾಶ ಪಡಿಸಲಾಗಿದೆ. ಜಾನುವಾರುಗಳಿಗೆ ಬೆಳೆದ ಮೇವು ನಾಶ ಪಡಿಸುವುದು ನ್ಯಾಯಾಲಯ ಆದೇಶದ ಉಲ್ಲಂಘನೆ' ಎಂದು ಸಂತ್ರಸ್ತರು ಕಣ್ಣೀರು ಹಾಕಿದರು.

ಸುದ್ದಿ 2 ನಿಮಿಷ

ಅಕ್ರಮ ಆರೋಪದ ಬಗ್ಗೆ ಪರಿಶೀಲಿಸಿ ತನಿಖೆ: ದಿನೇಶ್

ಬೆಂಗಳೂರು: 'ಹಿಂದಿನ ಸರ್ಕಾರದ ಅವಧಿಯಲ್ಲಿ ನಡೆದ ಅಕ್ರಮಗಳ ಬಗ್ಗೆ ಮಾಡಿರುವ ಆರೋಪಗಳನ್ನು ಪರಿಶೀಲಿಸಿ, ತನಿಖೆ ನಡೆಸುವ ಕುರಿತು ತೀರ್ಮಾನಿಸುತ್ತೇವೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಯಾರ ಮೇಲೂ ಸೇಡು ತೀರಿಸಿಕೊಳ್ಳಲು ತನಿಖೆಗೆ ಆದೇಶ ನೀಡುವುದಿಲ್ಲ. ವ್ಯವಸ್ಥೆಯನ್ನು ಸರಿಪಡಿಸಬೇಕಿದೆ' ಎಂದು ಸಮರ್ಥನೆ ನೀಡಿದರು.

'ಎಲ್ಲೆಲ್ಲಿ ಲೋಪಗಳಾಗಿವೆ ಎಂಬುದನ್ನು ಪತ್ತೆ ಮಾಡಿ ಸರಿಪಡಿಸುವ ಕೆಲಸ ಆಗಬೇಕಿದೆ. ಈ ಬಗ್ಗೆ ಪರಿಶೀಲಿಸಲು ಇಲಾಖೆಯ ಅಧಿಕಾರಿಗಳ ಜೊತೆ ಮಂಗಳವಾರ ಸಭೆ ಆಯೋಜಿಸಿದ್ದೇನೆ' ಎಂದರು.

'ಆರೋಗ್ಯ ಇಲಾಖೆಯಲ್ಲಿ ಸಾಕಷ್ಟು ಸವಾಲುಗಳಿವೆ. ಅವುಗಳನ್ನು ನಿಭಾಯಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿನ ಅವ್ಯವಸ್ಥೆ ವಿಚಾರದ ಬಗ್ಗೆಯೂ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ. ಆರೋಗ್ಯ ಇಲಾಖೆಯ ಕೆಲಸದ ಬಗ್ಗೆ ಸಾರ್ವಜನಿಕರಲ್ಲಿ ಅಸಮಾಧಾನವಿದೆ. ಆರೋಗ್ಯ ಸೇವೆ ಸರಿಯಾಗಿ ದೊರಕುವಂತೆ ಮಾಡಬೇಕಿದೆ' ಎಂದೂ ಹೇಳಿದರು.

ಮಿತ ಆಹಾರ ಸಕ್ಕರೆ ಕಾಯಿಲೆಗೆ ಮದ್ದು: ಡಾ. ಅನೂಪ್ ಮಿಶ್ರಾ

ಬೆಂಗಳೂರು: 'ಹಿತಮಿತ ಆಹಾರ ಸೇವನೆ, ನಿತ್ಯನಡಿಗೆ, ವ್ಯಾಯಾಮ ಹಾಗೂ ವೈದ್ಯರ ಸಲಹೆ ಮುಂತಾದ ಕ್ರಮಗಳಿಂದ ಸಕ್ಕರೆ ಕಾಯಿಲೆ ನಿಯಂತ್ರಿಸಲು ಸಾಧ್ಯ' ಎಂದು ತಜ್ಞ ವೈದ್ಯ ಡಾ. ಅನೂಪ್ ಮಿಶ್ರಾ ಹೇಳಿದರು.

ನಗರದಲ್ಲಿ ನಡೆದ 'ಡಾ. ಅರವಿಂದ್ ಡಯಾಬಿಟಿಕ್ ಸೆಂಟರ್' ಆಯೋಜಿಸಿದ್ದ ಎರಡು ದಿನಗಳ ರಾಷ್ಟ್ರೀಯ ಡಯಾಬಿಟಿಕ್ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

'ಸಕ್ಕರೆ ಕಾಯಿಲೆ ತಡೆಗಾಗಿ ದೇಶ–ವಿದೇಶಗಳಲ್ಲಿ ಔಷಧ ವಿಚಾರದಲ್ಲಿ ಹೊಸ–ಹೊಸ ಆವಿಷ್ಕಾರಗಳು ನಡೆಯುತ್ತಿವೆ. ಆದರೆ, ಮುಂಜಾಗ್ರತಾ ಕ್ರಮ ಕೈಗೊಳ್ಳುವುದರಿಂದ ಜನರು ಸುರಕ್ಷಿತವಾಗಿರಬಹುದು' ಎಂದು ಸಲಹೆ ನೀಡಿದರು.

'ಬೆಂಗಳೂರು ಈಗ ಆರೋಗ್ಯ ಕಾಮಧೇನು (ಹೆಲ್ತ್ ಸಿಟಿ) ಆಗಿ ದೇಶ–ವಿದೇಶಗಳ ರೋಗಿಗಳನ್ನು ಆಕರ್ಷಿಸುತ್ತಿದೆ. ಕೋವಿಡ್ ಕಾರಣದಿಂದ ಕಳೆದ ಮೂರು ವರ್ಷಗಳಿಂದ ಡಯಾಬಿಟಿಸ್ ತಡೆಯ ಸಮ್ಮೇಳನ ಆಯೋಜಿಸಿರಲಿಲ್ಲ. ಇನ್ನು ಮುಂದೆ ಪ್ರತಿವರ್ಷವೂ ಸಮ್ಮೇಳನ ನಡೆಸಲಾಗುವುದು' ಎಂದು ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಅರವಿಂದ್ ತಿಳಿಸಿದರು.

ಈ ಎರಡು ದಿನಗಳ ಸಮ್ಮೇಳನದಲ್ಲಿ ದೇಶದ ವಿವಿಧ ಭಾಗಗಳಿಂದ ಸುಮಾರು 500 ವೈದ್ಯರು ಭಾಗವಹಿಸಿದ್ದರು.

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ನ್ಯಾಯ ಕೇಳಿದ ಕುಸ್ತಿಪಟುಗಳ ಮೇಲೆ ದೌರ್ಜನ್ಯ: ಎಐಎಂಎಸ್‌ಎಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಘನತೆ ಎತ್ತಿ ಹಿಡಿದಿದ್ದ ಮಹಿಳಾ ಕುಸ್ತಿಪಟುಗಳ ಮೇಲೆ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ. ನ್ಯಾಯ ಕೇಳಿದ್ದಕ್ಕಾಗಿ ವಶಕ್ಕೆ ಪಡೆದು ಅಮಾನವೀಯವಾಗಿ ವರ್ತಿಸಿದ್ದಾರೆ' ಎಂದು ಆರೋಪಿಸಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಪದಾಧಿಕಾರಿಗಳು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, 'ಕುಸ್ತಿಪಟುಗಳ ಹೋರಾಟಕ್ಕೆ ನಮ್ಮ ಬೆಂಬಲ' ಎಂಬ ಬರಹವುಳ್ಳ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಹಾಕಿದರು.

'ಸಂಸತ್ ಭವನ ಬಳಿ ಮಹಿಳಾ ಕುಸ್ತಿಪಟುಗಳನ್ನು ವಶಕ್ಕೆ ಪಡೆದು, ಪ್ರತಿಭಟನೆ ಹತ್ತಿಕ್ಕಲು ಯತ್ನಿಸಲಾಗಿದೆ. ಕೇಂದ್ರ ಸರ್ಕಾರ, ಪೊಲೀಸರ ನಡೆ ಪ್ರಜಾಪ್ರಭುತ್ವ ವಿರೋಧಿ ಹಾಗೂ ಅಮಾನವೀಯ. ಹೊಸ ಸಂಸತ್ ಭವನದ ಉದ್ಘಾಟನೆ ಸಂದರ್ಭದಲ್ಲಿಯೇ ಮಹಿಳೆಯರ ಹಕ್ಕುಗಳು ಹಾಗೂ ಅವರ ಧ್ವನಿಯನ್ನು ದಮನಗೊಳಿಸುವ ಕೃತ್ಯ ಇದಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ನಾರಿಶಕ್ತಿ ಎಂಬುದಾಗಿ ಹೆಣ್ಣು ಮಕ್ಕಳನ್ನು ಹೊಗಳುವ ಪ್ರಧಾನಿ, ಮಹಿಳಾ ಕುಸ್ತಿಪಟುಗಳ ಪ್ರತಿಭಟನೆ ಬಗ್ಗೆ ಮೌನ ವಹಿಸಿರುವುದು ಖಂಡನೀಯ. ಲೈಂಗಿಕ ದೌರ್ಜನ್ಯದ ಆರೋಪಿ ರಾಜಾರೋಷವಾಗಿ ಓಡಾಡಿಕೊಂಡಿದ್ದಾರೆ. ಆದರೆ, ಕೃತ್ಯವನ್ನು ಖಂಡಿಸಿ ಪ್ರತಿಭಟನೆ ನಡೆಸಿದವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಇದು ಯಾವ ನ್ಯಾಯ' ಎಂದು ಪ್ರತಿಭಟನಕಾರರು ಪ್ರಶ್ನಿಸಿದರು.

'ಮಹಿಳಾ ಕುಸ್ತಿಪಟುಗಳ ಜೊತೆ ಹಲವು ಮುಖಂಡರ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ಎಲ್ಲ ಎಫ್‌ಐಆರ್‌ಗಳನ್ನು ರದ್ದುಪಡಿಸಬೇಕು. ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರನ್ನು ಬಂಧಿಸಿ, ಕಾನೂನು ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದರು.

ಪಂಚಮಸಾಲಿ ಮೀಸಲು: ಹೈಕೋರ್ಟ್ ಸೂಚನೆ

'ಅರ್ಜಿದಾರರಿಗೆ ಮಧ್ಯಂತರ ವರದಿ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2ಎಗೆ ಸೇರ್ಪಡೆ ಮಾಡುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನ್ಯಾಯಾಲಯಕ್ಕೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿರುವ ಮಧ್ಯಂತರ ವರದಿಯನ್ನು ಅರ್ಜಿದಾರರಿಗೆ ಒದಗಿಸುವಂತೆ ಹೈಕೋರ್ಟ್, ಕೋರ್ಟ್ ಅಧಿಕಾರಿಗೆ ನಿರ್ದೇಶಿಸಿದೆ.

ಈ ಸಂಬಂಧ ಬೆಂಗಳೂರಿನ ಜ್ಞಾನ ಭಾರತಿಯ ಮೃತ್ಯುಂಜಯ ನಗರದ ನಿವಾಸಿ ಡಿ.ಜಿ ರಾಘವೇಂದ್ರ ಬಿನ್ ಸೂರ್ಯ ದೇವಾಡಿಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಿರಿಯ ವಕೀಲ ರವಿವರ್ಮ ಕುಮಾರ್, 'ಮುಚ್ಚಿದ ಲಕೋಟೆಯಲ್ಲಿ ವರದಿ ಸಲ್ಲಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗಷ್ಟೇ ಹೇಳಿದೆ. ಆದ್ದರಿಂದ, ಈ ಹಿಂದೆ ನ್ಯಾಯಾಲಯಕ್ಕೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲಾಗಿರುವ ವರದಿಯನ್ನು ನೀಡಲು ನಿರ್ದೇಶಿಸಬೇಕು' ಎಂದು ಕೋರಿದರು. ಈ ಕೋರಿಕೆಯನ್ನು ನ್ಯಾಯಪೀಠ ಪುರಸ್ಕರಿಸಿತು.

ಅಂತೆಯೇ, 'ಮುಸ್ಲಿಂ ಮೀಸಲಾತಿ ರದ್ದುಪಡಿಸಿರುವ ರಾಜ್ಯ ಸರ್ಕಾರದ ಆದೇಶ ಪ್ರಶ್ನಿಸಲಾದ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ಇದ್ದು ಈ ಅರ್ಜಿ ಜುಲೈ 25ರಂದು ವಿಚಾರಣೆಗೆ ಬರಲಿದೆ ಎಂಬ ಕಾರಣದಿಂದ ಸುಪ್ರೀಂ ಕೋರ್ಟ್‌ನ ಬೆಳವಣಿಗೆ ಆಧರಿಸಿ ಹೈಕೋರ್ಟ್‌ನಲ್ಲಿರುವ ಈ ಅರ್ಜಿ ವಿಚಾರಣೆಗೆ ಮನವಿ ಸಲ್ಲಿಸಲು ಉಭಯ ಪಕ್ಷಕಾರರಿಗೆ ಸ್ವಾತಂತ್ರ್ಯ ಕಲ್ಪಿಸಲಾಗಿದೆ' ಎಂದು ತಿಳಿಸಿ ವಿಚಾರಣೆ ಮುಂದೂಡಿತು. ಅರ್ಜಿದಾರರ ಪರ ವಕೀಲ ಎಚ್.ವಿ.ಮಂಜುನಾಥ್ ವಾದಿಸಿದರು.

ಕೋರಿಕೆಯೇನು?: 'ಈ ಅರ್ಜಿ ಇತ್ಯರ್ಥವಾಗುವ ತನಕ ಸರ್ಕಾರ 2022ರ ಡಿಸೆಂಬರ್‌ನಲ್ಲಿ ಕೈಗೊಂಡಿರುವ ನಿರ್ಧಾರಕ್ಕೆ ಸಂಬಂಧಿಸಿ ಕೈಗೊಂಡ ಎಲ್ಲ ಕ್ರಮಗಳಿಗೆ ತಡೆ ನೀಡಬೇಕು. ಉಪಜಾತಿಗಳು, ಸಮುದಾಯಗಳು ಅಥವಾ ಬುಡಕಟ್ಟು ಸಮುದಾಯದವರು ತಮ್ಮ ಕೋಟಾ ಅಥವಾ ಸ್ಥಿತಿಯನ್ನು ಬದಲಾಯಿಸದಂತೆ ಪ್ರತಿವಾದಿಗಳಿಗೆ ನಿರ್ದೇಶಿಸಬೇಕು' ಎಂದು ಮಧ್ಯಂತರ ಮನವಿಯಲ್ಲಿ ಕೋರಲಾಗಿದೆ.

'ನಮಗೂ ಪರಿಹಾರ, ಉದ್ಯೋಗ ಕೊಡಲಿ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ನಮ್ಮ ಕುಟುಂಬದ ಯುವಕರು ಕೋಮುದ್ವೇಷಕ್ಕೆ ಬಲಿಯಾಗಿದ್ದರೂ ಹಿಂದಿನ ಸರ್ಕಾರ ಪರಿಹಾರದಲ್ಲಿ ತಾರತಮ್ಯವೆಸಗಿತ್ತು. ಈ ಅನ್ಯಾಯ ಸರಿಪಡಿಸಬೇಕು' ಎಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹತ್ಯೆಗೊಳಗಾದ ಮೂವರು ಮುಸ್ಲಿಂ ಯುವಕರ ಮನೆಯವರು ಒತ್ತಾಯಿಸಿದ್ದಾರೆ.

'ಪ್ರವೀಣ್ ನೆಟ್ಟಾರು ಅವರ ಪತ್ನಿಗೆ ಉದ್ಯೋಗ ಕಲ್ಪಿಸಿದಂತೆ ನಮ್ಮ ಕುಟುಂಬದವರಿಗೂ ಸರ್ಕಾರ, ಉದ್ಯೋಗ ಕಲ್ಪಿಸಬೇಕು' ಎಂದಿದ್ದಾರೆ.

ಬಿಜೆಪಿ ಯುವಮೋರ್ಚಾ ಜಿಲ್ಲಾ ಕಾರ್ಯಕಾರಿಣಿ ಸದಸ್ಯರಾಗಿದ್ದ ಪ್ರವೀಣ್ ನೆಟ್ಟಾರು ಹತ್ಯೆಗೆ (2022ರ ಜುಲೈ 26) ಒಂದು ವಾರ ಮುಂಚೆ ಬೆಳ್ಳಾರೆ ಕಳೆಂಜದ ಯುವಕ ಮಸೂದ್ ಮೇಲೆ ಹಲ್ಲೆ ನಡೆದಿತ್ತು. ಅವರು ಜುಲೈ 21ರಂದು ಅಸುನೀಗಿದ್ದರು.

'ಪ್ರಜಾವಾಣಿ' ಜೊತೆ ಮಾತನಾಡಿದ ದಿ.ಮಸೂದ್ ತಾಯಿ ಸಾರಮ್ಮ, 'ನಮಗೂ ಪರಿಹಾರ ಕೊಡಬೇಕು. ನಮ್ಮ ಕುಟುಂಬದಲ್ಲೂ ಯಾರಿಗಾದರೂ ಸರ್ಕಾರಿ ಉದ್ಯೋಗ ಕೊಡಬೇಕು' ಎಂದು ಒತ್ತಾಯಿಸಿದರು.

ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು 2022ರ ಜುಲೈ 28ರಂದು ಪ್ರವೀಣ್ ನೆಟ್ಟಾರು ಮನೆಗೆ ಭೇಟಿ ನೀಡಿದ್ದರು. ಅಂದು ರಾತ್ರಿ ಸುರತ್ಕಲ್‌ನಲ್ಲಿ ಮೊಹಮ್ಮದ್ ಫಾಜಿಲ್ ಹತ್ಯೆ ನಡೆದಿತ್ತು.

'ಪ್ರವೀಣ್ ನೆಟ್ಟಾರು ಹತ್ಯೆಗೆ ಪ್ರತೀಕಾರವಾಗಿ ನನ್ನ ಮಗನನ್ನು ಕೊಲ್ಲಲಾಯಿತು. ಅದರ ಮರುದಿನ, ಇನ್ನೊಬ್ಬ ಮಗ ಉದ್ಯೋಗಕ್ಕಾಗಿ ವಿದೇಶಕ್ಕೆ ತೆರಳಬೇಕಿತ್ತು. ಆತ ಇಲ್ಲೇ ಉಳಿದ. ನಮಗೆ ಬಿಡಿಗಾಸಿನ ಪರಿಹಾರವೂ ಸಿಕ್ಕಿಲ್ಲ. ಉದ್ಯೋಗವೂ ಸಿಕ್ಕಿಲ್ಲ. ಈಗಿನ ಸರ್ಕಾರವಾದರೂ ನ್ಯಾಯ ಕೊಡಿಸಲಿ' ಎಂದು ಫಾಜಿಲ್ ತಂದೆ ಉಮರ್ ಫಾರೂಕ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸೋದರ ಕೋಮುದ್ವೇಷಕ್ಕೆ ಬಲಿಯಾದರೂ ಪರಿಹಾರ ಸಿಕ್ಕಿಲ್ಲ. ಆರೋಪಿಗಳಲ್ಲಿ ಒಬ್ಬಾತ ಜಾಮೀನು ಪಡೆದು ರಾಜಾರೋಷವಾಗಿ ಓಡಾಡುತ್ತಿದ್ದಾನೆ' ಎಂದು ಜಲೀಲ್ ಸಹೋದರ ಅಬ್ದುಲ್ ಹಮೀದ್ ನೋವು ತೋಡಿಕೊಂಡರು.

ಶರಣ್ ಪಂಪ್‌ವೆಲ್ ಬಂಧಿಸಲು ಆಗ್ರಹ: 'ಪ್ರವೀಣ್ ನೆಟ್ಟಾರು ಹತ್ಯೆಗೆ ಪ್ರತೀಕಾರವಾಗಿಯೇ ಫಾಜಿಲ್ ಹತ್ಯೆ ನಡೆಸಿದ್ದೇವೆ ಎಂದು ವಿಶ್ವಹಿಂದೂ ಪರಿಷತ್ ಮುಖಂಡ ಶರಣ್ ಪಂಪ್‌ವೆಲ್ ಬಹಿರಂಗ ಹೇಳಿಕೆ ನೀಡಿದ್ದರು. ಈ ಬಗ್ಗೆ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದರೂ ಪೊಲೀಸರು ಅವರನ್ನು ಬಂಧಿಸಿಲ್ಲ. ಸರ್ಕಾರ ಅವರ ಬಂಧನಕ್ಕೆ ಕ್ರಮಕೈಗೊಳ್ಳಬೇಕು' ಎಂದು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಶಾಹುಲ್ ಹಮೀದ್ ಒತ್ತಾಯಿಸಿದರು.

ಕಾಡಿನಲ್ಲಿ ಸಿಲುಕಿದ್ದ ಟೆಕಿ ರಕ್ಷಣೆ

ಕೊಟ್ಟಿಗೆಹಾರ: ಬಾಳೂರು ಹೋಬಳಿ ಸುಂಕಸಾಲೆ ಬಳಿಯ ಬಲ್ಲಾಳರಾಯನದುರ್ಗ ರಾಣಿಝರಿ ಫಾಲ್ಸ್‌ಗೆ ಚಾರಣಕ್ಕೆ ಬಂದು, ಭಾನುವಾರ ಸಂಜೆ ಕಾಡಿನಲ್ಲಿ ದಾರಿ ತಪ್ಪಿ ನಾಪತ್ತೆಯಾಗಿದ್ದ ಬೆಂಗಳೂರಿನ ಐಟಿ ಕಂಪನಿ ಉದ್ಯೋಗಿ, ಮಹಾರಾಷ್ಟ್ರದ ಕಿಶನ್‌ಲಾಲ್ ಅಗರ್‌ವಾಲ್ (25) ಸೋಮವಾರ ಪತ್ತೆಯಾಗಿದ್ದಾರೆ.

ಸತತ 10 ಗಂಟೆ ಕಾರ್ಯಾಚರಣೆ ನಡೆಸಿದ ಸ್ಥಳೀಯ ಯುವಕರ ತಂಡ, ಇವರನ್ನು ಪತ್ತೆಮಾಡಿ ರಕ್ಷಿಸಿದೆ.

ಕಿಶನ್‌ಲಾಲ್ ಭಾನುವಾರ ಬೆಳಿಗ್ಗೆ 8 ಗಂಟೆಗೆ ಸಂಕಸಾಲೆ ಬಳಿ ಬೈಕ್ ನಿಲ್ಲಿಸಿ, ಅಲ್ಲಿಂದ ಚಾರಣ ಆರಂಭಿಸಿದ್ದರು. ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಗೆ ಬರುವ ಬಂಡಾಜೆ ಫಾಲ್ಸ್‌ಗೆ ಹೋಗಿ, ವಾಪಸ್ ಬರುವಾಗ ದಾರಿ ತಪ್ಪಿದ್ದರು. ಸ್ನೇಹಿತನಿಗೆ ಲೋಕೇಶನ್ ಕಳುಹಿಸಿ ಸಹಾಯ ಕೇಳಿದ್ದರು. ಸ್ನೇಹಿತ 112 ಸಹಾಯವಾಣಿ ಹಾಗೂ ಸ್ಥಳೀಯ ರಕ್ಷಣಾ ತಂಡಕ್ಕೆ ಮಾಹಿತಿ ನೀಡಿ, ರಕ್ಷಣೆಗೆ ಮನವಿ ಮಾಡಿದ್ದರು.

ಭಾನುವಾರ ಸಂಜೆ 6 ಗಂಟೆಗೆ ಸ್ಥಳೀಯ ಯುವಕರ ತಂಡ ರಕ್ಷಣಾ ಕಾರ್ಯಾಚರಣೆ ಆರಂಭಿಸಿತ್ತು. ಸೋಮವಾರ ನಸುಕಿನ 3.30ರ ಸುಮಾರಿಗೆ ಬಂಡಾಜೆ ಫಾಲ್ಸ್‌ನ ತುದಿಯಲ್ಲಿ ಮೊಬೈಲ್ ನೆಟ್‌ವರ್ಕ್ ಸಿಗುವ ಸ್ಥಳವೊಂದರಲ್ಲಿ, ಬಂಡೆಗಳ ಮಧ್ಯೆ ಬೆಂಕಿ ಹಾಕಿಕೊಂಡು ರಕ್ಷಣೆ ಪಡೆದಿದ್ದ ಕಿಶನ್‌ಲಾಲ್‌ನನ್ನು ಪತ್ತೆಮಾಡಿ, ರಕ್ಷಿಸಲಾಯಿತು.

ಕಿಶನ್‌ಲಾಲ್‌ಗೆ ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ನಂತರ ಬಾಳೂರು ಪೊಲೀಸ್ ಠಾಣೆಗೆ ಕರೆತರಲಾಯಿತು. ಬಾಳೂರು ಸಬ್‌ಇನ್‌ಸ್ಪೆಕ್ಟರ್ ಸಿ.ಸಿ. ಪವನ್ ಕುಮಾರ್ ಮಾಹಿತಿ ಪಡೆದುಕೊಂಡರು.

ರಕ್ಷಣಾ ತಂಡದಲ್ಲಿ ಸ್ಥಳೀಯರಾದ ಸಿನಾನ್ ಚಾರ್ಮಾಡಿ, ಮುಬಶೀರ್ ಚಾರ್ಮಾಡಿ, ಅಶ್ರಫ್ ಯಾನೆ ಅಶುರ್, ಸಂಶು ಕಾಜೂರ್, ನಾಸಿರ್ ಕಾಜೂರ್, ಸುಧೀರ್ ವಳಂಜ್ರ, ಬೆಳ್ತಂಗಡಿ ಆಂಬುಲೆನ್ಸ್ ಚಾಲಕ ಜಲಿಲ್ ಬಾಬಾ, ಬೆಳ್ತಂಗಡಿ 112 ಸಿಬ್ಬಂದಿ ಶಶಿಧರ್ ಮತ್ತು ಆಸಿಫ್ ಇದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

It is brought to the notice of the general public that my client **Mr. J. Irudayanathan S/o Late Jayaseelan**, No. 19, BDA 'A' Type, Bangalore 560047, has negotiated to purchase the schedule mentioned property from the owners **Smt. Indrani, W/o Late Yellappa,** and **her daughters** residing at No.20, Anjeneya Temple Street, Vannarpet, Viveknagar Post Bangalore-560047. The vendors **Smt. Indrani and her daughters** have represented that they have lost all the original documents pertaining to the schedule mentioned property, the vendors Smt. Indrani and her daughters also state that they have filed a police complaint before the Viveknagar Police Station, Bangalore to that effect.

Any person having objection in the said sale transaction of schedule mentioned property between my clients **Mr. J. Irudayanathan and Smt.Indrani and her daughters** may file the objection before the undersigned advocate within ten days from the date of this notice failing which the transaction shall be completed.

SCHEDULE PROPERTY

All the piece and parcel of the residential premises bearing Corporation No.23, Vannarpet Extension, Bangalore **PID.NO. 71-21-23.**

Measuring: **East to West:** 25 Feet **North to South:** 29 Feet **Construction:** 1500 Sq feet

Bounded as follows: **East by** Private Property, **West by** Road, **North by** Private Property. **Sourth by** Road

Sd/- J. RAVINDRAN, Advocate
No.310.4 Cross 6 Main,
Viveknagar Bangalore-569947
Mob: 9900609429

PUBLIC NOTICE

We the members of Telecom layout residents' welfare association® bringing it to the notice of the public that, our Association was established during the year 2002-03 and having the registered office situated at site no.5 & 6 of Vijayanagar Telecom Layout (Total land area Aprox. 7000 sqft with a building area Approx. 1000 sqft) is being enjoyed by the Association and the same cannot be disturbed by any third person other than members of the Association. Our Association situated at the said sites is being used by the association members and residents for all the association activities, social and cultural activities are being conducted regularly and also used as polling booths by the Election Commission of India.

It is reliably learnt that some third parties are trying to purchase or intends to purchase the said sites without the knowledge of our Association, they cannot acquire possession of the said sites without the consent of our Association. This publication made to inform the members of the association and also for the general public.-

TELECOM LAYOUT RESIDENTS WELFARE ASSOCIATION®
#5, 6th Cross, Telecom Layout
Vijayanagar 2nd Stage,
BANGALORE- 560023

PUBLIC NOTICE

This is to inform the general public that my client Dr.Thomas Chandy, son of Late Kora Chandy has lost the Original of Registered Deed of Sale dated 23-04-2005 registered as Document No.430/2005-06 of Book 1, stored in CD No.SHVD36, registered in the Office of the Sub Registrar, Shivajinagar, Bangalore and Duplicate of Registered Deed of Sale dated 27/04/2005 registered as Document No.428/2005-06 of Book 1, stored in CD No. SHVD36, registered in the Office of Sub Registrar, Shivajinagar, Bangalore pertaining to property bearing BBMP No.13, (Old No.11/9), PID No.76-65-13, situated at Victoria Road, within the limits of BBMP in Ward No.111, Bangaloe-560 047. Anyone having found the said documents is requested to hand over the same to the undersigned.

Kishwar Hussain M.S.
Advocate & Notary
Unit No.158, III Floor,
Golden Plaza No.11,
Jumma Masjid Road,
Bangalore-560 051.

JOB OPPORTUNITIES

Teachers/ Professors

TEACHER REQUIRED for Primary and Highschool to teach Maths, science and Computers, contact Kenmore School Basavanagudi Bangalore email: kenmoreschool@gmail.com or whatsapp 9901501185.

WANTED TRAINED/ Untrained Experienced Lady TEACHERS for Florence Primary & High School, Sanjaynagar: 6361720478/ 9591569625

Part-Time Jobs

RETIRED/ VRS Persons, Age Above 45 Years, Earn 50K-60K PM, Here No Retirement: 9886641282/ 7019215243

Wanted

WANTED COUNTER Sales Men/ Women Ready Made Blouse Shop in Chickpet, Bangalore CONTACT: 9448121073

PERSONAL

Change of Name

NOTICE OF NAME CHANGE

I, **SUBBAIAH MUDDAPPA** S/o. Kallichanda Nachaiah Muddappa Holder of Indian Passport No. S9776885, issued at Dubai on 14/10/2018, permanent resident of No. 813, 10th Cross 10th Main Indiranagar II Stage, Bengaluru, Karnataka 560038 and presently residing at Fire Link General Maintenance LLC, Post Box No. 32489, Dubai. Do hereby change my name from **SUBBAIAH MUDDAPPA** to **SUBBAIAH MUDDAPPA KALLICHANDA** with immediate effect.

I, ARHAM S/o ANKIT NARENDRA LALWANI R/a, No. 3, Police Station Road, Opp SBI, Basavanagudi, Bengaluru- 560004, Have Changed my Name to ARHAM LALWANI For All Future Purpose Vide Affidavit Dated 27/05/2023 before Notary B.K.R. Krishnamurthy, Bangalore.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

DH DECCAN HERALD | ಪ್ರಜಾವಾಣಿ

JOB CORNER
BOOK JOB ADS ON WEEKDAY + SUNDAY

@ 803/-* Per Sqcm Single Column
@ 825/-* Per Sqcm Multi Column
conditions apply*

For more information Contact:
9845114560 : 9731810277
9901641752 : 9886213331
080 - 45557163 / 164

ಗಣೇಶ ಮೂರ್ತಿ ಭಗ್ನ

ಗಣೇಶ ಮೂರ್ತಿಯನ್ನು ಸುತ್ತಿಗೆಯಿಂದ ಹೊಡೆದು ಭಗ್ನಗೊಳಿಸಿರುವ ದುಷ್ಕರ್ಮಿಗಳು

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ಗುಂಜೂರು ಹೊಸಹಳ್ಳಿ ಮುಖ್ಯ ರಸ್ತೆಯ ಗಣೇಶ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದ ಕಲ್ಲಿನ ಗಣೇಶ ಮೂರ್ತಿಯನ್ನು ದುಷ್ಕರ್ಮಿಗಳು ಭಗ್ನಗೊಳಿಸಿದ್ದಾರೆ.

ಭಾನುವಾರ ಮಧ್ಯರಾತ್ರಿ ಸುಮಾರು 12 ಗಂಟೆ ಸುಮಾರಿನಲ್ಲಿ ಕಾರಿನಿಂದ ಇಳಿದ ಇಬ್ಬರು ದುಷ್ಕರ್ಮಿಗಳು ಗಣೇಶ ವಿಗ್ರಹಕ್ಕೆ ಹಾನಿ ಮಾಡಿ ಕಾರಿನಲ್ಲಿ ಪರಾರಿಯಾಗಿದ್ದಾರೆ. ಈ ಬಗ್ಗೆ ದೃಶ್ಯಾವಳಿಗಳು ದೇವಾಲಯ ಮುಂದೆ ಇರುವ ಮನೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಗ್ರಾಮಸ್ಥರು ವರ್ತೂರು ಪೊಲೀಸ್ ಠಾಣೆಗೆ ದೂರು ದಾಖಲಿಸಿ ಕೂಡಲೇ ಶಾಂತಿ ಕದಡುವ ದುಷ್ಕರ್ಮಿಗಳನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದ್ದಾರೆ.

ವೈಟ್‌ಫೀಲ್ಡ್ ಬಿಬಿಎಂಪಿ ಕಚೇರಿಗೆ ಮುತ್ತಿಗೆ ಹಾಕಿದ ರಾಮಗೊಂಡನಹಳ್ಳಿ ನಿವಾಸಿಗಳು

ನೀರಿನ ಸಮಸ್ಯೆ: ಗ್ರಾಮಸ್ಥರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಿಬಿಎಂಪಿ ಅಧಿಕಾರಿಗಳು ಹಾಗೂ ನೀರಗಂಟಿಯ ಆಂತರಿಕ ಬಿಕ್ಕಟ್ಟಿನಿಂದ ಕೆಲವು ದಿನಗಳಿಂದ ಸರಿಯಾದ ವೇಳೆಗೆ ನೀರು ಪೂರೈಕೆ ಮಾಡುತ್ತಿಲ್ಲ ಎಂದು ಆಗ್ರಹಿಸಿ ರಾಮಗೊಂಡನಹಳ್ಳಿ ಗ್ರಾಮದ ನಿವಾಸಿಗಳು ವೈಟ್‌ಫೀಲ್ಡ್ ಬಿಬಿಎಂಪಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಸಮರ್ಪಕವಾಗಿ ನೀರು ಸರಬರಾಜು ಮಾಡದಿರುವ ಬಗ್ಗೆ ಹಲವಾರು ಬಾರಿ ಬಿಬಿಎಂಪಿ ವಾರ್ಡ್ ಎಂಜಿನಿಯರ್‌ಗಳಿಗೆ ದೂರು ನೀಡಿದ್ದರೂ ಯಾವುದೇ ರೀತಿಯ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಗ್ರಾಮಸ್ಥರು ದೂರಿದರು.

ಕೊಳವೆ ಬಾವಿಗಳ ಯಂತ್ರೋಪಕರಣಗಳು ಕೆಟ್ಟುಹೋಗಿ ಆರು ತಿಂಗಳಾದರೂ ಸರಿಪಡಿಸುವ ಗೋಜಿಗೆ ಹೋಗುವುದಿಲ್ಲ. ಹೊಸ ಕೊಳವೆ ಬಾವಿಗಳಿಗೆ ಮೋಟಾರ್ ಅಳವಡಿಸಿಲ್ಲ. ಇದರಿಂದ ನೀರಿನ ಸಮಸ್ಯೆ ಬಿಗಡಾಯಿಸಿದೆ. ಅಲ್ಲದೇ ವಾಟರ್ ಮ್ಯಾನ್‌ಗೆ ಮೂರು ನಾಲ್ಕು ತಿಂಗಳಿಗೊಮ್ಮೆ ಸಂಬಳ ನೀಡುತ್ತಿರುವುದರಿಂದ ವಾಟರ್ ಮ್ಯಾನ್ ಸಹ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಹಾಗಾಗಿ ನೀರಿಗಾಗಿ ಹಾಹಾಕಾರ ಉಂಟಾಗಿದೆ ಎಂದು ಆರೋಪಿಸಿದರು.

110 ಹಳ್ಳಿಗಳ ಯೋಜನೆ ಅಡಿಯಲ್ಲಿ ರಾಮಗೊಂಡನಹಳ್ಳಿಯಲ್ಲಿ ಕಾವೇರಿ ಪೈಪ್‌ಲೈನ್ ಅಳವಡಿಸಲಾಗಿದೆ. ಆದರೆ, ಇಲ್ಲಿಯವರೆಗೂ ಕಾವೇರಿ ನೀರಿನ ಸಂಪರ್ಕ ಕಲ್ಪಿಸಿಲ್ಲ. ಬಿಬಿಎಂಪಿ ಅಧಿಕಾರಿಗಳು ಹಾಗೂ ವಾಟರ್ ಮ್ಯಾನ್ ನಡುವಿನ ಅಂತರಿಕ ಬಿಕ್ಕಟ್ಟಿನಿಂದ ರಾಮಗೊಂಡನಹಳ್ಳಿ ನಿವಾಸಿಗಳು ನೀರಿಗಾಗಿ ಪರದಾಡುವ ಸ್ಥಿತಿ ಎದುರಾಗಿದೆ ಎಂದು ದೂರಿದರು.

ವಿಷಯ ತಿಳಿದು ವೈಟ್‌ಫೀಲ್ಡ್ ಬಿಬಿಎಂಪಿ ಕಚೇರಿ ಬಳಿಗೆ ಬಂದ ಎಇಇ ಯದುಕೃಷ್ಣ ಪ್ರತಿಭಟನಕಾರರಿಗೆ ನೀರಿನ ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು.

ರಾಮಗೊಂಡನಹಳ್ಳಿ ಗ್ರಾಮದ ನಿವಾಸಿಗಳು ವೈಟ್‌ಫೀಲ್ಡ್ ಬಿಬಿಎಂಪಿ ಕಚೇರಿಗೆ ಮುತ್ತಿಗೆ ಹಾಕಿ ಬೀಗ ಜಡಿದು ಪ್ರತಿಭಟಿಸಿದರು.

ಬೇರೊಬ್ಬ ಯುವತಿ ಜತೆ ಮದುವೆ ನಿಶ್ಚಯವಾಗಿದ್ದಕ್ಕೆ ಕೃತ್ಯ

ಸ್ನೇಹಿತನಿಗೆ ಬಿಸಿನೀರು ಎರಚಿದ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಟ್ಟೆ ಮಾರಾಟ ಜಾಲತಾಣವೊಂದರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ವಿಜಯ್‌ಕುಮಾರ್ ಎಂಬುವರ ಮೇಲೆ ಬಿಸಿನೀರು ಎರಚಿ ಗಾಯಗೊಳಿಸಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಸ್ನೇಹಿತೆ ವಿರುದ್ಧ ಚಾಮರಾಜಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಲಬುರಗಿಯ ವಿಜಯ್‌ಕುಮಾರ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಬೊಮ್ಮಸಂದ್ರದಲ್ಲಿ ಸ್ನೇಹಿತರ ಜೊತೆ ವಾಸವಿದ್ದರು. ಬಿಸಿನೀರು ಎರಚಿದ್ದರಿಂದ ಗಾಯಗೊಂಡಿರುವ ವಿಜಯ್, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರು ನೀಡಿರುವ ದೂರು ಆಧರಿಸಿ ಸ್ನೇಹಿತೆ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'30 ವರ್ಷ ವಯಸ್ಸಿನ ವಿಜಯ್ ಅವರಿಗೆ ಐದು ವರ್ಷಗಳ ಹಿಂದೆಯಷ್ಟೇ ಕಲಬುರಗಿ ಜಿಲ್ಲೆಯ ಮಹಿಳೆಯೊಬ್ಬರ ಪರಿಚಯವಾಗಿ ಸ್ನೇಹ ಬೆಳೆದಿತ್ತು. ಇಬ್ಬರ ನಡುವೆ ಸಲುಗೆ ಇತ್ತು. ಮಹಿಳೆ ಸಹ ಬೆಂಗಳೂರಿಗೆ ಬಂದು, ಹನುಮಂತನಗರ ಬಳಿಯ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿದ್ದರು. ಮದುವೆಯಾಗಿದ್ದ ಮಹಿಳೆ, ವಿಷಯ ಮುಚ್ಚಿಟ್ಟು ವಿಜಯ್ ಅವರನ್ನು ಪ್ರೀತಿಸುತ್ತಿದ್ದರು. ಮದುವೆ ಆಗುವಂತೆ ಒತ್ತಾಯಿಸಿದ್ದರು.'

'ಮಹಿಳೆಯ ಮೊದಲ ಮದುವೆ ವಿಷಯ ವಿಜಯ್‌ಗೆ ಗೊತ್ತಾಗಿತ್ತು. ಬಳಿಕ, ವಿಜಯ್ ಮಹಿಳೆಯಿಂದ ಅಂತರ ಕಾಯ್ದುಕೊಳ್ಳಲಾರಂಭಿಸಿದ್ದರು. ಇದರ ನಡುವೆಯೇ ವಿಜಯ್‌ಗೆ ಬೇರೊಬ್ಬ ಯುವತಿ ಜೊತೆ ಮದುವೆ ನಿಶ್ಚಯವಾಗಿತ್ತು' ಎಂದು ಪೊಲೀಸರು ತಿಳಿಸಿದರು.

'ತಮ್ಮ ಜನ್ಮದಿನ ಆಚರಣೆ ತಯಾರಿ ಬಗ್ಗೆ ಮಾತನಾಡುವ ನೆಪದಲ್ಲಿ ಮಹಿಳೆ, ವಿಜಯ್ ಅವರನ್ನು ಮೇ 25ರಂದು ಕೊಠಡಿಗೆ ಕರೆಸಿದ್ದರು. ಇದೇ ವೇಳೆ ವಿಜಯ್, ತಮ್ಮ ಭಾವಿ ಪತ್ನಿ ಜೊತೆ ಮೊಬೈಲ್‌ನಲ್ಲಿ ಮಾತನಾಡಿದ್ದರು. ಇದರಿಂದ ಸಿಟ್ಟಾದ ಮಹಿಳೆ, ವಿಜಯ್ ಮೇಲೆ ಬಿಸಿನೀರು ಎರಚಿ ಕೊಠಡಿ ಬಾಗಿಲು ಹಾಕಿಕೊಂಡು ಪರಾರಿಯಾಗಿದ್ದಾರೆ. ಮನೆ ಮಾಲೀಕರು, ವಿಜಯ್ ಅವರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಶೇ 40ರಷ್ಟು ದೇಹ ಸುಟ್ಟಿದೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ದ್ವಿಚಕ್ರ ವಾಹನಗಳ ಡಿಕ್ಕಿ: ಸವಾರ ಸಾವು

ಬೆಂಗಳೂರು: ಬ್ಯಾಟರಾಯನಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಎರಡು ದ್ವಿಚಕ್ರ ವಾಹನಗಳ ನಡುವೆ ಅಪಘಾತ ಸಂಭವಿಸಿದ್ದು, ಪಿ. ವೆಂಕಟೇಶ್ (62) ಎಂಬುವವರು ಮೃತಪಟ್ಟಿದ್ದಾರೆ.

'ಪ್ರಮೋದ್ ಬಡಾವಣೆಯ ವೆಂಕಟೇಶ್, ಕಾಟನ್‌ಪೇಟೆಯಲ್ಲಿರುವ ಹ್ಯಾಂಡ್‌ಲೂಮ್ ಮಳಿಗೆಯಲ್ಲಿ ನೇಯ್ಗೆ ಕೆಲಸ ಮಾಡುತ್ತಿದ್ದರು. ಸೋಮವಾರ ಕೆಲಸಕ್ಕೆ ಹೊರಟಿದ್ದ ವೇಳೆ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ವೆಂಕಟೇಶ್ ಅವರು ಸೋಮವಾರ ಬೆಳಿಗ್ಗೆ 6.45 ಗಂಟೆ ಸುಮಾರಿಗೆ ದ್ವಿಚಕ್ರ ವಾಹನ ಚಲಾಯಿಸಿಕೊಂಡು, ಮೈಸೂರು ರಸ್ತೆಯ ಪಶ್ಚಿಮ ಕಾರ್ಡ್ ರಸ್ತೆ ಕಡೆಯಿಂದ ಬಾಪೂಜಿನಗರ ಕಡೆಗೆ ಹೊರಟಿದ್ದರು. ದೀಪಾಂಜಲಿನಗರ ಮೆಟ್ರೊ ನಿಲ್ದಾಣ ಬಳಿ ಇರುವ ಮೇಲ್ಸೇತುವೆಯಲ್ಲಿ ಎದುರಿಗೆ ಹೊರಟಿದ್ದ ದ್ವಿಚಕ್ರ ವಾಹನಕ್ಕೆ ವೆಂಕಟೇಶ್ ಅವರ ವಾಹನ ಡಿಕ್ಕಿ ಹೊಡೆದಿತ್ತು.'

'ವಾಹನ ಸಮೇತ ಉರುಳಿಬಿದ್ದಿದ್ದ ವೆಂಕಟೇಶ್ ಅವರ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಸ್ಥಳೀಯರು ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದರು. ನಂತರ, ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ನಿಮ್ಹಾನ್ಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಅಪಘಾತ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಯಾರ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿದೆ ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದರು.

ರಾಜಸ್ಥಾನ: ಒಗ್ಗೂಡಿ ಚುನಾವಣೆ ಎದುರಿಸಲು ಗೆಹಲೋತ್, ಪೈಲಟ್ ಒಪ್ಪಿಗೆ

ನವದೆಹಲಿ (ಪಿಟಿಐ): ಕಾಂಗ್ರೆಸ್‌ನ ರಾಜಸ್ಥಾನ ಘಟಕದಲ್ಲಿ ನಾಯಕತ್ವದ ಕಿತ್ತಾಟದ ನಡುವೆಯೇ, ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ಅವರು ಒಗ್ಗಟ್ಟಾಗಿ ಮುಂಬರುವ ವಿಧಾನಸಭಾ ಚುನಾವಣೆಯನ್ನು ಎದುರಿಸಲು ಒಪ್ಪಿಕೊಂಡಿದ್ದಾರೆ.

ಪಕ್ಷದೊಳಗಿನ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುವ ಕುರಿತು ಹೈಕಮಾಂಡ್‌ನ ವಿವೇಚನೆಗೆ ಬಿಡಲಾಗಿದ್ದು, ಇದಕ್ಕೆ ಇಬ್ಬರು ನಾಯಕರೂ ಸಮ್ಮತಿ ವ್ಯಕ್ತಪಡಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಅಶೋಕ್ ಗೆಹಲೋತ್ ಅವರೊಂದಿಗೆ ಸುದೀರ್ಘ ಕಾಲ ಸಭೆ ನಡೆಸಿದರು. ಸಂಜೆಯ ವೇಳೆಗೆ ಸಭೆಗೆ ಪೈಲಟ್ ಕೂಡಾ ಸೇರಿಕೊಂಡರು. ಕಾಂಗ್ರೆಸ್‌ನ ರಾಜ್ಯ ವ್ಯವಹಾರಗಳ ಉಸ್ತುವಾರಿ ಸುಖಜೀಂದರ್ ರಾಂಧವಾ ಕೂಡಾ ಸಭೆಯಲ್ಲಿ ಉಪಸ್ಥಿತರಿದ್ದರು.

'ಪಕ್ಷದ ಇಬ್ಬರೂ ನಾಯಕರು ಒಟ್ಟಾಗಿ ಕೆಲಸ ಮಾಡಲು ಮತ್ತು ವಿಧಾನಸಭೆ ಚುನಾವಣೆಯನ್ನು ಒಗ್ಗಟ್ಟಿನಿಂದ ಎದುರಿಸಲು ಪಕ್ಷವು ಸೂತ್ರವನ್ನು ರೂಪಿಸಿದೆ' ಎಂದು ಮೂಲಗಳು ತಿಳಿಸಿವೆ. ಈ ಮೂಲಕ ಪಕ್ಷದ ರಾಜಸ್ಥಾನ ಘಟಕದಲ್ಲಿ ಎಲ್ಲವೂ ಸರಿಯಾಗಿದೆ ಎಂದು ಬಿಂಬಿಸಲು ಪ್ರಯತ್ನಿಸಲಾಗುತ್ತಿದೆ ಎನ್ನಲಾಗಿದೆ.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, 'ಇಬ್ಬರು ನಾಯಕರು ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರೊಂದಿಗೆ ಮುಂಬರುವ ರಾಜಸ್ಥಾನ ಚುನಾವಣೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿದರು' ಎಂದು ಹೇಳಿದರು.

ಪಾದಚಾರಿಗಳಿಗಿಲ್ಲ ದಾರಿ

ಬೆಂಗಳೂರಿನ ಶೇಷಾದ್ರಿ ರಸ್ತೆಯಲ್ಲಿ ಸೋಮವಾರ ಬೈಕ್ ಸವಾರರು ಪಾದಚಾರಿ ಮಾರ್ಗದಲ್ಲಿ ಬೈಕ್‌ಗಳನ್ನು ಓಡಿಸಿದರು. ಇದರಿಂದ ಪಾದಚಾರಿಗಳಿಗೆ ಕಿರಿಕಿರಿ ಉಂಟಾಯಿತು ಪ್ರಜಾವಾಣಿ ಚಿತ್ರ / ಪ್ರಶಾಂತ್ ಎಚ್.ಜಿ.

ಲಗ್ಗೆರೆಯ ಚೌಡೇಶ್ವರಿನಗರದಲ್ಲಿ ನಡೆದಿದ್ದ ಹತ್ಯೆ ಪ್ರಕರಣ

ವೈಷಮ್ಯ: ಕೊಲೆ ಆರೋಪಿಗಳ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಗ್ಗೆರೆ ಬಳಿಯ ಚೌಡೇಶ್ವರಿನಗರದಲ್ಲಿ ನಡೆದಿದ್ದ ರವಿಕುಮಾರ್ ಅಲಿಯಾಸ್ ಮತ್ತಿ ರವಿ (38) ಎಂಬುವವರ ಕೊಲೆ ಪ್ರಕರಣದಲ್ಲಿ ಏಳು ಆರೋಪಿಗಳನ್ನು ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ಪ್ರೇಮನಗರದ ಕೆ.ಮಂಜುನಾಥ್ ಅಲಿಯಾಸ್ ಮಂಜ (42), ಚೌಡೇಶ್ವರಿನಗರದ ನಾಗರಾಜ್ ಅಲಿಯಾಸ್ ಸ್ಪಾಟ್ ನಾಗ (38), ಅನ್ನಪೂರ್ಣೇಶ್ವರಿ ನಗರದ ಗೋಪಾಲ್ (35), ಕಿರಣ್ ಕುಮಾರ್ (29), ಮಣಿಕಂದನ್ (23), ಕಾರ್ತಿಕ್ (34) ಹಾಗೂ ಬಾಬು (32). ಇವರೆಲ್ಲರೂ ಸೇರಿಕೊಂಡು ಮೇ 24ರಂದು ರಾತ್ರಿ ರವಿ ಅವರನ್ನು ಕೊಂದು ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

'ಕಾಂಗ್ರೆಸ್ ಕಾರ್ಯಕರ್ತರಾಗಿದ್ದ ರವಿ ಅವರ ಕೊಲೆ ಸಂಬಂಧ ಪತ್ನಿ ದೂರು ನೀಡಿದ್ದರು. ಮಂಜ ಹಾಗೂ ಸ್ಪಾಟ್ ನಾಗ ಮೇಲೆ ಅನುಮಾನ ವ್ಯಕ್ತಪಡಿಸಿದ್ದರು. ತನಿಖೆಯಲ್ಲಿ ಸಿಕ್ಕ ಕೆಲ ಸುಳಿವು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

ಯುಗಾದಿ ಹಬ್ಬದಿಂದ ವೈಷಮ್ಯ: 'ಮತ್ತಿ ರವಿ ಹಾಗೂ ಮಂಜ, ಸ್ನೇಹಿತರು. ಯುಗಾದಿ ಹಬ್ಬದ ದಿನದಂದು ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಜೂಜಾಟದಲ್ಲಿ ತೊಡಗಿದ್ದರು. ಮತ್ತಿ ರವಿ ಅವರು ₹ 25 ಸಾವಿರ ಗೆದ್ದಿದ್ದರು. ಮಂಜ ಹಾಗೂ ಇತರರು ಹಣ ಸೋತಿದ್ದರು' ಎಂದು ಪೊಲೀಸರು ಹೇಳಿದರು.

'ಎಲ್ಲ ಹಣ ಕಳೆದುಕೊಂಡಿದ್ದೇವೆ. ಹಬ್ಬದ ಪಾರ್ಟಿಗೆ ಸ್ವಲ್ಪ ಹಣ ಕೊಡು' ಎಂದು ಮಂಜ ಕೇಳಿದ್ದ. ಅವಾಗಲೇ ಮತ್ತಿ ರವಿ, ₹ 10 ಸಾವಿರ ಕೊಟ್ಟಿದ್ದ. ಇದಾದ ನಂತರ ಮಂಜು, ಹಣ ವಾಪಸು ಕೊಟ್ಟಿರಲಿಲ್ಲ. ಅದೇ ಹಣದ ವಿಚಾರವಾಗಿ ಪದೇ ಪದೇ ಗಲಾಟೆ ನಡೆದು, ವೈಷಮ್ಯ ಬೆಳೆದಿತ್ತು' ಎಂದು ತಿಳಿಸಿದರು.

ಜನ್ಮದಿನದಂದೂ ಜಗಳ: 'ಕಾಂಗ್ರೆಸ್ ಪಕ್ಷದ ಮುಖಂಡರೂ ಆಗಿರುವ ಫೈನಾನ್ಶಿಯರ್ ಕೃಷ್ಣಮೂರ್ತಿ ಅವರ ಜನ್ಮದಿನದ ನಿಮಿತ್ತ ಮೇ 24ರಂದು ರಾತ್ರಿ ಪಾರ್ಟಿ ಹಮ್ಮಿಕೊಳ್ಳಲಾಗಿತ್ತು. ಮತ್ತಿ ರವಿ ಹಾಗೂ ಆರೋಪಿಗಳು ಪಾಲ್ಗೊಂಡಿದ್ದರು. ಅಲ್ಲಿಯೂ ₹ 10 ಸಾವಿರ ವಿಚಾರವಾಗಿ ಜಗಳ ಶುರುವಾಗಿತ್ತು' ಎಂದು ಪೊಲೀಸರು ಹೇಳಿದರು.

'ಬೇಸತ್ತಿದ್ದ ರವಿ, ಪಾರ್ಟಿಯಿಂದ ಮನೆಗೆ ವಾಪಸು ಹೋಗಿದ್ದರು. ಅವರಿಗೆ ಕರೆ ಮಾಡಿದ್ದ ಮಂಜ ಹಾಗೂ ಇತರರು, ಪಾರ್ಟಿಗೆ ವಾಪಸು ಬರುವಂತೆ ಕೋರಿದ್ದರು. ಪಾರ್ಟಿ ಜಾಗಕ್ಕೆ ಹೊರಟಿದ್ದಾಗ ಮಾರ್ಗಮಧ್ಯೆಯೇ ಎದುರಾಗಿದ್ದ ಆರೋಪಿಗಳು, ಮಾರಕಾಸ್ತ್ರಗಳಿಂದ ಕೊಚ್ಚಿ ರವಿ ಅವರನ್ನು ಕೊಂದಿದ್ದರು' ಎಂದು ತಿಳಿಸಿದರು.

ಕ್ಯಾಬ್‌ಗಾಗಿ ಕಾಯುತ್ತಿದ್ದ ಟೆಕಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯ ಕಾರ್ತಿಕ್ ನಗರ ಬಸ್ ತಂಗುದಾಣ ಬಳಿ ಕ್ಯಾಬ್‌ಗಾಗಿ ಕಾಯುತ್ತ ನಿಂತಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಮುಶೀರ್ ಎಂಬುವವರನ್ನು ಸುಲಿಗೆ ಮಾಡಲಾಗಿದ್ದು, ಇಬ್ಬರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

'ಗುಜರಾತ್‌ನ ಮುಶೀರ್, ನಗರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ವಾಸವಿದ್ದಾರೆ. ಸುಲಿಗೆ ಬಗ್ಗೆ ಅವರು ದೂರು ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಇತ್ತೀಚೆಗೆ ತಮ್ಮೂರಿಗೆ ಹೋಗಿದ್ದ ಮುಶೀರ್, ಮೇ 24ರಂದು ವಿಮಾನದ ಮೂಲಕ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದರು. ನಂತರ, ಅಲ್ಲಿಂದ ಬಸ್‌ನಲ್ಲಿ ತಡರಾತ್ರಿ 2 ಗಂಟೆ ಸುಮಾರಿಗೆ ಕಾರ್ತಿಕ್ ನಗರದ ತಂಗುದಾಣಕ್ಕೆ ಬಂದಿದ್ದರು.'

'ಪೇಯಿಂಗ್ ಗೆಸ್ಟ್ ಕಟ್ಟಡಕ್ಕೆ ಹೋಗಲೆಂದು ಕ್ಯಾಬ್ ಕಾಯ್ದಿರಿಸಿ, ಕಾಯುತ್ತ ನಿಂತಿದ್ದರು. ಅದೇ ಸಂದರ್ಭದಲ್ಲಿ ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿಗಳಿಬ್ಬರು, ಚಾಕು ತೋರಿಸಿ ಬೆದರಿಸಿದ್ದರು. ಲ್ಯಾಪ್‌ಟಾಪ್, ಮೊಬೈಲ್ ಹಾಗೂ ಪರ್ಸ್ ಕಸಿದುಕೊಂಡು ಆರೋಪಿಗಳು ಪರಾರಿಯಾಗಿದ್ದಾರೆ. ಆಧಾರ್, ಪಾಸ್‌ಪೋರ್ಟ್, ಕ್ರೆಡಿಟ್ ಹಾಗೂ ಡೆಬಿಟ್ ಕಾರ್ಡ್‌ಗಳು ಪರ್ಸ್‌ನಲ್ಲಿದ್ದವು' ಎಂದು ಪೊಲೀಸರು ತಿಳಿಸಿದರು.

₹ 30ಕೋಟಿ ಮೌಲ್ಯದ ಕೊಕೇನ್ ವಶ: ಬಂಧನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆಫ್ರಿಕಾದ ಲೈಬೀರಿಯನ್ ಮೂಲದ 38 ವರ್ಷದ ಮಹಿಳೆಯೊಬ್ಬರು ₹30ಕೋಟಿ ಮೌಲ್ಯದ 2ಕೆ.ಜಿ ಕೊಕೇನ್ ಮಾದಕ ವಸ್ತುವನ್ನು ಅಕ್ರಮವಾಗಿ ಬ್ಯಾಗ್‌ನಲ್ಲಿ ಇರಿಸಿ ಸಾಗಿಸುತ್ತಿದ್ದ ವೇಳೆ ಕಂದಾಯ ಗುಪ್ತಚರ ದಳ (ಡಿಆರ್‌ಐ)ಕ್ಕೆ ಸಿಕ್ಕಿ ಬಿದ್ದಿದ್ದಾರೆ.

ಈಚೆಗೆ ಇಲ್ಲಿನ ವಿಮಾನ ನಿಲ್ದಾಣಕ್ಕೆ ಇಥಿಯೋಪಿಯಾ ಏರ್‌ಲೈನ್ಸ್ ಮೂಲಕ ಭಾರತೀಯ ಪ್ರವಾಸಿ ವೀಸಾ ಪಡೆದು ಬಂದಿದ್ದ ಮಹಿಳೆ, ಕೊಕೇನ್ ಅಕ್ರಮ ಸಾಗಣೆಗೆ ಸಂಚು ರೂಪಿಸಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಫ್ರಿಕಾದಿಂದ ನೇರವಾಗಿ ಬೆಂಗಳೂರಿಗೆ ದೊಡ್ಡಮಟ್ಟದಲ್ಲಿ ಕೊಕೇನ್ ಸಾಗಣೆ ಮಾಹಿತಿ ದೊರೆತ ತಕ್ಷಣ ಬೆಂಗಳೂರಿನ ಕಂದಾಯ ಗುಪ್ತಚರ ದಳದ ಸಿಬ್ಬಂದಿ, ಮಹಿಳೆಯ ಕಪ್ಪುಬಣ್ಣದ ಸೂಟ್ ಪರಿಶೀಲಿಸಿದಾಗ ಕೊಕೇನ್ ಪತ್ತೆಯಾಗಿದೆ.

ತಪಾಸಣೆ ಅಧಿಕಾರಿಗಳೊಂದಿಗೆ ವಾಗ್ವಾದಕ್ಕೆ ಇಳಿದ ಮಹಿಳೆ, ಇದೇ ಮೊದಲ ಬಾರಿಗೆ ಭಾರತಕ್ಕೆ ಬರುತ್ತಿದ್ದು ಇಡೀ ದೇಶವನ್ನು ಪ್ರವಾಸ ಮಾಡಲು ಪ್ರವಾಸಿ ವೀಸಾ ಪಡೆಯಲಾಗಿದೆ ಎಂದು ಹೇಳಿದ್ದಾರೆ. ಆರೋಪಿ ವಿರುದ್ಧ ಮಾದಕ ವಸ್ತುಗಳ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ನೈಋತ್ಯ ರೈಲ್ವೆ G20

ವಕೀಲರ ಎಂಪ್ಯಾನಲ್‌ಮೆಂಟ್‌ಗಾಗಿ ಪ್ರಕಟಣೆ

ಸಿಎಟಿ, ಆರ್‌ಸಿಟಿ ಮತ್ತು ಇತರ ನ್ಯಾಯಾಲಯಗಳು, ಇತ್ಯಾದಿ ಪ್ಯಾನೆಲ್‌ಗಾಗಿ ಅರ್ಹ ವಕೀಲರಿಂದ ಅರ್ಜಿಗಳಿಗಾಗಿ ಕರೆಯುವ ಪ್ರಕಟಣೆಯನ್ನು **https://swr.indianrailways.gov.in** ನಲ್ಲಿ ಪ್ರಕಟಿಸಲಾಗಿದೆ. ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ **22-06-2023 ರಂದು 18:00 ಗಂಟೆಗಳು.**

ಹಿರಿಯ ಕಾನೂನು ಅಧಿಕಾರಿ / ಕೇಂದ್ರ ಕಛೇರಿ ಹುಬ್ಬಳ್ಳಿ

ಪಿಯುಬಿ/122/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24

S.W.Railways SWRRLY SWRRLY

ನೈಋತ್ಯ ರೈಲ್ವೆ G20

ಇ-ಟೆಂಡರ್ ಪ್ರಕಟಣೆ ಸಂ. 11/2023 ದಿನಾಂಕ : 25-05-2023

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂನ ಸರಬರಾಜಿಗಾಗಿ ಐಆರ್‌ಇಪಿಎಸ್ ಮೂಲಕ ಮಾತ್ರ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ : ಕ್ರೇನ್ ಮೌಂಟೆಡ್ ಟ್ರಕ್, ಪವರ್ ಟೇಕ್-ಆಫ್ ಯೂನಿಟ್‌ನ ಸರಬರಾಜು ಮತ್ತು ಫಿಟ್‌ಮೆಂಟ್ ಹಾಗೂ ಕಾರ್ಗೋ ಬಾಡಿಯ ಫ್ಯಾಬ್ರಿಕೇಶನ್. **(ಟೆಂಡರ್ ಸಂ. ಎಲ್8235303ಬಿ) (ಪ್ರಮಾಣ : 01 ಸಂಖ್ಯೆ)**

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 19-06-2023 ರಂದು 10:30 ಗಂಟೆಯವರೆಗೆ.

ಹೆಚ್ಚಿನ ವಿವರಗಳಿಗಾಗಿ **www.ireps.gov.in** ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು ಬೆಂಗಳೂರು

ಪಿಯುಬಿ/124/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24

S.W.Railways SWRRLY SWRRLY

ನೈಋತ್ಯ ರೈಲ್ವೆ G20

ಪಾರ್ಸೆಲ್ ಸ್ಥಳಾವಕಾಶ, ಪಾರ್ಕಿಂಗ್ ಮತ್ತು ಔಟ್ ಆಫ್ ಹೋಮ್ ಜಾಹೀರಾತು / ಪ್ರಚಾರದ ಗುತ್ತಿಗೆಗಾಗಿ ಇ-ಹರಾಜು

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ದಿನಾಂಕಗಳಲ್ಲಿನ ಇ-ಹರಾಜುಗಳಿಗಾಗಿ ಬಿಡ್ಡರ್‌ಗಳನ್ನು ಆಹ್ವಾನಿಸಿದ್ದಾರೆ.

1) ಪಾರ್ಸೆಲ್ ಎಸ್‌ಎಲ್‌ಆರ್ ಮತ್ತು ವಿಪಿಹೆಚ್ ಗುತ್ತಿಗೆ ದಿನಾಂಕ : 05-06-2023, 12-06-2023, 19-06-2023 & 26-06-2023
2) ಪಾರ್ಕಿಂಗ್, ಪಾವತಿಸಿ ಮತ್ತು ಬಳಸಿ ಗುತ್ತಿಗೆಗಳ ದಿನಾಂಕ : 01-06-2023, 08-06-2023, 09-06-2023 & 16-06-2023
3) ಜಾಹೀರಾತು ಮತ್ತು ಎಟಿಎಂ ಗುತ್ತಿಗೆಗಳ ದಿನಾಂಕ : 06-06-2023, 07-06-2023, 09-06-2023, 13-06-2023, 14-06-2023, 21-06-2023, 20-06-2023, 27-06-2023 & 30-06-2023
4) ಕೇಟರಿಂಗ್ : 01-06-2023, 08-06-2023, 15-06-2023 & 22-06-2023
5) ಕೋಚ್ ರೆಸ್ಟೋರೆಂಟ್ ಮತ್ತು ವಿವಿಧ ಗುತ್ತಿಗೆಗಳ ದಿನಾಂಕ : 15-06-2023, 23-06-2023 & 28-06-2023

ಹೆಚ್ಚಿನ ವಿವರಗಳಿಗಾಗಿ **www.ireps.gov.in** ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಬೆಂಗಳೂರು

ಪಿಯುಬಿ/123/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24

S.W.Railways SWRRLY SWRRLY

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೋಲಾರ ವಿಭಾಗ, ಕೋಲಾರ

ಸಂಖ್ಯೆ: ಕರಾಸಾ/ಕೋವಿ/ಸಂ/ವಾಣಿಜ್ಯ/218/2023-24 ದಿನಾಂಕ:25.05.2023

ಟೆಂಡರ್ ಪ್ರಕಟಣೆ ಸಂಖ್ಯೆ 05/2023

ಮಾಲೂರಿನಲ್ಲಿರುವ ಪ್ರಾದೇಶಿಕ ತರಬೇತಿ ಕೇಂದ್ರದಲ್ಲಿ ತರಬೇತಿಗೆ ಆಗಮಿಸುವ ಎಲ್ಲಾ ವರ್ಗದ ಸಿಬ್ಬಂದಿಗಳಿಗೆ/ಶಿಬಿರಾರ್ಥಿಗಳಿಗೆ ಶುಚಿ ಮತ್ತು ರುಚಿಯಾದ ಸಸ್ಯಾಹಾರದ ಊಟೋಪಚಾರದ (ಫುಲ್ ಮೀಲ್ಸ್) ಆನ್ನು ಮಾಲೂರು ತರಬೇತಿ ಕೇಂದ್ರದಲ್ಲಿರುವ ಕ್ಯಾಂಟಿನ್‌ನಲ್ಲಿ ತಯಾರು ಮಾಡಿ ಒದಗಿಸಲು ಟೆಂಡರ್ ಕರೆಯಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಷರತ್ತು ಮತ್ತು ನಿಬಂಧನೆ, ಟೆಂಡರ್ ಅರ್ಜಿ ಹಾಕಲು ಇರಬೇಕಾದ ಅರ್ಹತೆಗಳು ಹಾಗೂ ಇನ್ನಿತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಅವಧಿ ಆಯ್ಕೆಯಾಗಿ ಅನುಮತಿ ನೀಡಿದ ನಂತರ 03 (ಮೂರು) ವರ್ಷಗಳಾಗಿರುತ್ತದೆ. ಅರ್ಹ ಅರ್ಜಿದಾರರು ಅರ್ಜಿ ಪಡೆಯಲು ಅರ್ಜಿ ಶುಲ್ಕ **ರೂ.500.00ಗಳ ಡಿ.ಡಿ.ಯನ್ನು** ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಕೋಲಾರ ವಿಭಾಗ ರವರ ಹೆಸರಿಗೆ ಪಡೆದು ಅಥವಾ ನಗದು ರೂಪದಲ್ಲಿ ಈ ಕಛೇರಿಯಲ್ಲಿ ಸಲ್ಲಿಸಿ ಅರ್ಜಿ ಪಡೆಯಬಹುದಾಗಿರುತ್ತದೆ. ಅರ್ಜಿ ಪಡೆಯಲು ಅಂತಿಮ **ದಿನಾಂಕ:14.06.2023 ಸಮಯ: 12.00 ಗಂಟೆ.** ಭರ್ತಿ ಮಾಡಿದ ಸೂಕ್ತ ದಾಖಲೆಗಳೊಂದಿಗೆ ಟೆಂಡರ್ ಅರ್ಜಿ ಸಲ್ಲಿಸುವ **ದಿನಾಂಕ:16.06.2023 ಸಮಯ: 12.00 ಆಗಿರುತ್ತದೆ.** ತದನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ/ಪರಿಗಣಿಸಲಾಗುವುದಿಲ್ಲ. ಯಾವುದೇ ಕಾರಣ ನೀಡದೆ ಟೆಂಡರ್ ಪುರಸ್ಕರಿಸುವ ಹಾಗೂ ತಿರಸ್ಕರಿಸುವ, ಮುಂದೂಡುವ ಮತ್ತು ರದ್ದು ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ, ಕೋಲಾರ

ವಾಸಾಸಂಇ/ಉನಿ-ಸಿ.ಪಿ/135/ಎಂಸಿಎ/2023-24

BENGALURU SMART CITY LIMITED

30/1, 3rd & 4th Floors, BBMP Building, Thimmaiah Road, Opp. Alliance Francaise de School, Vasanthnagar, Bengaluru - 52.
Ph: 080-22200080. E-mail: bsclnodal@gmail.com
CIN: U74999KA2018PLC109175

No. BenSCL/TS/18/2023-24(VOL-IV)/190 **Date: 25.05.2023**

ಪ್ರಕಟಣೆ

ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಆರು ವಾಹನಗಳ ಸೇವೆಯನ್ನು ಮುಂದಿನ ಒಂದು ವರ್ಷದ ಅವಧಿಯವರೆಗೆ ಸೇವೆಯನ್ನು ಒದಗಿಸಲು ಆಸಕ್ತ ಅರ್ಹ ಬಿಡ್‌ದಾರರಿಂದ E-Procurement Portal ಮುಖಾಂತರ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು e-Procurement ವೆಬ್‌ಸೈಟ್: **www.eproc.karnataka.gov.in** ಮೂಲಕ ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **08.06.2023.**

ಸಹಿ/- ಮುಖ್ಯ ಹಣಕಾಸು ಅಧಿಕಾರಿ, ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ಬೆಂಗಳೂರು.

ವಾಸಾಸಂಇ/ವಾ.ಪ್ರ/120/ದಿಶಾ/2022-23

PUBLIC NOTICE

This is to inform the General Public that our client intends to purchase/acquire the property described in the Schedule hereto below free from all encumbrances. Any person or persons, having any claim, interest or right on the property described in the Schedule written hereunder or any part thereof by way of any litigation(s) pending before any court or tribunal or governmental or statutory authority or by way of inheritance, sale, exchange, mortgage, lien, pledge, gift, trust, bequest, possession, lease, charge, easement, grant, tenancy or encumbrance howsoever or otherwise is hereby requested to intimate the same to the undersigned in writing within seven (7) days from the date of Publication of this notice of his/her/its claim, if any, with all supporting documents failing which the transaction shall be completed without reference to such claim, and the claims, if any, of such person(s) shall be treated as waived and not binding on our client.

SCHEDULE PROPERTY

All the piece and parcel of undeveloped converted property, being various lands totally measuring 22 Acres 21Guntas, excluding 08 Guntas of Kharab, situated at DoddaCheemanahalli Village, KundanaHobli, Devanahalli Taluk, Bangalore Rural District.

List of Survey Numbers, Extents and Boundaries are as follows:

Sl. No	Survey No.	Extent A	Extent G	Kharab A	Kharab G	Owner	East	West	North	South
1.	89/1	3	39			Ravindra C.N, S/o. C. Narayan swamy	Pond	Road	Land in Survey No. 101, 102, 103, 94, 95 and 96 of Dodda Cheemana halli Village	Land in Survey No. 89/2, 90/2, 84, 87 of Dodda Cheemana halli Village
2.	90/1	4	37							
3.	91	3	22							
4.	92	4	12							
5.	93/2	1	9		5					
6.	109/1	1	34		3					
7.	199/2	2	28							

S. T. Prashantha Kumar
Senior Partner
Fox Mandal & Associates
6/12, Gurappa Avenue, Primrose Road, Bangalore - 560025
Phone : +91 80 2559 5911 e-mail : prashantha.kumar@foxmandal.in

SOBHA LIMITED

SOBHA — PASSION AT WORK

CIN : L45201KA1995PLC018475
Regd. Office: 'SOBHA', Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103.
Ph: +91-80-49320000, Fax: +91-80-49320444
email: investors@sobha.com
website: www.sobha.com

Extract of the consolidated audited financial results for the quarter and year ended 31 March 2023

(₹ in Million)

Particulars	3 months ended 31.03.2023 [Refer note 2] [Audited]	Preceding 3 months ended 31.12.2022 [Unaudited]	Corresponding 3 months ended 31.03.2022 (*) [Refer note 2] [Audited]	Year ended 31.03.2023 [Audited]	Year ended 31.03.2022(*) [Audited]
Total income from operations	12,401	8,980	7,437	34,024	26,453
Profit before tax	669	351	248	1,449	2,366
Profit after tax	486	318	142	1,042	1,732
Total comprehensive income for the period (comprising profit for the period (after tax) and other comprehensive income (after tax))	471	318	151	1,002	1,723
Paid-up Equity Share Capital	948	948	948	948	948
Other equity				23,999	23,281
Earnings per Share (of ₹10/- each) (for continuing and discontinued operations)					
Basic and diluted EPS	5.13	3.35	1.50	10.99	18.27

(*)refer note 6

Notes :
(1) The key data of standalone financial results is as under:

(₹ in Million)

Particulars	3 months ended 31.03.2023 [Refer note 2] [Audited]	Preceding 3 months ended 31.12.2022 [Unaudited]	Corresponding 3 months ended 31.03.2022 (*) [Refer note 2] [Audited]	Year ended 31.03.2023 [Audited]	Year ended 31.03.2022(*) [Audited]
Total Income	12,525	9,190	7,473	34,259	26,352
Profit before tax	626	421	276	1,317	2,310
Profit after tax	440	366	167	953	1,690
Total comprehensive income	425	366	176	913	1,681

(*)refer note 6

(2) The consolidated audited financial results of Sobha Limited ('the Holding Company') and its subsidiaries (the Holding Company, along with its subsidiaries referred to as 'the Group') and its associate and joint venture for the quarter and year ended 31 March 2023 have been prepared in accordance with the recognition and measurement principles laid down in the applicable Indian Accounting Standards (Ind AS) as prescribed under Section 133 of the Companies Act, 2013 ('The Act') read with relevant rules thereunder and in terms of Regulation 33 of the SEBI (Listing Obligations and Disclosure Requirements) Regulations, 2015. These consolidated audited financial results have been reviewed and recommended by the Audit Committee and approved by the Board of Directors at their meeting held on 29 May 2023.

The figures for the quarter ended 31 March 2023 and 31 March 2022 are the balancing figures between the audited figures in respect of the full financial years and the published unaudited year to date figures up to third quarter of the respective financial years. Also the figures up to the end of the third quarter were only reviewed and not subject to audit.

(3) The Statutory auditors of the Holding Company have carried out audit as required under regulation 33 of SEBI (Listing Obligations and Disclosure Requirements) Regulations 2015 of the above consolidated audited financial results for the year ended 31 March 2023 and have issued an unmodified audit report.

(4) The quarter and year ended financial results are available on the Company's website www.sobha.com and on the website of BSE Limited (www.bseindia.com) and The National Stock Exchange of India Limited (www.nseindia.com).

(5) The Board of Directors of the Company have recommended a final dividend of ₹ 3 per equity share amounting to ₹ 285 million for the year ended 31 March 2023, in their meeting held on 29 May 2023, which will be placed for approval of the shareholders in the ensuing Annual General Meeting of the Company.

(6) The financial information for the previous reporting periods were restated for correction of certain items in accordance with Ind AS 8, Accounting Policies, Changes in Accounting Estimates and Errors which are described in more detailed as below:

(i) The Group had accrued for notional interest on advance from customers involving sale of real estate unit and had capitalised such interest to project cost. However, the Group received such consideration in accordance with the terms of the contract in proportion to the completion of such real estate project and accordingly does not involve any significant financing element.

(ii) The Holding Company has restated the accounting for revenue from the development and transfer of constructed area/revenue sharing arrangement in exchange of such development rights acquired under Joint Development Arrangement (JDAs) [not being jointly controlled operations] on a gross basis in accordance with guidance on 'non-cash consideration' under Ind AS 115, Revenue from Contract with Customer.

(iii) The Holding Company has restated the capitalisation of borrowing cost on lands and land advances wherein no significant development activity had commenced and projects wherein substantially all activities necessary for their sale had been completed to capitalise appropriate borrowing cost and another directly attributable project cost to projects under construction in accordance with relevant Ind AS.

(iv) rectification of certain other items pertaining to (a) accounting of construction contracts, other operating income and expense (b) right of use asset (c) discounting of retention money and (d) reclassification of borrowings. Consequential impact of deferred tax has been recorded on these adjustments.

The effect of restatement on financial results line items for the previous periods / year is as follows:

Impact on Statement of financial results

(₹ in Million)

Particulars	Note	3 months ended 31.03.2022 [Audited] [Refer note 2]	Year ended 31.03.2022 [Audited]
Revenue from operations	(i), (ii), (iv)	(210)	(1,696)
Other income	(iv)	(21)	(67)
Total income		**(231)**	**(1,763)**
Land purchase cost	(ii)	112	112
Changes in purchase of project materials, land stock, work in progress and finished goods	(i), (ii), (iii)	843	1,620
Employee benefits expense	(iv)	59	217
Finance cost	(i), (iii)	(1,163)	(4,415)
Depreciation and amortization expense	(iv)	(10)	(2)
Other expenses	(iv)	45	(80)
Total expenses		**(114)**	**(2,548)**
Profit before tax		**(117)**	**785**
Deferred tax (credit)/charge	(i), (ii), (iii), (iv)	(8)	221
Total comprehensive income for the period / year		**(109)**	**564**

Impact on Consolidated Balance sheet

(₹ in Million)

Particulars	Note	As at 31.03.22 [Audited]	As at 31.03.21 [Audited]
Property, plant and equipment	(iv)	31	73
Investment property	(iv)	285	427
Right of use assets	(iv)	30	32
Trade receivables	(iv)	91	97
Other non-current financial assets	(iv)	(169)	(151)
Deferred tax asset (net)	(iv)	262	475
Other non-current assets	(i), (iii)	(639)	(658)
Inventories	(i), (ii), (iii)	2,245	3,738
Loans	(iv)	11	-
Other current financial assets	(iii)	20	84
Other current assets	(ii)	(923)	(854)
Other equity	(i), (ii), (iv)	(876)	(1,439)
Non-current borrowings	(iv)	(3,629)	-
Non-current lease liabilities	(iv)	163	150
Current borrowings	(iv)	4,137	420
Current lease liabilities	(iv)	(10)	(1)
Total outstanding dues of creditors other than micro enterprises and small enterprises	(iv)	(2,283)	(2,331)
Other current financial liabilities	(iv)	1,016	1,016
Other current liabilities	(iv)	2,715	5,449

Impact on Consolidated Cash flows

(₹ in Million)

Particulars	Year ended 31.03.2022 [Audited]
Net cash from operating activities	(50)
Net cash flows from financing activities	50

Restatement in the earning per share

Particulars	3 months ended 31.03.2022 [Audited]	Year ended 31.03.2022 [Audited]
Earning per equity share (face value ₹ 10 Each)		
Earnings per share (EPS) - (in ₹) - Reported	2.64	12.32
Earnings per share (EPS) - (in ₹) - Restated	1.50	18.27

(7) Previous period's / year's figures have been regrouped or reclassified wherever necessary to conform with the current period / year figures.

For and on behalf of the Board of Directors of Sobha Limited

Bengaluru, India
29 May, 2023

Jagadish Nangineni
Managing Director
DIN: 01871780

ನಿಮಗೆ ನೀವೇ ವೈದ್ಯರಾಗಬೇಡಿ

‘ಹೊಸ ವೈದ್ಯನಿಗಿಂತ ಹಳೆಯ ರೋಗಿ ಮೇಲು’ ಎನ್ನುವ ಗಾದೆಯಿದೆ. ಇದು ರೋಗಪತ್ತೆಯ ವಿಷಯದಲ್ಲಿ ಅನುಭವದ ಮಹತ್ವವನ್ನು ತಿಳಿಸುತ್ತದೆಯೇ ಹೊರತು, ಸ್ವಯಂವೈದ್ಯವನ್ನು ಪುರಸ್ಕರಿಸುವುದಿಲ್ಲ

“ ಯಾವುದೋ ಹಳೆಯ ರೋಗಿ ಹಿಂದೆಂದೋ ಪಡೆದ ಚಿಕಿತ್ಸೆ ವರ್ತಮಾನದಲ್ಲಿ ಅಪ್ರಸ್ತುತವಾಗಬಹುದು.

ಡಾ. ಕಿರಣ್ ವಿ. ಎಸ್.

ಈಚೆಗೆ ಸ್ವಯಂವೈದ್ಯ ಹೆಚ್ಚು ಬಳಕೆಯಾಗುತ್ತಿದೆ. ಸ್ವಯಂವೈದ್ಯ ಅಥವಾ ಸ್ವಚಿಕಿತ್ಸೆ ಎನ್ನುವುದು ತಮ್ಮ ಆರೋಗ್ಯಸಮಸ್ಯೆಗಳಿಗೆ ತಾವೇ ಚಿಕಿತ್ಸೆ ಮಾಡಿಕೊಳ್ಳುವುದು. ಸ್ವಯಂವೈದ್ಯದ ಪ್ರವೃತ್ತಿ ಈ ಮೊದಲೂ ಇತ್ತು. ಆಗ ಪುಸ್ತಕಗಳನ್ನು ಓದಿಯೋ, ಅಥವಾ ಹಳೆಯ ರೋಗಿಗಳನ್ನು ಕೇಳಿಯೋ ತಾವೇ ಚಿಕಿತ್ಸೆ ಮಾಡಿಕೊಳ್ಳುತ್ತಿದ್ದ ಜನರಿದ್ದರು. ವರ್ತಮಾನದಲ್ಲಿ ತಂತ್ರಜ್ಞಾನದ ನೆರವಿನಿಂದ ಅದೇ ಕೆಲಸವನ್ನು ಗೂಗಲ್, ಯೂಟ್ಯೂಬ್, ಚಾಟ್-ಜಿಪಿಟಿ ಮೊದಲಾದ ಅನುಕೂಲಗಳನ್ನು ಬಳಸಿ ಮಾಡುತ್ತಿದ್ದಾರೆ. ಸಾಧನಗಳು ಬದಲಾದರೂ ಪರಿಣಾಮ ಬದಲಾಗುವುದಿಲ್ಲ.

ಆರೋಗ್ಯ ಸಮಸ್ಯೆಗಳಲ್ಲದೆ, ಯಾವುದೇ ಸಮಸ್ಯೆಯನ್ನು ಬಗೆಹರಿಸಲು ಹಲವಾರು ದಾರಿಗಳಿವೆ. ಅವುಗಳ ಪೈಕಿ ಅತ್ಯಂತ ವೈಜ್ಞಾನಿಕ ವಿಧಾನವೆಂದರೆ ಸಮಸ್ಯೆಯ ಕಾರಣವನ್ನು ಪತ್ತೆ ಮಾಡಿ, ಅದರ ಪರಿಣಾಮಗಳನ್ನು ವಿಶ್ಲೇಷಣೆಗೈದು, ಅದಕ್ಕೆ ತಕ್ಕಂತಹ ಸಮರ್ಥ ಪರಿಹಾರಗಳನ್ನು ನಿಯೋಜಿಸುವುದು. ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಈ ಪ್ರಕ್ರಿಯೆ ಅತ್ಯಗತ್ಯ. ಅಧ್ಯಯನ ಮತ್ತು ಅನುಭವಗಳಿಲ್ಲದೆ ಇದನ್ನು ಮಾಡಲಾಗದು. ಚಿಕಿತ್ಸೆ ನೀಡುವ ಮುನ್ನ ಕಾಯಿಲೆ ಏನೆಂದು ಅರಿಯುವುದು ಮುಖ್ಯವಾದ ಮಜಲು. ಅಂದಾಜಿನ ಚಿಕಿತ್ಸೆಗಳು ಪರಿಣಾಮಕಾರಿಯಾಗುವುದು ಅಪರೂಪ; ಅಪಾಯಕಾರಿಯಾಗುವುದು ಹೆಚ್ಚು.

ಮೂಲತಃ ಕಾಯಿಲೆ ಎಂದರೇನು? ಹತ್ತಾರು ಅಂಗಗಳಿರುವ ನಮ್ಮ ಶರೀರದಲ್ಲಿ ಪ್ರತಿ ಕ್ಷಣವೂ ಸಾವಿರಾರು ಸಂಕೀರ್ಣ ಭೌತಿಕ ಮತ್ತು ರಾಸಾಯನಿಕ ಪ್ರಕ್ರಿಯೆಗಳು ಘಟಿಸುತ್ತಲೇ ಇರುತ್ತವೆ. ಬಹುತೇಕ ಅಂಗಗಳು ಮತ್ತೊಂದರ ನೆರವಿನಿಂದ ಕೆಲಸ ಮಾಡುತ್ತವೆ. ಯಾವುದೋ ಒಂದು ಅಂಗದ ತಾತ್ಕಾಲಿಕ ಇಲ್ಲವೇ ದೀರ್ಘಕಾಲಿಕ ವೈಫಲ್ಯದಿಂದ ಅದಕ್ಕೆ ಹೊಂದಿಕೊಂಡು ಕಾರ್ಯ ನಿರ್ವಹಿಸುವ ಮತ್ತೊಂದು ಅಂಗದ ಕೆಲಸದಲ್ಲಿ ಸಹಜವಾಗಿಯೇ ಏರುಪೇರಾಗುತ್ತದೆ. ಉದಾಹರಣೆಗೆ, ಹೃದಯದ ಕೆಲಸದಲ್ಲಿ ಸಮಸ್ಯೆ ಬಂದಾಗ, ಮೆದುಳಿಗೆ ಸರಿಯಾದ ಪ್ರಮಾಣದಲ್ಲಿ ರಕ್ತ ತಲುಪದೆ ಅದರ ಕೆಲಸದ ಮೇಲೆ ಪ್ರತಿಕೂಲ ಪರಿಣಾಮವಾಗಬಹುದು. ಮೆದುಳು, ಹೃದಯ, ಶ್ವಾಸಕೋಶಗಳು, ಯಕೃತ್, ಮತ್ತು ಮೂತ್ರಪಿಂಡಗಳು ನಮ್ಮ ದೇಹದ ಪ್ರಮುಖ ಅಂಗಗಳು. ಇಂತಹ ಯಾವುದೇ ಪ್ರಮುಖ ಅಂಗದ ವೈಫಲ್ಯದ ವೇಳೆ ಇವುಗಳ ಮೇಲೆ ಅವಲಂಬಿತವಾಗಿರುವ ಹಲವಾರು ಅಂಗಗಳು ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡಲಾಗದೇ ಅನತಿಕಾಲದಲ್ಲೇ ಶರೀರ ಅಸೌಖ್ಯಕ್ಕೆ ಒಳಗಾಗುತ್ತದೆ. ಪ್ರಮುಖ ಅಂಗಗಳ ಕಾರ್ಯನಿರ್ವಹಣೆಯ ಅಡಚಣೆಗೆ ರೋಗಕಾರಕ ಕ್ರಿಮಿಗಳು ಕಾರಣ ಆಗಿರಬಹುದು; ಅಂಗಗಳ ವಯೋಸಹಜ ವೈಫಲ್ಯ ಆಗಿರಬಹುದು; ರಕ್ತನಾಳಗಳ ಸಮಸ್ಯೆಯಿಂದ ಆಯಾ ಅಂಗಕ್ಕೆ ರಕ್ತವನ್ನು ಪೂರೈಸುವಲ್ಲಿ ಅಡೆತಡೆ ಆಗಿರಬಹುದು; ಅಂಗಗಳ ಕ್ಯಾನ್ಸರ್ ಗಂತಿಗಳು ಆಗಿರಬಹುದು. ಹೀಗೆ, ಸಮಸ್ಯೆಗಳ ಮೂಲಕ್ಕೆ ಹಲವಾರು ಕಾರಣಗಳಿರುತ್ತವೆ.

ಮೇಲ್ನೋಟಕ್ಕೆ ಶರೀರದಲ್ಲಿನ ಅಸೌಖ್ಯದ ಬಾಹ್ಯಚಿಹ್ನೆಗಳು ಕಾಣುತ್ತವೆಯೇ ಹೊರತು, ಅದಕ್ಕೆ ಕಾರಣವಾದ ಮೂಲಸಮಸ್ಯೆ ನೇರವಾಗಿ ಕಾಣುವುದು ಅಪರೂಪ. ಕಾಯಿಲೆಯನ್ನು ಗುಣಪಡಿಸುವವರು ಈ ಚಿಹ್ನೆಗಳ ಜಾಡನ್ನು ಹಿಡಿದು ಮೂಲದೆಡೆಗೆ ಸಾಗಬೇಕು. ಅದರ ಬದಲಿಗೆ ಸ್ವಯಂವೈದ್ಯ ಮಾಡಿಕೊಂಡು ಕಾಯಿಲೆ-ಸೂಚಕ ಚಿಹ್ನೆಗಳನ್ನೇ ಅಳಿಸಿ ಹಾಕಿದರೆ ತುಂಬ ನಷ್ಟ ಅನುಭವಿಸಬೇಕಾಗುತ್ತದೆ. ಸಮಸ್ಯೆಯ ಬೇರುಮಟ್ಟಕ್ಕೆ ತಲುಪಿ, ಶರೀರಕ್ಕೆ ಆಗಿರುವ ಗಾಸಿಯನ್ನು ಗುರುತಿಸಿ, ಅದಕ್ಕೆ ಕಾರಣವಾದ ತೊಂದರೆಯನ್ನು ನಿವಾರಿಸಿದರೆ ಮಾತ್ರ ಕಾಯಿಲೆ ಗುಣವಾದಂತೆ. ಕೆಲವೊಮ್ಮೆ 10 ರೂಪಾಯಿ ಬೆಲೆಯ ಔಷಧ ನೀಡಲು ಸಾವಿರ ರೂಪಾಯಿ ಮೌಲ್ಯದ ಪರೀಕ್ಷೆಗಳನ್ನು ಮಾಡಬೇಕಾದ ಸಂದರ್ಭ ಒದಗುತ್ತದೆ.

ಇಂತಹ ವೈಜ್ಞಾನಿಕ ಪ್ರಕ್ರಿಯೆಯನ್ನು ಅನುಸರಿಸದೇ ಇರುವ ಯಾವುದೇ ವಿಧಾನವೂ ಸರಿಯಾದ ಫಲಿತಾಂಶವನ್ನು ನೀಡಲಾರದು. ಸಮಸ್ಯೆಯ ಮೂಲವನ್ನು ತಿಳಿಯಲು ಕೇವಲ ಪ್ರಯೋಗಾಲಯದ ಪರೀಕ್ಷೆಗಳು ಮಾತ್ರವೇ ಬೇಕೆಂದೇನಿಲ್ಲ. ಬಹುತೇಕ ಕಾಯಿಲೆಗಳ ಕಾರಣವನ್ನು ಬಗೆಹರಿಸಲು ವೈದ್ಯರು ತಮ್ಮ ಅನುಭವಗಳ ಆಧಾರದ ಮೇಲೆ ಮಾಡುವ ರೋಗಲಕ್ಷಣಗಳ ವಿಶ್ಲೇಷಣೆ ಮತ್ತು ಕೂಲಂಕಷ ಭೌತಿಕ ಪರೀಕ್ಷೆಗಳು ಸಾಕಾಗುತ್ತವೆ. ಉದಾಹರಣೆಗೆ, ಹೊಟ್ಟೆನೋವಿನಿಂದ ಬಳಲುವ ರೋಗಿಯ ಸಮಸ್ಯೆಯನ್ನು ವಿಶ್ಲೇಷಿಸಲು ಅವರ ಇತರ ರೋಗಲಕ್ಷಣಗಳು; ಆಹಾರ ಪದ್ಧತಿ; ನೀರಿನ ಸೇವನೆ; ಮಲಮೂತ್ರ ವಿಸರ್ಜನೆಯ ವಿವರಗಳು; ಹೊಟ್ಟೆಯ ಯಾವ ಭಾಗದಲ್ಲಿ ನೋವು ಅಧಿಕವಾಗಿದೆ ಎಂಬ ಭೌತಿಕ ಪರೀಕ್ಷೆ – ಇಂತಹ ಕೆಲವು ಅಂಶಗಳಿಂದ ನುರಿತ ವೈದ್ಯರು ಇದು ಆಮ್ಲೀಯ ಹೆಚ್ಚಳವೇ; ಮೂತ್ರಪಿಂಡಗಳ ಸಮಸ್ಯೆಯೇ; ಅಜೀರ್ಣವೇ; ಮಲಬದ್ಧತೆಯೇ; ಅಪೆಂಡಿಕ್ಸ್ ಸೋಂಕೇ ಎಂಬುದನ್ನು ಸಾಕಷ್ಟು ನಿಖರವಾಗಿ ಪತ್ತೆ ಮಾಡಬಲ್ಲರು.

ಹಲವಾರು ಕಾಯಿಲೆಗಳನ್ನು ಸ್ವಲ್ಪ ವಿಶ್ರಾಂತಿ, ಸರಿಯಾದ ಆಹಾರಗಳ ನೆರವಿನಿಂದ ಯಾವುದೇ ಔಷಧೋಪಚಾರವಿಲ್ಲದೆಯೇ ಶರೀರ ತಂತಾನೇ ಗುಣಪಡಿಸಿಕೊಳ್ಳುತ್ತದೆ. ತಾನಾಗಿಯೇ ಸರಿಹೋಗಬಹುದಾದ ಇಂತಹ ಕಾಯಿಲೆಗಳಿಗೆ ಚಿಕಿತ್ಸೆಯೇ ಬೇಕಾಗುವುದಿಲ್ಲ. ಅವುಗಳಿಗೆ ಸ್ವಯಂವೈದ್ಯವಾದರೂ ಸರಿಯೇ; ಬೇರೆ ಯಾವುದೇ ಚಿಕಿತ್ಸೆಯಾದರೂ ಒಂದೇ. ಆದರೆ ಈ ರೀತಿಯಲ್ಲಿ ಗುಣವಾಗಲಾರದ ಕಾಯಿಲೆಗಳಿಗೆ ನಿಖರವಾದ ಕಾರಣವನ್ನು ಹುಡುಕುವುದು ಕಡ್ಡಾಯ. ಇಂತಹ ಕಾಯಿಲೆಗಳಿಗೆ ಕೇವಲ ರೋಗಲಕ್ಷಣಗಳನ್ನು ಆಧರಿಸಿ ಸ್ವಯಂವೈದ್ಯ ಮಾಡಿಕೊಳ್ಳುವುದು ಅಪಾಯಕಾರಿ. ಕೆಲವೊಮ್ಮೆ ಸ್ವಯಂವೈದ್ಯದ ಚಿಕಿತ್ಸೆಗಳು ಕಾಯಿಲೆಯ ಲಕ್ಷಣಗಳನ್ನು ನಿವಾರಿಸಿ ಇಡೀ ರೋಗನಿರ್ಣಯ ಪ್ರಕ್ರಿಯೆಯ ದಾರಿ ತಪ್ಪಿಸುತ್ತವೆ. ಉದಾಹರಣೆಗೆ, ಬ್ಯಾಕ್ಟೀರಿಯಾ ಸೋಂಕು ಉಂಟಾದಾಗ ವೈದ್ಯರ ಸಲಹೆ ಇಲ್ಲದೆ ಯಾವುದೋ ಆ್ಯಂಟಿಬಯಾಟಿಕ್ ಔಷಧವನ್ನು ಅರೆಬರೆ ಪ್ರಮಾಣದಲ್ಲಿ ಕಡಿಮೆ ಅವಧಿಗೆ ಸೇವಿಸಿದಾಗ, ರೋಗಕಾರಕಗಳ ವರ್ತನೆ ಏರುಪೇರಾಗಿ, ಇಡೀ ರೋಗದ ಲಕ್ಷಣಗಳು ಬೇರೆಯೇ ಸ್ವರೂಪ ಪಡೆಯುತ್ತವೆ. ಆಗ ಒಂದು ಸರಳ ಪರೀಕ್ಷೆ ಮಾಡುವ ಬದಲಿಗೆ ನಾಲ್ಕು ದುಬಾರಿ ಪರೀಕ್ಷೆಗಳು ಬೇಕಾಗುತ್ತವೆ.

‘ಹೊಸ ವೈದ್ಯನಿಗಿಂತ ಹಳೆಯ ರೋಗಿ ಮೇಲು’ ಎನ್ನುವ ಗಾದೆಯಿದೆ. ಇದು ರೋಗಪತ್ತೆಯ ವಿಷಯದಲ್ಲಿ ಅನುಭವದ ಮಹತ್ವವನ್ನು ತಿಳಿಸುತ್ತದೆಯೇ ಹೊರತು, ಸ್ವಯಂವೈದ್ಯವನ್ನು ಪುರಸ್ಕರಿಸುವುದಿಲ್ಲ. ಪ್ರಸ್ತುತ ವೈದ್ಯಕೀಯ ವಿಜ್ಞಾನ ದಿನದಿನವೂ ಮಹತ್ತರವಾಗಿ ಪ್ರಗತಿ ಹೊಂದುತ್ತಿದೆ. ಒಂದೆರಡು ದಶಕಗಳ ಹಿಂದೆ ಇದ್ದ ರೋಗಪತ್ತೆ ತಂತ್ರಜ್ಞಾನ, ಔಷಧಗಳು, ರೋಗಿಯ ಆರೈಕೆಯ ಮಾರ್ಗಸೂಚಿಗಳು ಇಂದು ಸಾಕಷ್ಟು ಬದಲಾಗುವುದು ವೈದ್ಯಕೀಯ ರಂಗದಲ್ಲಿ ಸಾಮಾನ್ಯ ಸಂಗತಿ. ಹೀಗಾಗಿ, ಯಾವುದೋ ಹಳೆಯ ರೋಗಿ ಹಿಂದೆಂದೋ ಪಡೆದ ಚಿಕಿತ್ಸೆ ವರ್ತಮಾನದಲ್ಲಿ ಅಪ್ರಸ್ತುತವಾಗಬಹುದು. ಸ್ವಯಂವೈದ್ಯದ ಅತಿ ದೊಡ್ಡ ದೌರ್ಬಲ್ಯ ಮತ್ತು ಅಪಾಯ ಇದೇ. ಇಂದಿನ ವೈದ್ಯಕೀಯ ಸೇವೆಗಳು ದುಬಾರಿ ಎಂಬ ಮಾತು ನಿಜ. ಆದರೆ, ಆರೋಗ್ಯಕ್ಕಿಂತ ಹೆಚ್ಚಿನ ಮೌಲ್ಯ ಜೀವನದಲ್ಲಿ ಇನ್ನಾವುದಕ್ಕೂ ಇಲ್ಲ ಎನ್ನುವುದೂ ಸತ್ಯ. ಪ್ರತಿಯೊಂದು ಸಮಸ್ಯೆಗೂ ತಜ್ಞವೈದ್ಯರೇ ಬೇಕೆಂದಿಲ್ಲ. ಒಳ್ಳೆಯ ಕುಟುಂಬ-ವೈದ್ಯರನ್ನು ಗುರುತಿಸಿ, ನಮ್ಮ ಆರೋಗ್ಯದ ಹೊಣೆಯನ್ನು ಅವರಿಗೆ ಒಪ್ಪಿಸಿದರೆ, ಎಂಬತ್ತು ಪ್ರತಿಶತ ಕಾಯಿಲೆಗಳನ್ನು ಅವರು ಸಮರ್ಥವಾಗಿ ನಿಭಾಯಿಸಬಲ್ಲರು. ಅಗತ್ಯ ಬಿದ್ದಾಗ ಸರಿಯಾದ ತಜ್ಞವೈದ್ಯರನ್ನೂ ಅವರೇ ಸೂಚಿಸಬಲ್ಲರು. ಸ್ವಯಂವೈದ್ಯ ಸೂಕ್ತವಲ್ಲ. ಇದರಿಂದ ಹಲವಾರು ತೊಂದರೆಗಳಿಗೆ, ಅಂಗವೈಫಲ್ಯಗಳಿಗೆ ಒಳಗಾದವರಿದ್ದಾರೆ; ಅಪಾಯಕಾರಿ ಮಾತ್ರೆಗಳನ್ನು ಸೇವಿಸಿ ಮರಣಿಸಿದವರಿದ್ದಾರೆ. ಆರೋಗ್ಯ ಸಮಸ್ಯೆಗಳ ನಿರ್ವಹಣೆ ವೈದ್ಯರಿಗಿರಲಿ. ಶರೀರವನ್ನು ಸ್ವಯಂವೈದ್ಯದ ಅಪಾಯಗಳಿಗೆ ಒಡ್ಡಿಕೊಳ್ಳದಿರುವುದು ಜಾಣತನ.

ಮಕ್ಕಳ ಆಹಾರ ಹೀಗಿರಲಿ

ಡಾ. ಪಲ್ಲವಿ ಹೆಗಡೆ

ಕಾಳಜಿ

ಶಾಲೆಗಳು ಮತ್ತೆ ತೆರೆದಿವೆ. ತಾಯಂದಿರ ಚಿಂತೆಯೇನೆಂದರೆ ಇಂದು ಮಕ್ಕಳ ಡಬ್ಬಿಗೆ ಏನನ್ನು ಹಾಕಲಿ? ಬೆಳಗ್ಗೆ ಹೊರಡುವ ಮುನ್ನ ಏನನ್ನು ತಿನ್ನಿಸಲಿ? ಮನೆಗೆ ಬಂದ ನಂತರ ತಿನ್ನಲೇನು ಕೊಡಲಿ? ಊಟಕ್ಕೇನು? ಕುಡಿಯಲೇನು? ಯಾವ ಹಣ್ಣು-ತರಕಾರಿಯನ್ನು ಹೇಗೆ ತಿನ್ನಿಸಲಿ? ಮಲಗುವ ಮುನ್ನ ಹಾಲು, ಹಣ್ಣು ಕೊಡುವುದೋ ಬೇಡವೋ? ಹಾಲು ಮತ್ತಷ್ಟು ಪೌಷ್ಟಿಕವಾಗಲೇನು ಮಾಡಲಿ?

ಮಕ್ಕಳ ಆಹಾರದ ವಿಚಾರದಲ್ಲಿಯೂ ದೊಡ್ಡವರಿಗೆ ಅನ್ವಯಿಸುವ ನಿಯಮಗಳೇ ಇವೆ. ಅಂದರೆ, ಹಸಿವಿರುವಷ್ಟು ತಿನ್ನುವುದು, ಬಾಯಾರಿಕೆ ನೀಗುವಷ್ಟು ಕುಡಿಯುವುದು. ಬೆಳಗ್ಗೆ, ಮಧ್ಯಾಹ್ನ, ಸಂಜೆ, ರಾತ್ರಿಯ ಆಹಾರ-ಪಾನಗಳನ್ನು ಹೊರತುಪಡಿಸಿ ಬೇರೆ ಸಮಯದಲ್ಲಿ ಏನನ್ನೇ ತಿನ್ನಲು, ಕುಡಿಯಲು ನೀಡುವುದು ಮಕ್ಕಳ ಜೀರ್ಣಶಕ್ತಿಗೆ ಹೊರೆಯಾಗಬಹುದು. ಜ್ವರ, ನೆಗಡಿ, ಶ್ವಾಸಕೋಶದ ತೊಂದರೆಗಳು, ಗಂಟಲುನೋವು, ವಾಂತಿ-ಭೇದಿ, ಹೊಟ್ಟೆನೋವು ಮೊದಲಾದ ಸಮಸ್ಯೆಗಳು ಮಗುವಿಗೆ ಆಗಾಗ ಕಾಡುತ್ತಿದೆಯೆಂದರೆ ಆಹಾರ-ಪಾನಗಳು ಹೆಚ್ಚು ಸಲ ಸೇವಿಸಲು ನೀಡುತ್ತಿರುವುದು ಒಂದು ಕಾರಣ. ಅಥವಾ ಮಕ್ಕಳ ದೇಹದಲ್ಲಿ ಜೀರ್ಣಕ್ರಿಯೆಗೆ ತೊಂದರೆಯಾಗುವಂತಹ ಆಹಾರ-ಪಾನಗಳನ್ನು ನೀಡಲಾಗುತ್ತಿದೆ ಎಂದೇ ಅರ್ಥ. ಹೆಚ್ಚು ಹೆಚ್ಚು ಪೋಷಣೆಯು ಮಕ್ಕಳಿಗೆ ಸಿಗಲಿ ಎಂಬ ಉದ್ದೇಶದಿಂದ ಪದೇ ಪದೇ ತಿನ್ನಿಸುವುದು, ಕುಡಿಸುವುದು ಅನಾರೋಗ್ಯಕ್ಕೆ ನಾಂದಿ. ಎಷ್ಟು ಸಲ, ಎಷ್ಟು ಪ್ರಮಾಣದಲ್ಲಿ ತಿನ್ನಲಾಗಿದೆ, ಕುಡಿಯಲಾಗಿದೆ ಎಂಬುದಕ್ಕಿಂತಲೂ ಸೇವಿಸಿದ ಆಹಾರ ಹೇಗೆ ಜೀರ್ಣವಾಗಿದೆ ಎನ್ನುವುದು ಮುಖ್ಯವಾಗುತ್ತದೆ. ಮಕ್ಕಳ ತೂಕ-ಎತ್ತರ ಇವುಗಳಷ್ಟೇ ಆರೋಗ್ಯದ ಮಾಪನವಲ್ಲ.

ಮುಂಜಾನೆ ಮಕ್ಕಳು ಕಿರಿಕಿರಿಯಿಲ್ಲದೆ ಏಳಬೇಕೆಂದರೆ ರಾತ್ರಿ ಏಳರಿಂದ ಎಂಟರೊಳಗೆ ಊಟ-ನೀರು ಮುಗಿದಿರಬೇಕು. ರಾತ್ರಿಯ ಆಹಾರದ ನಂತರ ಮತ್ತೆ ಹಾಲು, ಹಣ್ಣು, ನೀರು, ಮಿಲ್ಕ್‌ಶೇಕ್, ಪ್ರೊಟೀನ್‌ಮಿಕ್ಸ್ ಇತ್ಯಾದಿ ಯಾವುದೇ ಘನ-ದ್ರವಾಹಾರವನ್ನು ಕೊಡುವುದು ಯೋಗ್ಯವಲ್ಲ. ರಾತ್ರಿ ಆಹಾರವು ತಡವಾದಷ್ಟೂ ಗಾಢನಿದ್ರೆಗೆ ಪ್ರಯಾಸವಾಗುತ್ತದೆ. ಅಲ್ಲದೆ, ಬೆಳಗ್ಗೆ ತಾವಾಗಿಯೇ ಸುಖವಾಗಿ ಎಚ್ಚರಾಗುವುದೂ ಇಲ್ಲ. ಅಮ್ಮ-ಅಪ್ಪ ಕೂಗಿ, ಬಲವಂತವಾಗಿ ಎಚ್ಚರಿಸುವುದರಿಂದಲೂ ಮಕ್ಕಳ ಇಡೀ ದಿನದ ಉತ್ಸಾಹ, ಜೀರ್ಣಶಕ್ತಿಯು ಹಾಳಾಗುತ್ತದೆ. ಜೀರ್ಣಕ್ಕೆ ಹಗುರವಾಗಿರುವಂತೆ ತಾಜಾ, ಬಿಸಿ, ದಿವಸವೂ ಮನೆಯಲ್ಲಿ ಪರಂಪರಾಗತವಾಗಿ ಅಭ್ಯಾಸವಿರುವ ಆಹಾರವೇ ಆಗಿರಲಿ. ಯಾವುದೇ ಸೀಸನ್ ಆಗಿದ್ದರೂ ರಾತ್ರಿಯ ಆಹಾರದಲ್ಲಿ ಮೊಸರನ್ನು ಸೇವಿಸಲು ಯೋಗ್ಯವಲ್ಲ. ಅಲ್ಲದೇ, ಹಾಲು ಮತ್ತು ಮಜ್ಜಿಗೆ/ಮೊಸರನ್ನು ಒಟ್ಟೊಟ್ಟಿಗೆ ಸೇರಿಸಿ ತಿನ್ನಿಸುವುದೂ ಅನಾರೋಗ್ಯಕರ. ರಾತ್ರಿಯ ಶೀತಲತೆಗೆ ಹಣ್ಣು ಅಗತ್ಯವಿಲ್ಲ. ಹಣ್ಣುಗಳನ್ನು ಹಗಲಿನ ಆಹಾರದಲ್ಲಿಯೇ ಕೊಡುವುದು ಉತ್ತಮ.

ರಾತ್ರಿಯ ಆಹಾರಕ್ಕೂ ಮೊದಲು ಸಂಜೆ ಸ್ನಾಕ್ಸ್/ಚಾಟ್ಸ್ ತಿನ್ನಿಸುವುದು ಮತ್ತೊಂದು ದುರಭ್ಯಾಸ. ಸಂಜೆ 4ರಿಂದ 5ರ ಸಮಯದಲ್ಲಿ ಒಂದು ಲೋಟ ಬಿಸಿಹಾಲು ಸಾಕಷ್ಟು ಪೋಷಕ. ಹುರಿದ ಬಾದಾಮಿ, ಹುರಿದ ಕಮಲದ ಬೀಜ, ಹುರಿದ ರಾಗಿ, ಹುರಿದ ಗೋಧಿನುಚ್ಚು, ಏಲಕ್ಕಿ ಇವುಗಳನ್ನು ನುಣ್ಣಗೆ ಪುಡಿಮಾಡಿ ಇಟ್ಟುಕೊಳ್ಳಬಹುದು. ಪುಡಿಯನ್ನು ಹಾಲಿನೊಂದಿಗೆ ಕಾಯಿಸಿ ಮಾಲ್ಟ್‌ನಂತೆ ಕುಡಿಯಲು ಕೊಡಬಹುದು. ಪದೇ ಪದೇ ಜ್ವರ, ನೆಗಡಿ ಮುಂತಾದ ಅನಾರೋಗ್ಯದಿಂದ ಬಳಲುವ ಮಕ್ಕಳಿಗೆ ಕೊತ್ತುಂಬರಿ, ಜೀರಿಗೆ, ಸೋಂಪು, ಶುಂಠಿಗಳ ಪುಡಿಯನ್ನು ಹಾಕಿ ಕಾಯಿಸಿದ ಹಾಲು ಸೂಕ್ತ. ಇದು ಜೀರ್ಣಶಕ್ತಿಯನ್ನು ಕಾಪಾಡುತ್ತದೆ. ಚಾಕೊಲೇಟ್ ಡ್ರಿಂಕ್, ಮಿಲ್ಕ್‌ಶೇಕ್, ಕಾಯ್ದಿರಿಸಿದ ಜ್ಯೂಸ್, ತಾಜಾ ಹಣ್ಣಿನ ರಸಗಳು ಮತ್ತಷ್ಟು ಜೀರ್ಣಶಕ್ತಿಗೆ ಹಾನಿಕರ. ಹಾಲಿನೊಂದಿಗೆ ಏನನ್ನಾದರೂ ತಿನ್ನಲು ಕೇಳುವ ಮಕ್ಕಳಿಗೆ ಒಣದ್ರಾಕ್ಷಿ, ಒಣಅಂಜೂರ, ಖರ್ಜೂರ, ಮೊದಲಾದ ಒಣಹಣ್ಣುಗಳನ್ನು ತಿನ್ನಲು ಕೊಡಬಹುದು. ಭತ್ತದ ಅರಳಿನ ಉಂಡೆ, ಜೋಳದ ಅರಳಿನ ಉಂಡೆ, ಮಕ್ಕಾನ(ಕಮಲದ ಬೀಜ)ಗಳನ್ನು ಕೊಡಬಹುದು. ಇವು ಅತ್ಯಂತ ಹಗುರವಾಗಿ ಜೀರ್ಣವಾಗುವುದರಿಂದ ಹಾನಿಯಲ್ಲ.

ಶಾಲೆಯಿಂದ ಬಂದ ಕೂಡಲೆ ಮತ್ತೊಮ್ಮೆ ಊಟವನ್ನು ಮಾಡುವ ಮಕ್ಕಳು ಬಹಳಷ್ಟಿದ್ದಾರೆ. ಸ್ಕೂಲ್‌ನಲ್ಲಿ ಊಟದ ಬ್ರೇಕ್ ಇದ್ದರೂ, ಲಂಚ್ ಬಾಕ್ಸ್ ತಿಂದಿದ್ದರೂ ಅಮ್ಮನ ಒತ್ತಾಯಕ್ಕೆ ಮಣಿದು ತಿಂದರೆ ವಾರ, ಎರಡು ವಾರಕ್ಕೊಮ್ಮೆ ಅಜೀರ್ಣದಿಂದ ಆರೋಗ್ಯ ಕೈಕೊಡಬಹುದು. ಆದ್ದರಿಂದ, ಮಧ್ಯಾಹ್ನದ ಊಟದ ಡಬ್ಬಿಗೆ ಮಕ್ಕಳಿಗೆ ಏನೇ ಹಾಕುವುದಿದ್ದರೂ ಊಟದಂತೆ ಸ್ವಲ್ಪ ವೈವಿಧ್ಯದಿಂದ ಕೂಡಿರುವ ಅಕ್ಕಿ/ ಗೋಧಿ/ ರಾಗಿ/ ಜೋಳಗಳ ಆಹಾರವನ್ನು ಮನೆಯ ಅಭ್ಯಾಸದಂತೆ ಹಾಕಬಹುದು. ಊಟದ ಜೊತೆಗೆ ತಾಜಾ ಹಣ್ಣುಗಳ ತುಂಡುಗಳನ್ನು ಹಾಕಿದರೆ ಮತ್ತಷ್ಟು ಹೊಟ್ಟೆ ತುಂಬುತ್ತದೆ. ರವೆಲಾಡು, ಗೋಧಿ ಹಿಟ್ಟಿನ ಉಂಡೆ, ಒಣಹಣ್ಣುಗಳ ಉಂಡೆ, ಎಳ್ಳುಂಡೆ, ರಾಜ್ಗಿರಾಚಿಕ್ಕಿ ಮೊದಲಾದ ಸೈಡ್ಸ್ ಇದ್ದರೆ ಊಟ ಮತ್ತಷ್ಟು ರುಚಿಸುತ್ತದೆ. ಮಧ್ಯಾಹ್ನ ಸಾರು-ಅನ್ನ, ಮಜ್ಜಿಗೆಅನ್ನ, ರೈಸ್‌ಬಾತ್, ರೊಟ್ಟಿ-ಚಪಾತಿ-ಪಲ್ಯಗಳಂತಹ ಆಹಾರಗಳು ಸೂಕ್ತ.

ಸ್ಕೂಲ್‌ನಲ್ಲಿ ಬೆಳಿಗ್ಗೆ ಶಾರ್ಟ್ ಬ್ರೇಕ್ ಇದ್ದಾಗ ಇದ್ದಾಗ ವಿಭಿನ್ನ ಒಣಹಣ್ಣುಗಳನ್ನು ತಿನ್ನಲು ಇಡಬಹುದು. ಹಸಿತರಕಾರಿ, ಮೊಳಕೆಕಾಳು, ಸಲಾಡ್‌ಗಳನ್ನು ನಿತ್ಯವೂ ತಿನ್ನಲು ಕೊಡುವುದು ಮಕ್ಕಳ ಕರುಳನ್ನು ಒರಟಾಗಿಸುತ್ತದೆ, ಮೂಳೆ ಬೇಗನೆ ಸವೆಯುತ್ತದೆ, ಕಣ್ಣಿನ ದೃಷ್ಟಿಶಕ್ತಿಯು ಹಾಳಾಗುತ್ತದೆ. ಕೂದಲು, ಚರ್ಮಗಳ ನೈಜವರ್ಣವು ಕಳೆಗುಂದುತ್ತದೆ. ಏಕೆಂದರೆ ಇಂತಹ ಕಾಳು, ಹಸಿತರಕಾರಿಗಳು ಜೀವಕೋಶಗಳ ಸವಕಳಿಗೆ ಕಾರಣ (ವಾತಕರ).ಮುಂಜಾನೆ ತಾವಾಗಿಯೇ ಮಕ್ಕಳು ಎದ್ದ ಮೇಲೆ ಶೌಚಕ್ರಿಯೆ, ಸ್ನಾನವೆಲ್ಲಾ ಆದ ಮೇಲೆ ಮೊದಲ ಆಹಾರ-ಪಾನವಾಗಿ ತಿಂಡಿಯೊಟ್ಟಿಗೆ ಹಾಲು, ಹಾಲಿನ ಪಾನೀಯವನ್ನು ಕೊಡುವುದು ಸೂಕ್ತ. ಹಣ್ಣುಗಳನ್ನು ಜೊತೆಗೆ ತಿನ್ನಿಸಬಹುದು. ಎದ್ದ ಕೂಡಲೆ, ನೀರು-ಹಾಲು ಇತ್ಯಾದಿ ಯಾವುದೇ ದ್ರವಾಹಾರದ ಅಗತ್ಯವಿಲ್ಲ. ಕರುಳು ಸಹಜವಾಗಿಯೇ ಅಧೋವಾತ, ಮೂತ್ರ, ಮಲವಿಸರ್ಜನೆ ಮಾಡುವಂತೆ ಸಾಕಷ್ಟು ಸಮಯವನ್ನು ಕೊಡುವುದು ಒಳಿತು.

ನಡೆ ನುಡಿ ಸಹಜವಾಗಿರಲಿ

ರಮ್ಯಾ ಶ್ರೀಹರಿ

ಪ್ರಪಂಚ ನಮ್ಮ ಕಣ್ಣೆದುರಿಗಿದೆ; ಅದನ್ನು ಪ್ರತಿಕ್ಷಣವೂ ಒಂದಲ್ಲ ಒಂದು ರೀತಿಯಿಂದ ಅನುಭವಿಸುತ್ತಲೇ ಇರುತ್ತೇವೆ. ಆದರೆ ಪ್ರಪಂಚವನ್ನು ಅದಿರುವ ಹಾಗೆಯೇ ವಿವರಿಸಿ ಎಂದಾಗ ನಾವೇನು ಮಾಡುತ್ತೇವೆ? ಅದನ್ನು ನಾವು ‘ಕಂಡಂತೆ’ ವಿವರಿಸಿ ಅದಿರುವುದೇ ಹಾಗೆ, ಅದೇ ಸತ್ಯ, ಅದು ಎಲ್ಲರಿಗೂ ಹೀಗೆ ಕಾಣುವುದೇ ಸಹಜ, ಬೇರೆ ರೀತಿ ಕಾಣುವುದೇ ಅಸಹಜ ಎನ್ನುವ ತೀರ್ಪನ್ನು ಕೊಡುತ್ತೇವೆ. ನನ್ನ ಕಣ್ಣೆದುರಿಗೆ ಒಂದು ಉರುಟಾದ ವಸ್ತುವಿದ್ದರೆ ಅದರ ಒಂದು ಮುಖ ಮಾತ್ರ ನನಗೆ ಕಾಣಿಸುತ್ತದೆ. ಆದರೂ ಅದರ ಕಾಣದ ಮುಖವನ್ನೂ ಮನಸ್ಸಿನಲ್ಲೇ ಊಹಿಸಿಕೊಂಡು, ಆ ವಸ್ತುವಿನ ಸಂಪೂರ್ಣ ಸತ್ಯ ಗೊತ್ತಿರುವಂತೆ ಮಾತನಾಡತೊಡಗುತ್ತೇವೆ.

ನನಗೆ ಏನು ಕಾಣುತ್ತಿದೆಯೋ, ಹೇಗೆ ಕಾಣುತ್ತಿದೆಯೋ ಅದಕ್ಕೆ ನನ್ನ ಪೂರ್ವಗ್ರಹಿಕೆಗಳ, ಊಹೆಗಳ, ಪರಿಕಲ್ಪನೆಗಳ, ರಾಗ-ದ್ವೇಷಗಳ ಲೇಪವಿಲ್ಲದೆ ಕಾಣಬಹುದಾದರೆ, ಅನುಭವಿಸಬಹುದಾದರೆ, ಮಾತನಾಡಬಹುದಾದರೆ ಆಗ ಮಾತ್ರ ಅದು ಸಹಜ ನಡೆ–ನುಡಿ ಎನಿಸಿಕೊಳ್ಳುತ್ತದೆ. ಹೀಗೆ ಪ್ರಪಂಚವನ್ನು ಕಾಣುವುದು ಸುಲಭವಲ್ಲವೇ ಅಲ್ಲ. ಆದರೆ ಹೊಸ ಜೀವನಾನುಭವಗಳ ನೆಲೆಯಿಂದ, ಕಲಿಕೆಯಿಂದ, ಬೇರೆ ಬಗೆಯಲ್ಲಿ ಬದುಕನ್ನು ಕಾಣುವ ಜನರ ಒಡನಾಟದಿಂದ ನಾವು ಪ್ರಪಂಚವನ್ನು ‘ಕಾಣುವ’ ರೀತಿಯನ್ನು ಬದಲಾಯಿಸಿಕೊಳ್ಳಬಹುದು. ಅಷ್ಟೇ ಅಲ್ಲದೆ ಎಲ್ಲ ದೃಷ್ಟಿಕೋನಗಳೂ ಸಾಪೇಕ್ಷವೇ ಹೌದು. ಯಾವುದೇ ಚೌಕಟ್ಟಿರದ, ಕೋನವಿರದ ದೃಷ್ಟಿಯೇ ಸಾಧ್ಯವಿಲ್ಲ ಎನ್ನುವುದೂ ಅರ್ಥವಾಗುತ್ತದೆ.

‘ನಾನು’, ‘ವಿಶ್ವವ್ಯವಸ್ಥೆ’, ‘ಅನ್ಯರು’ ಎನ್ನುವ ಮೂರು ಕೋನಗಳಿರುವ ಒಂದು ತ್ರಿಕೋನವನ್ನು ಕಲ್ಪಿಸಿಕೊಂಡರೆ ಒಂದೊಂದು ಕೋನದಿಂದಲೂ ಮಿಕ್ಕ ಎರಡು ಕೋನಗಳು ಹೇಗೆ ಕಾಣುತ್ತಿವೆ ಎನ್ನುವುದರ ಒಟ್ಟು ಮೊತ್ತವನ್ನೇ ನಮ್ಮ ‘ಜೀವನದೃಷ್ಟಿ’ ಎನ್ನಬಹುದು. ನಮ್ಮ ಜೀವನದೃಷ್ಟಿಯೇ ನಮಗೆ ಯಾವುದು ಸಹಜ ಯಾವುದು ಅಸಹಜ ಎನ್ನುವುದನ್ನು ನಿರ್ದೇಶಿಸುತ್ತದೆ. ಉದಾಹರಣೆಗೆ, ಪ್ರಪಂಚದ ಎಲ್ಲರೂ ಒಂದಲ್ಲಾ ಒಂದು ರೀತಿಯಿಂದ ಬಾಧಿತರೇ ಹೌದು ಅಂದುಕೊಂಡಾಗ ಎಲ್ಲರ ಬಗ್ಗೆಯೂ ಸಹಾನುಭೂತಿಯುಂಟಾಗುತ್ತದೆ. ಯಾರನ್ನೇ ಆಗಲಿ ಸೌಜನ್ಯದಿಂದ ಮಾತಾಡಿಸುವ ಮನಸ್ಸಾಗುತ್ತದೆ; ಯಾರನ್ನಾದರೂ ಅನವಶ್ಯಕವಾಗಿ ಟೀಕಿಸುವುದು, ಚುಚ್ಚುಮಾತು, ವ್ಯಂಗ್ಯವಾಡುವುದೂ ಅಸಹಜವಾಗಿ ಕಾಣತೊಡಗುತ್ತದೆ. ಇದೆಲ್ಲದರ ಹಿನ್ನೆಲೆಯಲ್ಲಿ ನೋಡಿದಾಗ ಸಹಜವಾಗಿರುವುದು ಎಂದರೆ ‘ನನ್ನಂತೆ ನಾನಿರುವುದು’, ಇತರರಂತೆ ಆಗಬೇಕೆಂಬ ಕನಸನ್ನು ಕೈಬಿಟ್ಟು, ಇತರರನ್ನು ಸುಮ್ಮನೆ ಕಣ್ಣುಮುಚ್ಚಿಕೊಂಡು ಅನುಸರಿಸುವುದನ್ನು ತೊರೆದು, ಅಧಿಕೃತವಾದ ‘ನಾನು’ (authentic me) ಆಗುವುದು, ನನ್ನ ಜೀವನದೃಷ್ಟಿಯನ್ನು ಪಕ್ವಗೊಳಿಸಿಕೊಳ್ಳುವುದು; ಅದಕ್ಕೇ ಬದ್ಧವಾಗಿ ನಡೆದುಕೊಳ್ಳುವುದು ಎಂದರ್ಥ.

ಸಹಜ-ಅಸಹಜಗಳ ಈ ಸಂಕೀರ್ಣ ಸ್ವರೂಪವನ್ನು ಒಪ್ಪಿಕೊಂಡೇ ಬದುಕಿನಲ್ಲಿ ಸಹಜತೆಯನ್ನು ಸಾಧ್ಯವಾದಷ್ಟು ರೂಢಿಸಿಕೊಳ್ಳುವುದು ನಮ್ಮ ಮಾನಸಿಕ ಶಾಂತಿ, ನೆಮ್ಮದಿ, ಸಾಮಾಜಿಕ ಸ್ವಾಸ್ಥ್ಯಕ್ಕೂ ಪೂರಕವೇ ಹೌದು. ಸಹಜವಾಗಿರುವುದು ಎಷ್ಟು ಆರಾಮದಾಯಕ, ಅದು ನಮ್ಮನ್ನು ಎಷ್ಟು ನಿರಾಳವಾಗಿಸುತ್ತದೆ, ಹೇಗೆ ನಮ್ಮನ್ನು ಹಗುರಗೊಳಿಸುತ್ತದೆ ಎನ್ನುವುದರ ಅನುಭವವನ್ನು ಒಮ್ಮೆ ಮನಸ್ಸಿಗೆ ತಂದುಕೊಳ್ಳುವುದು ಸಹಜವಾಗಿರುವುದು ಯಾಕಷ್ಟು ಮುಖ್ಯ ಎನ್ನುವುದನ್ನು ತಿಳಿಸಿಕೊಡುತ್ತದೆ. ಗಟ್ಟಿ ನೆಲದ ಮೇಲೆ ದೇಹದ ಯಾವುದೇ ಭಾಗದಲ್ಲಿ ಬಿಗುವಿರದಂತೆ ಕುಳಿತು ಸರಾಗವಾಗಿ ಉಸಿರಾಡುತ್ತಾ, ನಮ್ಮ ಇಂದ್ರಿಯಗಳಿಗೆ, ದೇಹಕ್ಕೆ ‘ಇಲ್ಲಿ’, ‘ಈ ಕ್ಷಣ’ ಯಾವ ಅನುಭವ ಒದಗುತ್ತಿದೆಯೋ ಅದನ್ನು ಯಾವ ಬೇಕು ಬೇಡಗಳ ಹಂಗಿರದೆ ಮನಸಾರೆ ಅನುಭವಿಸುತ್ತಾ, ಮನಸ್ಸಿನಲ್ಲೇಳುವ ಆಲೋಚನಾ ತರಂಗಗಳಿಗೂ ನಮಗೂ ಸಂಬಂಧವೇ ಇಲ್ಲದಂತೆ ‘ಸುಮ್ಮನೆ ಇರುವುದರ’ ಆನಂದಾನುಭವವೇ ಸಹಜವಾಗಿರುವುದರ ನಿಜಾನುಭವ. ಇಂತಹ ಸೌಖ್ಯ ಯಾರಿಗೆ ಬೇಕಿಲ್ಲ ಹೇಳಿ? ಸಹಜವಾಗಿರುವುದರ ಅತ್ಯುತ್ತಮ ಮಾನದಂಡವೆಂದರೆ ಅದು ನಮ್ಮ ಉಸಿರಾಟವೇ ಹೌದು. ಯಾವ ನಡೆ, ನುಡಿ ನಮ್ಮನ್ನು ಸರಾಗವಾಗಿ ಉಸಿರಾಡುವ ಕಡೆಗೆ ಕೊಂಡೊಯ್ಯುತ್ತದೆಯೋ, ಯಾವುದು ನಮ್ಮ ದೇಹದಲ್ಲಿ ಶಾಂತಿಯನ್ನು, ಸೌಖ್ಯವನ್ನು ಉಂಟುಮಾಡುತ್ತದೆಯೋ, ಆಲೋಚನೆಗಳ ನಿಯಂತ್ರಣವನ್ನು ಸಡಿಲಗೊಳಿಸುತ್ತದೆಯೋ ಅದೇ ಸಹಜ. ಇಂತಹ ‘ಸಹಜ’ದ ಕಡೆಗೆ ನಮ್ಮನ್ನು ಕರೆದೊಯ್ಯುವ ನಡೆ ನುಡಿ ಹೀಗಿರುತ್ತದೆ:

1 ನಾವು ಸಮಯಸ್ಫೂರ್ತಿಯಿಂದ ವರ್ತಿಸಿದಾಗ ನಮ್ಮ ನಡೆ–ನುಡಿ ಸಹಜವಾಗಿರುತ್ತದೆ. ಎಲ್ಲಿ, ಹೇಗೆ, ಯಾರ ಜೊತೆ, ಎಷ್ಟು ಎನ್ನುವುದು ಆ ಕ್ಷಣಕ್ಕೆ ಹೊಳೆಯಬೇಕಾದರೆ ನಮ್ಮ ಆಲೋಚನೆಗಳಲ್ಲಿ, ಪೂರ್ವಗ್ರಹಗಳಲ್ಲಿ ಕಳೆದುಹೋಗದೇ ವಾಸ್ತವದಲ್ಲಿ ಉಪಸ್ಥಿತರಾಗಿರಬೇಕಾಗುತ್ತದೆ.

2 ನಾವು ಹೇಗಿದ್ದೀವೋ ಹಾಗೆ ಒಪ್ಪಿಕೊಂಡು ಯಾವ ಮುಖವಾಡಗಳಿಲ್ಲದೆ ನಮ್ಮನ್ನು ನಾವು ಪ್ರಪಂಚಕ್ಕೆ ತೋರ್ಪಡಿಸಿಕೊಳ್ಳುವ ಆತ್ಮವಿಶ್ವಾಸ ಮತ್ತು ಎಲ್ಲೂ ನಮ್ಮನ್ನೇ ಅತಿಯಾಗಿ ತೆರೆದಿಟ್ಟುಕೊಂಡು ಎಲ್ಲರ ಗಮನದ ಕೇಂದ್ರಬಿಂದುವಾಗದಿರುವ ವಿವೇಕ ನಮ್ಮನ್ನು ಸೌಖ್ಯವಾಗಿಡುತ್ತದೆ.

3 ಪ್ರಕೃತಿ, ಸಮಾಜ, ಕುಟುಂಬ ಎಲ್ಲವೂ ಒಂದು ವ್ಯವಸ್ಥೆ; ಅವೆಲ್ಲದಕ್ಕೂ ಅದರದೇ ರೀತಿ, ನೀತಿ, ಮಿತಿಗಳಿರುತ್ತವೆ. ಆದರೆ ಎಲ್ಲವೂ ನಮ್ಮ ಮೂಗಿನ ನೇರಕ್ಕೇ ನಡೆಯಬೇಕೆನ್ನುವ ಆಗ್ರಹ ಸಹಜ ಸಂತೋಷವನ್ನು ಕಿತ್ತುಕೊಳ್ಳುತ್ತದೆ.

4 ಪ್ರಪಂಚ ನಮ್ಮನ್ನು ಹೇಗೆ ನೋಡುತ್ತದೆ ಎನ್ನುವುದರ ಬಗ್ಗೆ ಅತಿಯಾಗಿ ತಲೆಕೆಡಿಸಿಕೊಂಡು, ಎಲ್ಲರೂ ನಮ್ಮನ್ನು ನೋಡುವ ಬಗೆಯನ್ನು ನಮ್ಮ ಅನುಕೂಲಕ್ಕಾಗಿ ತಿದ್ದುವುದು, ಮಾರ್ಪಡಿಸುವುದು ನಮ್ಮನ್ನು ಅಸಹಜಗೊಳಿಸುತ್ತದೆ.

5 ನಮ್ಮದೇನಾದರೂ ತಪ್ಪಿದ್ದು, ಇತರರ ಮುಂದೆ ಅದು ನಮ್ಮ ಅರಿವಿಗೆ ಬಂದಾಗ, ಅದನ್ನು ಹೇಗಾದರೂ ‘ಸರಿ’ ಎಂದು ಎಲ್ಲರನ್ನೂ ಒಪ್ಪಿಸುವ ಪ್ರಯತ್ನವನ್ನು ಕೈಬಿಟ್ಟು ‘ಹೌದು, ಇದು ತಪ್ಪಾಯ್ತು’ ಎಂದು ಆತ್ಮನಿಂದನೆಮಾಡಿಕೊಳ್ಳದೆ ಒಪ್ಪಿಕೊಳ್ಳುವುದೇ ಸಹಜತೆ.

6 ನಮ್ಮ ಬೇಕು–ಬೇಡಗಳನ್ನು ಮುಕ್ತವಾಗಿ ಹೇಳಿಕೊಳ್ಳದೆ, ನಮ್ಮ ಮನಸ್ಸಿನಲ್ಲಿರುವುದನ್ನು ಬೇರೆಯವರೇ ಅರಿತು ಅದಕ್ಕೆ ಸ್ಪಂದಿಸಬೇಕೆಂದು ಅಪೇಕ್ಷಿಸುವುದು, ಹಾಗಾಗದಿದ್ದಾಗ ವಿಷಮಯ ನಡೆ–ನುಡಿಯ ಮೂಲಕ ಅಸಹನೆ ತೋರಿಸುವುದು ಸಹಜವಲ್ಲ.

ಎಲ್ಲರ ಜೊತೆ ಬೆರೆತು ಒಂದಾಗುವುದೇ ಸಹಜವಾಗಿರುವುದರ ಶ್ರೇಷ್ಠ ಮಾದರಿ. ನಮ್ಮನ್ನು ಎಲ್ಲರಿಗಿಂತ ಮೇಲ್ಮಟ್ಟದಲ್ಲಿಟ್ಟುಕೊಳ್ಳುವಷ್ಟು ಶ್ರೇಷ್ಠರೂ ನಾವಲ್ಲ, ಎಲ್ಲರಿಂದ ದೂರವುಳಿದು ಬಿಡುವಷ್ಟು ದೂಷಿತರೂ ಅಲ್ಲ ಎನ್ನುವುದನ್ನು ಅರ್ಥಮಾಡಿಕೊಂಡಾಗ ಸಹಜದ ಸೂತ್ರವೊಂದು ಕೈಗೆಟಕುತ್ತದೆ.

ಅಪಘಾತ: 10 ಮಂದಿ ಸಾವು

ಒಂದನೇ ಪುಟದಿಂದ

‘ಕೊಳ್ಳೇಗಾಲದ ಕಡೆಯಿಂದ ಬರುತ್ತಿದ್ದ ಕಾರು, ತಿ.ನರಸೀಪುರದಿಂದ ಹೋಗುತ್ತಿದ್ದ ಬಸ್‌ಗೆ ಡಿಕ್ಕಿಯಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ. ಸಂಗನಕಲ್ಲು ಗ್ರಾಮದ 3 ಕುಟುಂಬಗಳು ಮೇ 27ರಂದು ಮೈಸೂರಿಗೆ ಪ್ರವಾಸಕ್ಕೆ ತೆರಳಿದ್ದವು. ಕಾರು ಸಂಪೂರ್ಣ ನಜ್ಜುಗುಜ್ಜಾಗಿದ್ದು, ಮೃತದೇಹಗಳು ಛಿದ್ರಗೊಂಡಿವೆ. ಬಸ್‌ನ ಮುಂಭಾಗವೂ ಜಖಂಗೊಂಡಿದೆ. ಅದರಲ್ಲಿದ್ದ ಕೆಲವರು ಗಾಯಗೊಂಡಿದ್ದು, ಚಿಕಿತ್ಸೆ ಪಡೆದಿದ್ದಾರೆ.

‘ಕಾರಿನ ಚಾಲಕ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದವರು. ಗಾಯಗೊಂಡಿರುವ ಶಶಿಕುಮಾರ್ (24), ಪುನೀತ್ (4), ಜನಾರ್ದನ್ (45) ಬಾನು (17), ಗೌರವ್(6) ಅವರನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು ನಗರದ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಎಸ್ಪಿ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಡಿಕ್ಕಿಯಾದ ರಭಸಕ್ಕೆ ಕಾರ್‌ನಲ್ಲಿ ಸಿಲುಕಿಕೊಂಡಿದ್ದ ಮೃತದೇಹಗಳನ್ನು ಹೊರತೆಗೆಯಲು ಅಗ್ನಿಶಾಮಕ ಸಿಬ್ಬಂದಿ ಪೊಲೀಸರು ಹರಸಾಹಸಪಟ್ಟರು. ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅಪಘಾತದ ಸ್ಥಳಕ್ಕೆ ಹಾಗೂ ಕೆ.ಆರ್.ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆದರು.

ಶವಗಳನ್ನು ಮೈಸೂರು ವೈದ್ಯಕೀಯ ಕಾಲೇಜಿನ ಶವಾಗಾರದಲ್ಲಿ ಇಡಲಾಗಿದ್ದು, ಮಂಗಳವಾರ ಮರಣೋತ್ತರ ಪರೀಕ್ಷೆ ಬಳಿಕ ಕುಟುಂಬದವರಿಗೆ ಹಸ್ತಾಂತರಿಸಲಾಗುತ್ತದೆ ಎಂದು ತಿಳಿದುಬಂದಿದೆ.

ಗ್ರಾಮಸ್ಥರು, ಸಾರ್ವಜನಿಕರ ಆಕ್ರೋಶ

‘ರಾಷ್ಟ್ರೀಯ ಹೆದ್ದಾರಿಯ ಹಲವೆಡೆ ತಿರುವುಗಳಲ್ಲಿ ಹಾಗೂ ಬದಿಯಲ್ಲಿ ಗಿಡಗಂಟಿಗಳು ಬೆಳೆದಿದ್ದು, ತೆರವುಗೊಳಿಸದೇ ಇರುವುದರಿಂದಲೇ ಅಪಘಾತಗಳು ಸಂಭವಿಸುತ್ತಿವೆ. ಸೂಚನಾ ಫಲಕಗಳನ್ನೂ ಅಳವಡಿಸಿಲ್ಲ’ ಎಂದು ರೈತ ಮುಖಂಡರಾದ ಕುರುಬೂರು ಶಾಂತಕುಮಾರ್, ಸಿದ್ದೇಶ್, ವೀರೇಶ್ ಹಾಗೂ ಶಿವಪ್ರಸಾದ್ ಆರೋಪಿಸಿದರು.

ಬಲಗಡೆ ಚಲಿಸಿದ ಕಾರು

ಕಾರು ರಸ್ತೆಯ ಬಲಗಡೆಗೆ ಬಂದು ಬಸ್‌ಗೆ ಡಿಕ್ಕಿಯಾದ ದೃಶ್ಯವಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಬಸ್‌ನಲ್ಲಿ ಹಾಕಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ದೃಶ್ಯ ಸೆರೆಯಾಗಿದೆ. ಕಾರು ಚಾಲಕನ ಅಜಾಗರೂಕತೆಯಿಂದ ಅಪಘಾತ ಸಂಭವಿಸಿದೆ ಎಂದು ಹೇಳಲಾಗುತ್ತಿದೆ.

ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರಿಗೆ ತಲಾ ₹ 50ಸಾವಿರ ನೆರವು ನೀಡಲಾಗುವುದು

ಡಾ.ಎಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

ತಲಾ ₹ 2 ಲಕ್ಷ ಪರಿಹಾರ

ಘಟನೆಗೆ ಸಂಕಟ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೃತರಾದವರ ಕುಟುಂಬದವರಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತಲಾ ₹ 2 ಲಕ್ಷ ಪರಿಹಾರ ಘೋಷಿಸಿದ್ದಾರೆ. ಗಾಯಗೊಂಡವರಿಗೆ ಸೂಕ್ತ ಚಿಕಿತ್ಸೆ ದೊರೆಯುವಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದಲೂ ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ₹ 50ಸಾವಿರ ಪರಿಹಾರ ನೀಡಲಾಗುವುದು ಪ್ರಧಾನಿ ನರೇಂದ್ರ ಮೋದಿ ಕಾರ್ಯಾಲಯ ತಿಳಿಸಿದೆ.

ಟಿಪ್ಪು ಗನ್ ರಫ್ತಿಗೆ ನಿಷೇಧ

ಒಂದನೇ ಪುಟದಿಂದ

‘ಆಕರ್ಷಕವಾಗಿರುವ ಈ ಶಸ್ತ್ರ ತನ್ನ ಪ್ರಾಚೀನತೆಯ ಕಾರಣದಿಂದಲೇ ಹೆಚ್ಚು ಮಹತ್ವದ್ದಾಗಿದೆ. ಬ್ರಿಟನ್ ಮತ್ತು ಭಾರತದ ನಡುವಿನ ಇತಿಹಾಸವನ್ನು ಅರಿಯಲು ಮುಖ್ಯವಾದ ಸಂಪರ್ಕ ಕೊಂಡಿಯಾಗಿದೆ’ ಎಂದು ಸಚಿವ ಲಾರ್ಡ್ ಪಾರ್ಕಿನ್‌ಸನ್ ಅವರು ಅಭಿಪ್ರಾಯಪಟ್ಟರು.

‘ಉಭಯ ರಾಷ್ಟ್ರಗಳು ಹೋರಾಟ ಕಾಲದ ಚಿತ್ರಣ, ಇತಿಹಾಸವನ್ನು ಆಳವಾಗಿ ಅರಿತುಕೊಳ್ಳಲು ಈ ಶಸ್ತ್ರವನ್ನು ಸಾಧ್ಯವಾದಷ್ಟು ಸಾರ್ವಜನಿಕರ ವೀಕ್ಷಣೆಗೆ ಮುಕ್ತಗೊಳಿಸಬೇಕು’ ಎಂದರು. ಮೈಸೂರಿನ ಹುಲಿ ಎಂದೇ ಹೆಸರಾಗಿದ್ದ ಟಿಪ್ಪು ಸುಲ್ತಾನ್, ಬ್ರಿಟಿಷ್‌ನ ಈಸ್ಟ್ ಇಂಡಿಯಾ ಕಂಪನಿಯ ಬದ್ಧ ವಿರೋಧಿಯಾಗಿದ್ದರು. ಮೈಸೂರು ಪ್ರಾಂತ್ಯದ ಶ್ರೀರಂಗಪಟ್ಟಣ ಹಾಗೂ ಆಸುಪಾಸಿನ ಪ್ರದೇಶಗಳ ಅತಿಕ್ರಮಣ ವಿರುದ್ಧ ನಡೆದ ಹೋರಾಟದಲ್ಲಿ ಅವರು 1799ರ ಮೇ 4ರಂದು ಹತರಾಗಿದ್ದರು.

ಟಿಪ್ಪುವಿನ ಖಡ್ಗವು ಇತ್ತೀಚೆಗೆ ಲಂಡನ್‌ನಲ್ಲಿ ದಾಖಲೆಯ ₹ 143 ಕೋಟಿಗೆ ಹರಾಜು ಆಗಿತ್ತು.

ದೆಹಲಿ: 20 ಬಾರಿ ಇರಿದು, ಕಲ್ಲು ಎತ್ತಿ ಹಾಕಿದ ಆರೋಪಿ

ಬಾಲಕಿಯ ಬರ್ಬರ ಕೊಲೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯ ಜನನಿಬಿಡ ಶಹಬಾದ್ ಡೈರಿ ಪ್ರದೇಶದಲ್ಲಿ ಭಾನುವಾರ ರಾತ್ರಿ 16 ವರ್ಷದ ಬಾಲಕಿಗೆ ಸುಮಾರು 20 ಬಾರಿ ಚಾಕುವಿನಿಂದ ಇರಿಯಲಾಗಿದ್ದು, ಬಳಿಕ ಕಲ್ಲು ಎತ್ತಿ ಹಾಕಿ ಬರ್ಬರವಾಗಿ ಕೊಲೆ ಮಾಡಲಾಗಿದೆ.

ಜನದಟ್ಟಣೆ ನಡುವೆಯೇ ಕೃತ್ಯ ನಡೆದಿದೆ. ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹೆಚ್ಚು ಹಂಚಿಕೆಯಾಗಿದೆ. 20 ವರ್ಷದ ಸಾಹಿಲ್ ಆರೋಪಿ. ಈತನನ್ನು ಉತ್ತರ ಪ್ರದೇಶದ ಬುಲಂದ್ ಶಹರ್‌ನಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೃತ್ಯಕ್ಕೆ ಕಾರಣ ಗೊತ್ತಾಗಿಲ್ಲ. ಆರೋಪಿ ಫ್ರಿಡ್ಜ್ ಮತ್ತು ಹವಾನಿಯಂತ್ರಕ ಪರಿಕರಗಳ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದ. ಬಾಲಕಿ ಜೆ.ಜೆ.ಕಾಲೊನಿಯ ನಿವಾಸಿ. ಆಕೆಯ ಶವ ರಸ್ತೆಯಲ್ಲಿಯೇ ಬಹಳ ಹೊತ್ತು ಅನಾಥವಾಗಿ ಬಿದ್ದಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಆರೋಪಿಯು ಚಾಕುವಿನಿಂದ ಬಾಲಕಿಯನ್ನು ಇರಿಯುತ್ತಿದ್ದುದನ್ನು ಜನರು ನಿಂತು ನೋಡುತ್ತಿದ್ದು, ಯಾರೊಬ್ಬರು ಅದನ್ನು ತಡೆಯುವ ಯತ್ನ ಮಾಡಿಲ್ಲ. ಕೃತ್ಯದ ಹಿಂದೆಯೇ ಸಾಹಿಲ್ ಸ್ಥಳದಿಂದ ಪರಾರಿಯಾಗುವುದು ವಿಡಿಯೊದಲ್ಲಿ ದಾಖಲಾಗಿದೆ.

‘ಇಬ್ಬರು ಪರಿಚಿತರಾಗಿದ್ದು, ಇತ್ತೀಚೆಗೆ ಜಗಳ ಆಡಿಕೊಂಡಿದ್ದರು. ಜನ್ಮದಿನದ ಕಾರ್ಯಕ್ರಮವೊಂದಕ್ಕೆ ಬಾಲಕಿ ತೆರಳುವಾಗ ಅಡ್ಡಗಟ್ಟಿದ ಆರೋಪಿ ಮನಸೋಇಚ್ಛೆ ಇರಿದಿದ್ದು, ಬಳಿಕ ಕಲ್ಲು ಎತ್ತಿ ಹಾಕಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಇದು, ತುಂಬ ನೋವು ಉಂಟುಮಾಡುವ ಕೃತ್ಯ. ಇನ್ನೂ ಶ್ರದ್ಧಾ ವಾಲ್ಕರ್‌ಗೆ ನ್ಯಾಯ ಸಿಕ್ಕಿಲ್ಲ. ಇನ್ನು ಎಷ್ಟು ಜನ ಶ್ರದ್ಧಾಗಳು ಹೀಗೆ ಕ್ರೂರವಾಗಿ ಬಲಿಪಶುಗಳಾಗಬೇಕೊ ತಿಳಿಯುತ್ತಿಲ್ಲ’ ಎಂದು ಬಿಜೆಪಿ ನಾಯಕ ಕಪಿಲ್ ಮಿಶ್ರಾ ಅವರು ಪ್ರತಿಕ್ರಿಯಿಸಿದ್ದಾರೆ.

‘ರಾಜಧಾನಿಯಲ್ಲಿ ಜನರ ರಕ್ಷಣೆ ಮಾಡುವ ಹೊಣೆಯನ್ನು ಸಂವಿಧಾನ ಲೆಫ್ಟಿನೆಂಟ್ ಗವರ್ನರ್ ಅವರಿಗೆ ನೀಡಿದೆ. ಅವರು ಕೇಜ್ರಿವಾಲ್ ಅವರ ಕೆಲಸಗಳಿಗೆ ತಡೆಯೊಡ್ಡುತ್ತಾ ಕಾಲಹರಣ ಮಾಡುತ್ತಿದ್ದಾರೆ’ ಎಂದು ಎಎಪಿ ಹಿರಿಯ ನಾಯಕಿ ಅತಿಷಿ ಟೀಕಿಸಿದ್ದಾರೆ.

ದೆಹಲಿಯಲ್ಲಿ ಕಾನೂನು ಸುವ್ಯವಸ್ಥೆಯ ಉಸ್ತುವಾರಿಯು ಲೆಫ್ಟಿನೆಂಟ್ ಗವರ್ನರ್ ಅವರ ಸುಪರ್ದಿಯಲ್ಲಿದೆ. ಅವರು ಪರಿಸ್ಥಿತಿ ಸುಧಾರಿಸಲು ‘ಏನಾದರೂ ಮಾಡಬೇಕು’

ಅರವಿಂದ್ ಕೇಜ್ರಿವಾಲ್, ಮುಖ್ಯಮಂತ್ರಿ

ರಾಜಧಾನಿಯಲ್ಲಿ ಕಾನೂನು ಸುವ್ಯವಸ್ಥೆ, ಪೊಲೀಸರ ಕುರಿತು ಭೀತಿಯೇ ಇಲ್ಲವಾಗಿದೆ. ಈ ಪ್ರಕರಣದಲ್ಲಿ ಕ್ರಮ ಕೈಗೊಳ್ಳದಿದ್ದರೆ ಕ್ರೂರತೆಗೆ ಮಿತಿಯೇ ಇಲ್ಲವಾದಂತಾಗಲಿದೆ

ಸ್ವಾತಿ ಮಲಿವಾಲ್, ಅಧ್ಯಕ್ಷೆ, ದೆಹಲಿ ಮಹಿಳಾ ಆಯೋಗ

ಪ್ರವೀಣ್ ಕುಮಾರ್ ಸಿವಿಸಿ ನೂತನ ಆಯುಕ್ತ

ನವದೆಹಲಿ (ಪಿಟಿಐ): ಕೇಂದ್ರ ಜಾಗೃತ ಆಯೋಗದ (ಸಿವಿಸಿ) ನೂತನ ಆಯುಕ್ತರಾಗಿ ಪ್ರವೀಣ್ ಕುಮಾರ್ ಶ್ರೀವಾಸ್ತವ ಸೋಮವಾರ ಅಧಿಕಾರ ವಹಿಸಿಕೊಂಡಿದ್ದಾರೆ.

ರಾಷ್ಟ್ರಪತಿ ಭವನದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ನೂತನ ಆಯುಕ್ತರಿಗೆ ಪ್ರಮಾಣ ವಚನ ಬೋಧಿಸಿದರು. ಈ ವೇಳೆ ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಪ್ರವೀಣ್ ಕುಮಾರ್

ಶ್ರೀವಾಸ್ತವ ಅವರು ಕಳೆದ ವರ್ಷದ ಡಿಸೆಂಬರ್‌ನಿಂದ ಪ್ರಭಾರ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು 1988ನೇ ಬ್ಯಾಚ್‌ನ ಅಸ್ಸಾಂ–ಮೇಘಾಲಯ ಕೆಡರ್‌ನ ನಿವೃತ್ತ ಐಎಎಸ್ ಅಧಿಕಾರಿಯಾಗಿದ್ದಾರೆ. ಕೇಂದ್ರ ಸಂಪುಟ ಸಚಿವಾಲಯದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ಕಳೆದ ವರ್ಷದ ಜನವರಿಯಲ್ಲಿ ಅವರು ನಿವೃತ್ತರಾಗಿದ್ದರು.

‘ಗ್ಯಾರಂಟಿ’: ಬೇಕು ₹52 ಸಾವಿರ ಕೋಟಿ

ಒಂದನೇ ಪುಟದಿಂದ

‘ಗೃಹ ಲಕ್ಷ್ಮಿ’, ‘ಗೃಹ ಜ್ಯೋತಿ’, ‘ಯುವನಿಧಿ’, ‘ಅನ್ನಭಾಗ್ಯ’ ಮತ್ತು ‘ಶಕ್ತಿ’ ಯೋಜನೆಗಳ ಅನುಷ್ಠಾನದ ಕುರಿತು ಮುಖ್ಯಮಂತ್ರಿಯವರು ಅಧಿಕಾರಿಗಳ ಜತೆ ಚರ್ಚೆ ನಡೆಸಿದರು. ಐದೂ ಇಲಾಖೆಗಳ ಅಧಿಕಾರಿಗಳು ಆಯಾ ಯೋಜನೆಗಳ ಅನುಷ್ಠಾನಕ್ಕೆ ತಗಲುವ ವೆಚ್ಚದ ಕುರಿತು ಪ್ರಾಥಮಿಕ ಅಂದಾಜನ್ನು ಸಭೆಯಲ್ಲಿ ಮಂಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಪಡಿತರ ಚೀಟಿ ಹೊಂದಿರುವ ಕುಟುಂಬಗಳಿಗೆ ಸೀಮಿತವಾಗಿ ‘ಗ್ಯಾರಂಟಿ’ ಸೌಲಭ್ಯಗಳನ್ನು ನೀಡಿದರೆ ಅಂದಾಜು ₹52,000 ಕೋಟಿ ಬೇಕಾಗುತ್ತದೆ. ಬಿಪಿಎಲ್ ಕುಟುಂಬಗಳ ಆಚೆಗೂ ಸೌಲಭ್ಯ ವಿಸ್ತರಿಸಿದರೆ ಹೆಚ್ಚಿನ ವೆಚ್ಚ ಆಗುತ್ತದೆ ಎಂಬುದನ್ನು ಅಧಿಕಾರಿಗಳು ಸಿದ್ದರಾಮಯ್ಯ ಅವರಿಗೆ ತಿಳಿಸಿದ್ದಾರೆ’ ಎಂದು ಗೊತ್ತಾಗಿದೆ.

‘ಜೂನ್ 1ರಂದು ಗ್ಯಾರಂಟಿ ಚರ್ಚೆ’: ‘ನಾವು ಕೊಟ್ಟ ಮಾತಿನಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುತ್ತೇವೆ. ಮುಖ್ಯಮಂತ್ರಿಯವರು ಹಣಕಾಸು ಸಚಿವಾಲಯದ ಜವಾಬ್ದಾರಿ ಹೊತ್ತಿದ್ದಾರೆ. ಅವರು ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಜೂನ್ 1ರಂದು ಸಚಿವ ಸಂಪುಟ ಸಭೆ ಕರೆಯಲಾಗಿದೆ. ಈ ಸಭೆಯಲ್ಲಿ ಯೋಜನೆಗಳ ಬಗ್ಗೆ ಚರ್ಚೆ ಮಾಡುತ್ತೇವೆ. ನಮ್ಮದು ಜವಾಬ್ದಾರಿಯುತ ಸರ್ಕಾರ, ನಾವು ಈ ಯೋಜನೆಗಳನ್ನು ಕ್ರಮಬದ್ಧವಾಗಿ ಜಾರಿ ಮಾಡುತ್ತೇವೆ. ಯುವಕರು, ಮಹಿಳೆಯರಿಗೆ ಕೊಟ್ಟಿರುವ ಮಾತು ಉಳಿಸಿಕೊಳ್ಳುತ್ತೇವೆ' ಎಂದು ಅವರು ಹೇಳಿದರು.

ಸಚಿವರೊಂದಿಗೆ ಇಂದು ಸಭೆ

ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಬಂಧಿಸಿದ ಐದೂ ಇಲಾಖೆಗಳ ಸಚಿವರು ಮತ್ತು ಅಧಿಕಾರಿಗಳ ಜತೆ ಮಂಗಳವಾರ ಉನ್ನತಮಟ್ಟದ ಸಭೆ ನಡೆಸಲಿದ್ದಾರೆ.

ಉಚಿತ ಯೋಜನೆಗಳಿಗೆ ಸಂಬಂಧಿಸಿದಂತೆ ಇನ್ನಷ್ಟು ವಿಸ್ತೃತ ಮಾಹಿತಿಯೊಂದಿಗೆ ಸಭೆಗೆ ಬರುವಂತೆ ಈ ಎಲ್ಲ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ಗ್ಯಾರಂಟಿಗಳನ್ನು ಘೋಷಿಸಿದ್ದ ಕಾಂಗ್ರೆಸ್, ಎಲ್ಲರಿಗೂ ಸೌಲಭ್ಯ ನೀಡುವುದಾಗಿ ಹೇಳಿತ್ತು. ಈಗ ಒಬ್ಬೊಬ್ಬರು ಒಂದೊಂದು ರೀತಿ ಹೇಳಿಕೆ ನೀಡಿ ವಂಚಿಸಲು ಹೊರಟಿದ್ದಾರೆ

ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ

ಕಾಂಗ್ರೆಸ್ ನೀಡಿರುವ ‘ಗ್ಯಾರಂಟಿ’ಗಳನ್ನು ಎಲ್ಲರಿಗೂ ಕೊಟ್ಟುಬಿಡಿ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳುತ್ತಿದ್ದಾರೆ. ಅವರಾಗಿದ್ದರೆ ಹಾಗೆಯೆ ಕೊಡುತ್ತಿದ್ದರೆ?

ಡಾ.ಜಿ.ಪರಮೇಶ್ವರ, ಗೃಹ ಸಚಿವ

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರ ಉಚಿತ ಪ್ರಯಾಣ ಯೋಜನೆ ಕುರಿತು ಎರಡು ದಿನಗಳಲ್ಲಿ ಅಂತಿಮ ರೂಪುರೇಷೆ ಸಿದ್ಧವಾಗಲಿದೆ

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

‘ದೋಷ’ ತಿದ್ದುವ ಇರಾದೆ

ಒಂದನೇ ಪುಟದಿಂದ

ಈ ಹಂತದಲ್ಲಿ ಮತ್ತೆ ಪಠ್ಯ ಪರಿಷ್ಕರಣೆ ನಡೆಯಲಿದೆಯೇ ಎಂಬ ಚರ್ಚೆ ಬಿರುಸುಗೊಂಡಿದೆ.

‘ಪರಿಷ್ಕೃತ ಪಠ್ಯಪುಸ್ತಕಗಳು ಈಗಾಗಲೇ ಮುದ್ರಣಗೊಂಡು ಶಾಲೆಗಳನ್ನು ತಲುಪಿರುವುದರಿಂದ ಈ ಹಂತದಲ್ಲಿ ಬದಲಾವಣೆ ಅಥವಾ ಪರಿಷ್ಕರಣೆ ಕಾರ್ಯಸಾಧುವಲ್ಲ. ಕೊಟ್ಟ ಮಾತೂ ಉಳಿಯಬೇಕು. ಯಡವಟ್ಟುಗಳೂ ಸರಿಯಾಗಬೇಕು’ ಎನ್ನುವುದು ಈ ಹಿಂದೆ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯ ಅಧ್ಯಕ್ಷರಾಗಿದ್ದ ಪ್ರೊ.ಬರಗೂರು ರಾಮಚಂದ್ರಪ್ಪ ಅವರ ಅನಿಸಿಕೆ.

'ಪಠ್ಯಪುಸ್ತಕ ಪರಿಷ್ಕರಣೆ ಸುದೀರ್ಘ ಸಮಯ ತೆಗೆದುಕೊಳ್ಳುವ ಪ್ರಕ್ರಿಯೆ. ಮರುಮುದ್ರಣವೂ ವೆಚ್ಚದಾಯಕ. ಶೈಕ್ಷಣಿಕ ವರ್ಷ ಆರಂಭವಾಗಿರುವುದರಿಂದ ಈಗ ಅಂತಹ ಸಾಹಸ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು. ಸದ್ಯಕ್ಕೆ ಪಠ್ಯಪುಸ್ತಕದಲ್ಲಿರುವ ಸಾಮಾಜಿಕ, ಪ್ರಾದೇಶಿಕ ಅಸಮಾನತೆಗೆ ಕಾರಣವಾದ ಕೆಲ ಪಾಠಗಳನ್ನು ಕೈಬಿಟ್ಟು, ಪೂರಕವಾದ ಕೆಲ ಪಾಠಗಳನ್ನು ಸೇರಿಸಿಕೊಂಡು ಪಾಠ ಮಾಡಲು ಸುತ್ತೋಲೆ ಹೊರಡಿಸಬೇಕು. ಮಹಾರಾಷ್ಟ್ರದಲ್ಲಿರುವಂತೆ ವಿಷಯ ತಜ್ಞರು, ಅಧಿಕಾರಿಗಳನ್ನು ಒಳಗೊಂಡ ಶಾಶ್ವತವಾದ ಪಠ್ಯಪುಸ್ತಕ ಆಯೋಗ ಅಥವಾ ಪ್ರಾಧಿಕಾರ ರಚಿಸಬೇಕು. ಭವಿಷ್ಯದಲ್ಲಿ ಪಠ್ಯಪುಸ್ತಕಗಳು ಯಾವುದೇ ಪಕ್ಷದ ಪುಸ್ತಕಗಳಾಗದಂತೆ ಕಾನೂನು ರೂಪಿಸಬೇಕು‘ ಎನ್ನುತ್ತಾರೆ ಬರಗೂರು.

ಕಾಂಗ್ರೆಸ್ ಪ್ರಣಾಳಿಕೆ ಹೇಳಿದ್ದೇನು?

‘ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಪಠ್ಯಪುಸ್ತಕದ ವಿಷಯಗಳನ್ನು ವಿಕೃತಗೊಳಿಸಿತ್ತು. ಅದನ್ನು ಸರಿಪಡಿಸಿ ಕುವೆಂಪು, ಬಸವಣ್ಣ, ಆದಿಕವಿ ಪಂಪ ಹಾಗೂ ವೈಜ್ಞಾನಿಕ ಮನೋಭಾವವನ್ನು ಮರಳಿ ಪಠ್ಯಪುಸ್ತಕಗಳಲ್ಲಿ ಸೇರಿಸಲು ಕ್ರಮ ಕೈಗೊಳ್ಳಲಾಗುವುದು. ಅವೈಜ್ಞಾನಿಕ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರದ್ದು ಮಾಡಿ ಕರ್ನಾಟಕ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಲಾಗುವುದು.

ಮಧ್ಯಪ್ರದೇಶ: ಭಾರಿ ಬಿರುಗಾಳಿಗೆ ಉರುಳಿದ ಋಷಿಗಳ ಮೂರ್ತಿಗಳು

ಉಜ್ಜಯಿನಿ, ಮಧ್ಯಪ್ರದೇಶ (ಪಿಟಿಐ): ಇಲ್ಲಿನ ಮಹಾಕಾಳ್ ಲೋಕ್ ಕಾರಿಡಾರ್ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿದ್ದ ಸಪ್ತಋಷಿಗಳ ಮೂರ್ತಿಗಳಲ್ಲಿ ಆರು ಮೂರ್ತಿಗಳು ಭಾನುವಾರ ಸಂಜೆ ಬೀಸಿದ ಭಾರಿ ಬಿರುಗಾಳಿಗೆ ಉರುಳಿದ್ದು, ಜಖಂಗೊಂಡಿವೆ.

ಬಿರುಗಾಳಿಗೆ ಮೂರ್ತಿಗಳು ಉರುಳಿದ ಸಂದರ್ಭದಲ್ಲಿ ಸಾಕಷ್ಟು ಪ್ರವಾಸಿಗರಿದ್ದರು. ಆದರೆ, ಯಾರಿಗೂ ಪೆಟ್ಟಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆ ಹಿನ್ನೆಲೆಯಲ್ಲಿ ಸ್ಥಳಕ್ಕೆ ಕೆಲಹೊತ್ತು ಕಾರಿಡಾರ್‌ಗೆ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು.

ಕಳೆದ ಅಕ್ಟೋಬರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮಹಾಕಾಳ್ ಲೋಕ ಕಾರಿಡಾರ್‌ನ ಮೊದಲ ಹಂತದ ಕಾಮಗಾರಿ ಉದ್ಘಾಟಿಸಿದ್ದರು. ಈ ಯೋಜನೆಯ ಒಟ್ಟು ಅಂದಾಜು ವೆಚ್ಚ ₹ 856 ಕೋಟಿ ಆಗಿದ್ದು, ಮೊದಲ ಹಂತದ ಕಾಮಗಾರಿಗೆ ₹ 351 ಕೋಟಿ ವೆಚ್ಚವಾಗಿತ್ತು.

ಮಧ್ಯಪ್ರದೇಶ ಉಜ್ಜಯಿನಿಯಲ್ಲಿ ಬಿರುಗಾಳಿಗೆ ಉರುಳಿರುವ ಮೂರ್ತಿಗಳು

ಬಿರುಗಾಳಿಗೆ ಮೂರ್ತಿಗಳು ಉರುಳಿ ಜಖಂಗೊಂಡ ಘಟನೆಯನ್ನು ವಿರೋಧಪಕ್ಷ ಕಾಂಗ್ರೆಸ್, ಆಡಳಿತರೂಢ ಬಿಜೆಪಿ ಮೇಲೆ ವಾಗ್ದಾಳಿ ನಡೆಸಲು ಅಸ್ತ್ರವಾಗಿ ಬಳಸಿಕೊಂಡಿದೆ. ‘ಕಳಪೆ ಗುಣಮಟ್ಟದ ಕಾಮಗಾರಿ ನಡೆದಿದೆ’ ಎಂದು ಕಾಂಗ್ರೆಸ್ ಪಕ್ಷ ಆರೋಪಿಸಿದ್ದು, ಸಮಗ್ರ ತನಿಖೆಗೆ ಆಗ್ರಹಪಡಿಸಿದೆ.

ಕಾರಿಡಾರ್‌ನಲ್ಲಿ ಒಟ್ಟಾರೆ 160 ಮೂರ್ತಿಗಳನ್ನು ಸ್ಥಾಪಿಸಲಾಗಿದೆ. ಇವುಗಳಲ್ಲಿ ಸಪ್ತಋಷಿಗಳ ಮೂರ್ತಿಗಳು ಸುಮಾರು 10 ಅಡಿ ಎತ್ತರವಿದ್ದವು. ಆರು ಮೂರ್ತಿಗಳು ಬಿರುಗಾಳಿಗೆ ಉರುಳಿವೆ ಎಂದು ಜಿಲ್ಲಾಧಿಕಾರಿ ಕುಮಾರ್ ಪುರುಷೋತ್ತಮ ತಿಳಿಸಿದರು.

ಕಾರಿಡಾರ್ ಒಂದು ಕಿ.ಮೀ ಉದ್ದವಿದೆ. ಈಗ ಜಖಂಗೊಂಡಿರುವ ಮೂರ್ತಿಗಳನ್ನು ಮಹಾಕಾಳೇಶ್ವರ ದೇಗುಲದ ಆವರಣದಲ್ಲಿ ಸ್ಥಾಪಿಸಿರಲಿಲ್ಲ ಎಂದು ವಿವರಿಸಿದರು.

ಮೂರ್ತಿಗಳ ಮರು ಸ್ಥಾಪನೆಗೆ ಸರ್ಕಾರ ಕ್ರಮವಹಿಸಬೇಕು. ಕಳಪೆ ಗುಣಮಟ್ಟದ ಕಾಮಗಾರಿ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸಬೇಕು

ಕಮಲ್ ನಾಥ್, ಮಧ್ಯಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ



ಸುಭಾಷಿತ

ಜಾತಿಯನ್ನು ಕೇಳಬೇಡಿ, ಹೇಳಬೇಡಿ ಮತ್ತು ಅದರ ಬಗ್ಗೆ ಚಿಂತಿಸಲೂಬೇಡಿ.

–ನಾರಾಯಣ ಗುರು

ಸಮತೋಲನದ ಸಂಪುಟ ನೀಗಿಸಬೇಕಿದೆ ಜನರ ಸಂಕಟ

ಫಲಿತಾಂಶ ಪ್ರಕಟವಾದ ಹದಿನೈದು ದಿನದೊಳಗೆ ಸಿದ್ದರಾಮಯ್ಯ ನೇತೃತ್ವದಲ್ಲಿ ಪೂರ್ಣ ಪ್ರಮಾಣದ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂದಿದೆ. ಕಳೆದ ಐದು ವರ್ಷಗಳಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ಹಾಗೂ ಆ ಬಳಿಕ 'ಆಪರೇಷನ್ ಕಮಲ'ದ ಮೂಲಕ ರೂಪುಗೊಂಡ ಬಿಜೆಪಿ ನೇತೃತ್ವದ ಸರ್ಕಾರದ ಆಡಳಿತವನ್ನು ಜನ ನೋಡಿದ್ದಾರೆ. ಯಾವುದೇ ಪಕ್ಷಕ್ಕೆ ಬಹುಮತ ದೊರಕದ ಅತಂತ್ರ ಸ್ಥಿತಿ ತಲೆದೋರಿದರೆ ಆಗಬಹುದಾದ ಪರಿಣಾಮಗಳನ್ನು ಕಂಡ ಮತದಾರರು, ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ನೀಡಿದ್ದಾರೆ. ಮೈತ್ರಿ ಸರ್ಕಾರ ಮತ್ತು 'ಡಬಲ್ ಎಂಜಿನ್' ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿಯಾದವರಿಗೆ ದಿಟ್ಟ ನಿರ್ಣಯಗಳನ್ನು ಕೈಗೊಳ್ಳುವ ಅವಕಾಶ ದೊರೆಯಲಿಲ್ಲ ಎಂಬ ಮಾತಿದೆ. ಆಗಿನ ಅವಧಿಯಲ್ಲಿ ಕುಳಿತ ಮುಖ್ಯಮಂತ್ರಿ, ಉತ್ಸವಮೂರ್ತಿ ಪಾತ್ರ ನಿರ್ವಹಿಸಿದ್ದೇ ಹೆಚ್ಚು. ಅದರಿಂದಾಗಿ ಆಡಳಿತ ಸಡಿಲಗೊಂಡು, ಜನಕಲ್ಯಾಣಕ್ಕೆ ಆದ್ಯತೆಯೇ ಇಲ್ಲದಾಗಿತ್ತು. ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಬೇಡದ ಉಸಾಬರಿಗಳು, ವಿವಾದಗಳೇ ವಿಜೃಂಭಿಸಿದವು. ಬಿಜೆಪಿಗೆ ಅದೇ ಮುಳುವಾದಂತಿದೆ. ಇಂತಹ ಉಪದ್ವ್ಯಾಪಗಳಿಗೆ ಅವಕಾಶ ಇಲ್ಲದಂತೆ, ಯಾರನ್ನೂ ನೆಚ್ಚಿಕೊಳ್ಳದೆ ನಿರಾತಂಕವಾಗಿ ಆಡಳಿತ ನಡೆಸಿ ಎಂಬ ಆದೇಶವನ್ನು ಕಾಂಗ್ರೆಸ್‌ಗೆ ಜನ ನೀಡಿದ್ದಾರೆ. ಯಾರನ್ನೋ ಓಲೈಸಲು ಹಿಂದೆಲ್ಲ ಎರಡು–ಮೂರು ಸಚಿವ ಸ್ಥಾನಗಳನ್ನು ಖಾಲಿ ಉಳಿಸಿಕೊಳ್ಳಲಾಗುತ್ತಿತ್ತು. ಬಹಳ ವರ್ಷಗಳ ನಂತರ ಸಂಪುಟದ ಅಷ್ಟೂ ಸ್ಥಾನಗಳನ್ನು ಭರ್ತಿ ಮಾಡಲಾಗಿದೆ. ಕೆಲವು ಜಿಲ್ಲೆಗಳಿಗೆ ಪ್ರಾತಿನಿಧ್ಯ ಸಿಗದೇ ಹೋದರೂ ಕರ್ನಾಟಕದ ಸಮುದಾಯವಾರು ಜನಸಂಖ್ಯೆ ಹಾಗೂ ಗೆದ್ದ ಶಾಸಕರ ಜಾತಿ ಲೆಕ್ಕಾಚಾರವನ್ನು ಆಧರಿಸಿ ನೋಡಿದರೆ, ಒಂದು ಮಟ್ಟಿಗೆ ಸಮತೋಲನದ ಸಂಪುಟ ಅಸ್ತಿತ್ವಕ್ಕೆ ಬಂದಿದೆ. ಇತ್ತೀಚಿನ ವರ್ಷಗಳಲ್ಲಿ ಸಂಪುಟದಲ್ಲಿ ಲಿಂಗಾಯತರು, ಒಕ್ಕಲಿಗರು ಹಾಗೂ ಬ್ರಾಹ್ಮಣರಿಗೆ ಪ್ರಾತಿನಿಧ್ಯ ಹೆಚ್ಚಿಗೆ ಇರುತ್ತಿತ್ತು. ಈ ಬಾರಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಒಂಬತ್ತು ಸಚಿವ ಸ್ಥಾನಗಳನ್ನು ನೀಡಲಾಗಿದೆ. ಲಿಂಗಾಯತರಿಗೆ ಏಳು, ಒಕ್ಕಲಿಗರಿಗೆ ಐದು ಸ್ಥಾನ ಸಿಕ್ಕಿದೆ. ಕ್ರೈಸ್ತ, ಮುಸ್ಲಿಂ, ಜೈನ ಹೀಗೆ ಎಲ್ಲ ಧರ್ಮದವರಿಗೂ ಪ್ರಾತಿನಿಧ್ಯ ಇರುವ ಸಂಪುಟ ಇದಾಗಿದೆ. ಕೆಲವು ಸಣ್ಣ ಸಮುದಾಯಗಳಿಗೆ ಪ್ರಾತಿನಿಧ್ಯ ಸಿಗಬೇಕಿತ್ತು ಎಂಬುದು ತಾತ್ವಿಕವಾಗಿ ಸರಿ. ಆದರೆ, ಆಡಳಿತ ಪಕ್ಷಕ್ಕೆ 135ರಷ್ಟು ಸದಸ್ಯಬಲ ಇದ್ದಾಗ ಸಂಭಾಳಿಸುವುದು ಕಷ್ಟ. ಇದರ ನಡುವೆಯೂ ಅನುಭವಿಗಳ ಜತೆಗೆ ಹೊಸಬರಿಗೂ ಅವಕಾಶ ಕಲ್ಪಿಸಿರುವುದು ಆಶಾದಾಯಕ. ಅಸಮಾಧಾನ ಕೂಡ ಇದೆ. ಅದರ ಬೇಗೆ ಸರ್ಕಾರ ಮತ್ತು ಆಡಳಿತಾಂಗವನ್ನು ತಾಕಿ, ಅದು ಸಾಮಾನ್ಯ ಜನರನ್ನು ಪರಿತಾಪಕ್ಕೆ ದೂಡದಂತೆ ಎಚ್ಚರಿಕೆ ವಹಿಸಬೇಕಾದ ಹೊಣೆ ಮುಖ್ಯಮಂತ್ರಿ ಮೇಲಿದೆ. ಎಲ್ಲರನ್ನೂ ಸಮಾಧಾನಪಡಿಸುವುದರ ಜತೆಗೆ, ಸಕಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ರಾಜ್ಯವನ್ನು ಪ್ರಗತಿಪಥದತ್ತ ಕೊಂಡೊಯ್ಯುವುದು ಆದ್ಯತೆಯಾಗಲಿ. ಇಲ್ಲದಿದ್ದಲ್ಲಿ, ಅಸಮಾಧಾನವೇ ಪ್ರಧಾನವಾಗಿ, ಜನಹಿತವು ನಗಣ್ಯವಾಗಿಬಿಡುತ್ತದೆ. ಈ ಬಗ್ಗೆ ಸದಾ ಎಚ್ಚರ ವಹಿಸಬೇಕಿರುವುದು ಆಡಳಿತಾರೂಢರ ಕರ್ತವ್ಯ.

ಭ್ರಷ್ಟಾಚಾರದ ಬೇರುಗಳನ್ನು ಕತ್ತರಿಸಿ ಹಾಕುವುದರ ಜತೆಗೆ, ಹಿಂದೆ ಕಾಂಗ್ರೆಸ್ ನಾಯಕರೇ ಮಾಡಿದ್ದ ಆರೋಪಗಳ ಬಗ್ಗೆ ಸಮಗ್ರ ತನಿಖೆಯನ್ನೂ ನಡೆಸಬೇಕಿದೆ

ಜನರ ಬೇಡಿಕೆಗಳನ್ನು ಈಡೇರಿಸುವ, ನಿರೀಕ್ಷೆಗಳನ್ನು ಪೂರೈಸುವ ಹೊಣೆ ನೂತನ ಸಚಿವರ ಹೆಗಲೇರಿದೆ. ಬೆಲೆ ಏರಿಕೆ, ಆಡಳಿತ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರದಿಂದಾಗಿ ಜನ ರೋಸಿಹೋಗಿದ್ದಾರೆ. ಅವೆಲ್ಲವನ್ನೂ ದಿಢೀರನೆ ಸರಿಪಡಿಸಲಾಗದು. ಆದರೆ, ಆ ದಿಸೆಯಲ್ಲಿ ದೃಢವಾದ ಹೆಜ್ಜೆಯನ್ನಿಡಲು ಹಾಗೂ ಅದಕ್ಕೆ ಬೇಕಾದ ನೀಲನಕ್ಷೆ ರೂಪಿಸಿಕೊಳ್ಳಲು ಇದು ಸಕಾಲ. ಹಿಂದಿನ ಸರ್ಕಾರದ ಅವಧಿಯಲ್ಲಿ ಪಠ್ಯಪುಸ್ತಕ ಪರಿಷ್ಕರಣೆಯಿಂದ ಹಿಡಿದು ಹಿಜಾಬ್, ಹಲಾಲ್‌ವರೆಗೆ ವಿವಾದಗಳೇ ಚರ್ಚೆಯ ಕೇಂದ್ರ ಸ್ಥಾನವನ್ನು ಆಕ್ರಮಿಸಿಕೊಂಡಿದ್ದವು. ಜನರ ಬವಣೆಯು ಚರ್ಚೆಯ ವಸ್ತು ಆಗದಂತೆ ನೋಡಿಕೊಳ್ಳಲಾಯಿತು. ಈಗ, ಜನರ ನೆಮ್ಮದಿಗೆ ಭಂಗ ತರುವಂತಹ ಚಟುವಟಿಕೆಗೆ ಆಸ್ಪದವಾಗದಂತೆ ಸರ್ಕಾರ ನೋಡಿಕೊಳ್ಳಬೇಕು. ಪಠ್ಯ ಪರಿಷ್ಕರಣೆ ಹೆಸರಿನಲ್ಲಿ ಆದ ಪ್ರಮಾದಗಳನ್ನು ಸರಿಪಡಿಸುವುದಾಗಿ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿಯೇ ಹೇಳಿದೆ. ಮತ್ತೊಂದು ವಿವಾದಕ್ಕೆ ಆಸ್ಪದವಿಲ್ಲದಂತೆ ಈ ಕೆಲಸವನ್ನು ಸರ್ಕಾರ ವಿವೇಚನೆಯಿಂದ ನಿರ್ವಹಿಸಬೇಕಿದೆ. ಹಾಗೆಯೇ, ಭ್ರಷ್ಟಾಚಾರದ ಬಗ್ಗೆ ದೊಡ್ಡ ಕೂಗೆದ್ದು, ಅದು ಚುನಾವಣೆಯಲ್ಲಿ ಅಸ್ತ್ರವೂ ಆಗಿತ್ತು. ಭ್ರಷ್ಟಾಚಾರದ ಬೇರುಗಳನ್ನು ಕತ್ತರಿಸಿ ಹಾಕುವುದರ ಜತೆಗೆ, ಹಿಂದೆ ಕಾಂಗ್ರೆಸ್ ನಾಯಕರೇ ಮಾಡಿದ್ದ ಆರೋಪಗಳ ಬಗ್ಗೆ ಸಮಗ್ರ ತನಿಖೆಯನ್ನೂ ನಡೆಸಬೇಕಿದೆ. ಹೂಡಿಕೆ, ಅಭಿವೃದ್ಧಿ, ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ, ಐಟಿ–ಬಿಟಿ ಕ್ಷೇತ್ರಗಳಲ್ಲಿ ಕರ್ನಾಟಕ ತನ್ನದೇ ಆದ ಹಿರಿಮೆಯನ್ನು ಹೊಂದಿದೆ. ಅದನ್ನು ಕಾಯ್ದುಕೊಳ್ಳುವ ಗುರುತರ ಹೊಣೆಗಾರಿಕೆ ಈಗಿನ ಸರ್ಕಾರದ ಮೇಲಿದೆ.

ಕೇಂದ್ರ ಸರ್ಕಾರಕ್ಕೆ ವರಮಾನ ಹೆಚ್ಚು, ರಾಜ್ಯಗಳಿಗೆ ಹೊರೆ ಹೆಚ್ಚು

ಸಂಪನ್ಮೂಲ ಮತ್ತು ಒಕ್ಕೂಟ ವ್ಯವಸ್ಥೆ

ವಿಶ್ಲೇಷಣೆ

ಟಿ.ಎಸ್. ವೇಣುಗೋಪಾಲ್

ಕಾಂಗ್ರೆಸ್ ಈಗ ರಾಜ್ಯದ ಚುಕ್ಕಾಣಿ ಹಿಡಿದಿದೆ. ಪಕ್ಷದ 'ಗ್ಯಾರಂಟಿ'ಗಳ ಸುತ್ತ ತೀವ್ರ ಚರ್ಚೆ ನಡೆಯುತ್ತಿದೆ. ಇಂತಹ ಭರವಸೆಗಳು ಹೊಸವೇನಲ್ಲ. ಎಲ್ಲ ಪಕ್ಷಗಳೂ ಬೇರೆ ಬೇರೆ ಬಗೆಯ ಭರವಸೆಗಳನ್ನು ನೀಡುತ್ತಲೇ ಬಂದಿವೆ. ಕೆಲವನ್ನು ಫ್ರೀಬಿ ಅಂತಲೋ ರೇವ್ಡಿ ಅಂತಲೋ ಜರಿಯಲಾಗುತ್ತದೆ, ಮತ್ತೆ ಕೆಲವನ್ನು ಜನಕಲ್ಯಾಣ ಕಾರ್ಯಕ್ರಮಗಳು ಅಂತ ಸಮರ್ಥಿಸಲಾಗುತ್ತದೆ. ಯಾವುದು ಫ್ರೀಬಿ, ಯಾವುದು ಜನಕಲ್ಯಾಣ ಕಾರ್ಯಕ್ರಮ ಅಂತ ನಿರ್ಧರಿಸುವುದು ಹೇಗೆ? ಇಂತಹ ಕಾರ್ಯಕ್ರಮಗಳನ್ನು ರೇವ್ಡಿ ಅಂತ ಕರೆದ ಪ್ರಧಾನ ಮಂತ್ರಿಯವರೇ ಹೆಣ್ಣುಮಕ್ಕಳಿಗೆ ಪುಕ್ಕಟೆ ಸ್ಕೂಟರ್ ವಿತರಿಸುವ ಎಐಎಡಿಎಂಕೆ ಯೋಜನೆಯನ್ನು ಉದ್ಘಾಟಿಸಿ, ಇದು ತಮ್ಮ ಕನಸಿನ ಯೋಜನೆಯೆಂದು ಬಣ್ಣಿಸಿದ್ದರು.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ 'ಶಾಸಕರಿಗೆ ಸಿಗುತ್ತಿರುವ ಪುಕ್ಕಟೆ ವಿದ್ಯುತ್, ವೈದ್ಯಕೀಯ, ಶಿಕ್ಷಣದಂತಹ ಸೌಲಭ್ಯಗಳನ್ನು ನಾನು ಸಾಮಾನ್ಯ ಜನರಿಗೂ ಸಿಗುವಂತೆ ಮಾಡಿದ್ದೇನೆ. ಬಿಲಿಯನೇರುಗಳಿಗೆ ತೆರಿಗೆ ಕಡಿತ, ಸಾಲ ಮನ್ನಾ ಮಾಡಿದರೆ ಅದನ್ನು ಆರ್ಥಿಕತೆಗೆ ನೀಡುವ ಉತ್ತೇಜನ ಅಂತ ಹೊಗಳುತ್ತಾರೆ. ಬಡವರಿಗೆ ಕೊಡುವ ನೆರವಿನಿಂದ ಆರ್ಥಿಕತೆ ದಿವಾಳಿಯಾಗುತ್ತದೆ ಅನ್ನುತ್ತಾರೆ. ಹೀಗೆ ಯೋಚಿಸುವುದರಲ್ಲೇ ಸಮಸ್ಯೆಯಿದೆ' ಎನ್ನುತ್ತಾರೆ.

ಸರಿ, ಹಣ ಎಲ್ಲಿಂದ ತರುತ್ತೀರಿ ಅಂದರೆ, 'ಬೇರೆಯವರಂತೆ ನಾನು ವಿಮಾನ ಕೊಳ್ಳುವುದಿಲ್ಲ, ಭ್ರಷ್ಟಾಚಾರ ಮಾಡುವುದಿಲ್ಲ. ಆ ದುಡ್ಡಿನಲ್ಲಿ ಜನಕಲ್ಯಾಣ ಕಾರ್ಯಕ್ರಮಗಳನ್ನು ಮಾಡುತ್ತೇನೆ' ಅನ್ನುತ್ತಾರೆ. ರಾಜ್ಯಗಳಿಗೆ ಕೇಂದ್ರವು ನ್ಯಾಯಯುತವಾಗಿ ಕೊಡಬೇಕಾದ ಹಣವನ್ನು ಕೊಟ್ಟರೆ ಯಾವ ರಾಜ್ಯಗಳಿಗೂ ಹಣದ ಸಮಸ್ಯೆಯಿಲ್ಲ ಅನ್ನುವುದು ಅವರ ವಾದ. 15ನೇ ಹಣಕಾಸು ಆಯೋಗವು ಶಿಫಾರಸು ಮಾಡಿದ್ದ ವಿಶೇಷ ಅನುದಾನ 5,495 ಕೋಟಿಯನ್ನು ಬಿಡುಗಡೆ ಮಾಡದೆ ಕೇಂದ್ರ ಅನ್ಯಾಯ ಮಾಡಿದೆ ಎಂದು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆರೋಪಿಸಿದ್ದಾರೆ.

ರಾಜ್ಯಗಳಿಗೆ ನ್ಯಾಯಯುತವಾಗಿ ಸಿಗಬೇಕಾದದ್ದು ಸಿಗಬೇಕು ಹಾಗೂ ರಾಜ್ಯದ ಹಣಕಾಸು ವ್ಯವಹಾರದಲ್ಲಿ ಕೇಂದ್ರವು ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸಬೇಕು ಅನ್ನುವುದು ಬಹುತೇಕ ರಾಜ್ಯಗಳ ಅಭಿಪ್ರಾಯ. ತಮಿಳುನಾಡಿನ ಹಣಕಾಸು ಸಚಿವರಾಗಿದ್ದ ಪಿಟಿಆರ್ ತ್ಯಾಗರಾಜನ್, 'ರಾಜ್ಯದಲ್ಲಿ ಹಣವನ್ನು ಯಾವುದಕ್ಕೆ, ಎಷ್ಟು ಖರ್ಚು ಮಾಡಬೇಕು ಎನ್ನುವುದನ್ನು ಶಾಸಕಾಂಗ ನಿರ್ಧರಿಸುತ್ತದೆ. ಇದು ನಮ್ಮ ಸಂವಿಧಾನಾತ್ಮಕ ಹಕ್ಕು. ಕೇಂದ್ರವಾಗಲಿ, ಪ್ರಧಾನಮಂತ್ರಿಯವರಾಗಲಿ, ಸಂಸದರಾಗಲಿ ಇದರಲ್ಲಿ ಹಸ್ತಕ್ಷೇಪ ಮಾಡಬಾರದು. ಹಾಗೆಯೇ ರಾಷ್ಟ್ರದ ಬಜೆಟ್ಟನ್ನು ಸಂಸತ್ತು ನಿರ್ಧರಿಸುತ್ತದೆ. ಜನ ನಮ್ಮ ಸರ್ಕಾರಕ್ಕೆ ಜವಾಬ್ದಾರಿ ನೀಡಿದ್ದಾರೆ. ನಾವು ಸರಿಯಾಗಿ ಖರ್ಚು ಮಾಡುತ್ತಿದ್ದೇವೋ ಇಲ್ಲವೋ ಅನ್ನುವುದನ್ನು ಜನ ನಿರ್ಧರಿಸುತ್ತಾರೆ. ತಮಿಳುನಾಡಿನ ಆರ್ಥಿಕತೆ ಬಹುತೇಕ ವಿಷಯಗಳಲ್ಲಿ ಭಾರತದಲ್ಲೇ ಮೊದಲ ಸ್ಥಾನದಲ್ಲಿದೆ. ಭಾರತದ ಆರ್ಥಿಕತೆಯನ್ನು ಸರಿಯಾಗಿ ನಿರ್ವಹಿಸಲು ವಿಫಲವಾಗಿರುವ, ಆ ಕ್ಷೇತ್ರದಲ್ಲಿ ಪರಿಣತಿಯೇ ಇಲ್ಲದ ಪ್ರಧಾನಿಯವರು ನಮಗೇಕೆ ಸಲಹೆ ಕೊಡಬೇಕು' ಎಂದು ಖಾರವಾಗಿಯೇ ಕೇಳುತ್ತಾರೆ.

ಅಂದರೆ, ಮುಖ್ಯವಾಗಿ ಚರ್ಚೆ ನಡೆಯುತ್ತಿರುವುದು ದೇಶದ ಒಕ್ಕೂಟ ವ್ಯವಸ್ಥೆ ಕುರಿತಂತೆ. ಕೇಂದ್ರದ ಕೇಂದ್ರೀಕರಣ ಪ್ರವೃತ್ತಿ ಕುರಿತಂತೆ. ಉದಾಹರಣೆಗೆ, ರಾಜ್ಯಗಳು ಎಷ್ಟು ಸಾಲ ಮಾಡಬಹುದು, ಎಷ್ಟು ಕೊರತೆ ಇರಬಹುದು ಅನ್ನುವುದು ರಾಜ್ಯಗಳ ನಿರ್ಧಾರಕ್ಕೆ ಬಿಟ್ಟ ವಿಷಯಗಳಾಗಿದ್ದವು. ಆದರೆ ಈಗ ಕೇಂದ್ರವು ಸಂವಿಧಾನದ 293(3) ವಿಧಿಯನ್ನು ಬಳಸಿಕೊಂಡು ರಾಜ್ಯಗಳನ್ನು ನಿಯಂತ್ರಿಸುತ್ತಿದೆ ಎನ್ನಲಾಗಿದೆ. ಆ ವಿಧಿಯ ಪ್ರಕಾರ, ಯಾವುದಾದರೂ ರಾಜ್ಯವು ಕೇಂದ್ರದ ಸಾಲವನ್ನು ಬಾಕಿ ಉಳಿಸಿಕೊಂಡಿದ್ದಲ್ಲಿ ಕೇಂದ್ರದ ಅನುಮತಿ ಪಡೆಯದೇ 'ಯಾವುದೇ ಸಾಲವನ್ನು' ಪಡೆಯುವಂತಿಲ್ಲ. ಸಮಸ್ಯೆಯೆಂದರೆ, ಜಾಗತಿಕ ಬ್ಯಾಂಕ್, ಎಡಿಬಿಯಂತಹ ಸಂಸ್ಥೆಗಳಿಂದ ಪಡೆದ ಸಾಲವೂ ಕೇಂದ್ರದ ಮೂಲಕವೇ ಬರುವುದರಿಂದ ಅದನ್ನೂ ಕೇಂದ್ರದ ಸಾಲವೆಂದೇ ಪರಿಗಣಿಸಲಾಗುತ್ತದೆ. ಹಾಗಾಗಿ ರಾಜ್ಯಗಳು ನಿರಂತರವಾಗಿ ಸಾಲಗಾರರಾಗಿ ಕೇಂದ್ರದ ನಿಯಂತ್ರಣದಲ್ಲೇ ಉಳಿದಿರುತ್ತವೆ.

ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ (ಎಫ್‌ಆರ್‌ಬಿಎಂ) ಕಾಯ್ದೆಯ ಪ್ರಕಾರ, ವಿತ್ತೀಯ ಕೊರತೆ ಶೇಕಡ 3ಕ್ಕಿಂತ ಕಡಿಮೆ ಇರಬೇಕು. ಆದರೆ ಕೇಂದ್ರವು ಸಂಸತ್ತಿನಲ್ಲಿ ತಿದ್ದುಪಡಿ ತಂದು ಮಿತಿಯನ್ನು ವಿಸ್ತರಿಸಿಕೊಳ್ಳಬಹುದು. ಹಿಂದಿನ ವರ್ಷ ಕೇಂದ್ರದ ವಿತ್ತೀಯ ಕೊರತೆ ಶೇಕಡ 7ರ ಆಸುಪಾಸಿನಲ್ಲಿತ್ತು. ಆದರೆ ರಾಜ್ಯಗಳಿಗೆ ಈ ಸವಲತ್ತು ಇಲ್ಲ. ಶಾಸಕಾಂಗ ಸಭೆಯಲ್ಲಿ ಅದಕ್ಕೆ ಅನುಮತಿ ಸಿಕ್ಕರೂ ಅದಕ್ಕೆ ರಾಜ್ಯಪಾಲರ ಅನುಮೋದನೆ ಬೇಕು. ರಾಜ್ಯಪಾಲರ ಅನುಮತಿ ಸಿಕ್ಕರೂ 293(3) ವಿಧಿಯನ್ನು ಉಲ್ಲೇಖಿಸಿ ಕೇಂದ್ರ ಅದಕ್ಕೆ ಅಡ್ಡಿ ಮಾಡಬಹುದು.

ರಾಜ್ಯ ಸರ್ಕಾರಗಳಿಗೆ ಇನ್ನೊಂದು ಮುಖ್ಯ ತಕರಾರಿದೆ. ತೆರಿಗೆ ಸಂಗ್ರಹದ ಬಹುಪಾಲು ಅಧಿಕಾರವಿರುವುದು ಕೇಂದ್ರಕ್ಕೆ. ಆದರೆ ಅಭಿವೃದ್ಧಿ ಹಾಗೂ ಜನಕಲ್ಯಾಣ ಕಾರ್ಯಕ್ರಮಗಳನ್ನು ನಿರ್ವಹಿಸುವ ಜವಾಬ್ದಾರಿ ರಾಜ್ಯ ಸರ್ಕಾರಗಳದ್ದು. ತೆರಿಗೆಯ ಸಿಂಹಪಾಲು ಹೋಗುವುದು ಕೇಂದ್ರಕ್ಕೆ, ಆದರೆ ಹೆಚ್ಚಿನ ಖರ್ಚು ಮಾಡುವುದು ರಾಜ್ಯ ಸರ್ಕಾರಗಳು. 15ನೇ ಹಣಕಾಸು ಆಯೋಗದ ವರದಿಯ ಪ್ರಕಾರ, ಒಟ್ಟು ತೆರಿಗೆಯಲ್ಲಿ ಕೇಂದ್ರಕ್ಕೆ ಹೋಗಿದ್ದು ಶೇ 62.7ರಷ್ಟು. ರಾಜ್ಯಗಳಿಗೆ ಸಿಕ್ಕಿದ್ದು ಬರೀ ಶೇ 37.3ರಷ್ಟು.

ಕೇಂದ್ರ ಹಾಗೂ ರಾಜ್ಯಗಳ ಅಧಿಕಾರ, ಜವಾಬ್ದಾರಿಯಲ್ಲಿ ಬಹಳಷ್ಟು ಅಸಮತೋಲನವಿದೆ. ಹಾಗಾಗಿಯೇ ಕೇಂದ್ರವು ರಾಜ್ಯಗಳ ಜೊತೆ ತೆರಿಗೆಯನ್ನು ಹಂಚಿಕೊಳ್ಳಬೇಕೆಂದು ಸಂವಿಧಾನ ತಿಳಿಸುತ್ತದೆ. ರಾಜ್ಯಕ್ಕೆ ಸಿಗುತ್ತಿರುವ ಪಾಲನ್ನು ಹೆಚ್ಚಿಸಲು ಹಣಕಾಸು ಆಯೋಗ ಪ್ರಯತ್ನಿಸುತ್ತಿದೆ. ಈಗ ಸದ್ಯಕ್ಕೆ ಕೇಂದ್ರದ ಒಟ್ಟು ಸಂಗ್ರಹದಲ್ಲಿ ಶೇಕಡ 42ರಷ್ಟನ್ನು ಹಂಚಿಕೊಳ್ಳಬೇಕು. ಆದರೆ ರಾಜ್ಯಗಳಿಗೆ ಎಂದೂ ಈ ಪ್ರಮಾಣದಲ್ಲಿ ಹಣ ಬಂದಿಲ್ಲ. ಅದು ಶೇ 29ರ ಆಸುಪಾಸಿನಲ್ಲೇ ಇದೆ. ರಾಜ್ಯ ಸರ್ಕಾರಗಳನ್ನು ವಂಚಿಸುವುದಕ್ಕೆ ಕೇಂದ್ರ ಸರ್ಕಾರ ಹೆಚ್ಚೆಚ್ಚು ಉಪತೆರಿಗೆ (ಸರ್‌ಚಾರ್ಜ್) ಹಾಗೂ ಸೆಸ್ (ಮೇಲ್‌ತೆರಿಗೆ) ಹಾಕುತ್ತಿದೆ. ಇದನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳಬೇಕಾಗಿಲ್ಲ. ಹಾಗಾಗಿ ರಾಜ್ಯಗಳಿಗೆ ಬರಬೇಕಾದ ಪಾಲು ಕಡಿಮೆಯಾಗುತ್ತಿದೆ. ಅಷ್ಟೇಅಲ್ಲ, ರಾಜ್ಯ ಸರ್ಕಾರಗಳನ್ನು ಸಂಪರ್ಕಿಸದೆ ಕೇಂದ್ರವು ದಿಢೀರನೆ ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಅದು ನೋಟು ರದ್ದತಿ ಇರಬಹುದು ಅಥವಾ ಕೋವಿಡ್ ಲಾಕ್‌ಡೌನ್ ಇರಬಹುದು. ಆದರೆ ಅದರ ಪರಿಣಾಮವನ್ನು ನಿರ್ವಹಿಸಬೇಕಾದದ್ದು ರಾಜ್ಯ ಸರ್ಕಾರಗಳು.

ತೆರಿಗೆ ಹಂಚಿಕೆಗೆ ಸಂಬಂಧಿಸಿದಂತೆಯೂ ರಾಜ್ಯಗಳಿಗೆ ಅತೃಪ್ತಿ ಇದೆ. ಯಾಕೆಂದರೆ ಎಲ್ಲ ರಾಜ್ಯಗಳಿಗೂ ಸಮಪಾಲು ಸಿಗುತ್ತಿಲ್ಲ. ಉದಾಹರಣೆಗೆ, ತಾವು ಕೇಂದ್ರಕ್ಕೆ ಕೊಡುವ ಒಂದು ರೂಪಾಯಿಗೆ ಪ್ರತಿಯಾಗಿ ಉತ್ತರ ಪ್ರದೇಶ 2.73 ರೂಪಾಯಿಯನ್ನು, ಬಿಹಾರ 7.06 ರೂಪಾಯಿಯನ್ನು ಪಡೆಯುತ್ತವೆ. ಆದರೆ ಕರ್ನಾಟಕ ಪಡೆಯುವುದು ಬರೀ 15 ಪೈಸೆ. ಎಲ್ಲ ರಾಜ್ಯಗಳಲ್ಲೂ ಸಮಾನವಾದ ಬೆಳವಣಿಗೆಯಾಗಬೇಕು ಅನ್ನುವ ಉದ್ದೇಶದಿಂದ ಹೀಗೆ ಮಾಡಲಾಗುತ್ತದೆ. ರಾಜ್ಯಗಳ ಜನಸಂಖ್ಯೆ, ತಲಾ ಆದಾಯ, ತೆರಿಗೆ ಸಂಗ್ರಹದಂತಹವುಗಳನ್ನು ಆಧರಿಸಿ ತೆರಿಗೆ ಹಣವನ್ನು ವಿತರಿಸಲಾಗುತ್ತದೆ. ಹಾಗಾಗಿಯೇ ಉತ್ತರ ಪ್ರದೇಶಕ್ಕೆ ಶೇ 17.9, ಬಿಹಾರಕ್ಕೆ ಶೇ 10, ಕರ್ನಾಟಕಕ್ಕೆ ಶೇ 3.65ರಷ್ಟು ಸಿಗುತ್ತದೆ.

ಉತ್ತಮ ಸ್ಥಿತಿಯಲ್ಲಿರುವ ರಾಜ್ಯಗಳು ಹಿಂದುಳಿದ ರಾಜ್ಯಗಳಿಗೆ ಹೆಚ್ಚಿನ ತೆರಿಗೆಯನ್ನು ಬಿಟ್ಟುಕೊಡಬೇಕು ಎನ್ನುವುದಕ್ಕೆ ಯಾರದೂ ತಕರಾರಿಲ್ಲ. ಆದರೆ ಆ ರಾಜ್ಯಗಳಲ್ಲಿ ಪ್ರಗತಿಯೇ ಆಗುತ್ತಿಲ್ಲ. ಹಣ ಪೋಲಾಗುತ್ತಿದೆ. ಆದರೂ ವರ್ಷದಿಂದ ವರ್ಷಕ್ಕೆ ಅವುಗಳಿಗೆ ಸಿಗುತ್ತಿರುವ ಪಾಲು ಹೆಚ್ಚುತ್ತಲೇ ಇದೆ. ದಕ್ಷಿಣದ ರಾಜ್ಯಗಳಿಗೆ ಸಿಗುತ್ತಿರುವ ಪಾಲು ಕಡಿಮೆಯಾಗುತ್ತಿದೆ. ಇದು ದಕ್ಷಿಣದ ರಾಜ್ಯಗಳ ಅತೃಪ್ತಿಗೆ ಕಾರಣ.

ಆರ್ಥಿಕ ಪ್ರಗತಿಗೆ ಹಾಗೂ ಜನಕಲ್ಯಾಣ ಕಾರ್ಯಕ್ರಮಗಳಿಗೆ ರಾಜ್ಯಗಳಿಗೆ ಸಂಪನ್ಮೂಲದ ಅವಶ್ಯಕತೆ ಇದೆ. ಜೊತೆಗೆ ಕೇಂದ್ರವು ಒಕ್ಕೂಟ ವ್ಯವಸ್ಥೆಯಿಂದ ಹೆಚ್ಚೆಚ್ಚು ದೂರ ಸರಿದು ರಾಜ್ಯಗಳಿಗೆ ಸಂಬಂಧಿಸಿದ ಕೃಷಿ, ಶಿಕ್ಷಣದಂತಹ ವಿಷಯಗಳಲ್ಲೂ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ಆದರೆ ನಿರ್ಧಾರಗಳನ್ನು ಜಾರಿಗೊಳಿಸುವ ಜವಾಬ್ದಾರಿ ರಾಜ್ಯಗಳದ್ದೇ ಆಗಿರುವುದರಿಂದ ರಾಜ್ಯಗಳ ಹೊರೆ ಜಾಸ್ತಿಯಾಗುತ್ತಿದೆ. ಅಂದರೆ ರಾಜಕೀಯ, ಆರ್ಥಿಕ ಹಾಗೂ ಹಣಕಾಸಿನ ಅಧಿಕಾರ ಕೇಂದ್ರೀಕೃತವಾಗುತ್ತಿದೆ. ಆದರೆ ಜವಾಬ್ದಾರಿ ಹಾಗೂ ಹೊಣೆಗಾರಿಕೆ ವಿಕೇಂದ್ರೀಕರಣಗೊಳ್ಳುತ್ತಿದೆ. ಹಾಗಾಗಿ ಇಂದು ರಾಜ್ಯಗಳು ಸಂಪನ್ಮೂಲವನ್ನು ಕ್ರೋಡೀಕರಿಸಿಕೊಳ್ಳಲು ಹೆಣಗಾಡುತ್ತಲೇ ಒಕ್ಕೂಟ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದಕ್ಕೂ ಹೋರಾಡಬೇಕಾಗಿದೆ.

ಚುರುಮುರಿ

ಪಿಂಜರಾಪೋಲು ಗ್ಯಾರಂಟಿ

• ಲಿಂಗರಾಜು ಡಿ.ಎಸ್.

'ಕೆಲಸವಿಲ್ಲದ ಸಂಕಟಕ್ಕೆ ಅಸೋಕಣ್ಣ, ಕುಮಾರಣ್ಣ, ರೇಣುಕಣ್ಣ 'ಟಿಕೇಟ್ ತಕ್ಕಬ್ಯಾಡಿ, ಬಿಲ್ ಕಟ್ಟಬ್ಯಾಡಿ' ಅಂತ ಬಾಯಲ್ಲಿ ಬ್ಯಾಡ್ ವರ್ಡ್ಸ್ ಕಡಿಸ್ತಾ ಕೂತವರೆ, ಬ್ಯಾಡ್ ಬಾಯ್ಸ್' ಅಂತಂದೆ.

'ಕೈ ಪಕ್ಷದೋರು ಏನೂ ಕಮ್ಮಿ ಇಲ್ಲ. 'ಕ್ಯಾತೆ ಮಾಡದ್ನೇ ಕ್ಯಾಮೆ ಮಾಡಿಕ್ಯಬ್ಯಾಡಿ. ಚಾಡಿ ಹೇಳಬ್ಯಾಡಿ, ನಮ್ಮ ಮಧ್ಯೆ ಬೆಂಕಿ ಹಾಕಬ್ಯಾಡಿ' ಅಂತ ಡಿಕೆ ಇನ್ನಿಲ್ಲದಂಗೆ ಹೇಳ್ಯದೆ' ಚಂದ್ರು ಬೇಜಾರಾದ.

'ಅವ್ರಿಗೆ ಬ್ಯಾರೆ ಕೇಮೆ ಏನದೋ? ಕೈ ಟೀಮಲ್ಲೂ ಮಂತ್ರಿಯಾಗ್ನಿಲ್ಲ, ಒಳ್ಳೆ ಖಾತೆ ಸಿಗನಿಲ್ಲ ಅಂತ ಗುಮ್ಮಕೆ ನಿಂತಿರೋ ವಯಸ್ಸಾದ ವಯೋನಿಧಿ ಹೋರಿಗಳು ಜನದ ಕೆಲಸ ಬುಟ್ಟು ಬೇರೆ ಎಲ್ಲಾ ಮಾಡಿಕ್ಯಂಡು ತಿರುಗ್ತವೆ. ಇವುನ್ನ ಯಾವ ಸಂತೇಲಿ ಮಾರದು?' ಯಂಟಪ್ಪಣ್ಣ ಸಿಟ್ಟಂದಿತ್ತು.

'ಗೆದ್ದೋರಿಗೆಲ್ಲಾ ಮಂತ್ರಿಗಿರಿ ಗ್ಯಾರಂಟಿ ಅಂತ ಗ್ಯಾರಂಟಿ ಕಾರ್ಡು ಕೊಟ್ಟವುರಂತೆ ರಾವುಲಣ್ಣ, ಸೋನಿಯಕ್ಕ! ಇದೂ ಮೋದಿ ಮಾಮ ಹದಿನೈದು ಲಕ್ಷ ಕೊಟ್ಟ ಲೆಕ್ಕದಂಗೇಯೋ?' ಅಂದ ಚಂದ್ರು.

'ಸಾ, ನಾನೇಳದು 135 ಶಾಸಕರಿಗೂ ಮಂತ್ರಿ ಮಾಡಿದ್ರೆ ಆಗಕುಲ್ವೇ?' ಅಂತಂದೆ.

'ಲೇಯ್ ಹೈವಾನ್ ಅದೆಂಗಾದ್ದಾ? ಇರೋವೆ 34 ಮಂತ್ರಿ ಖಾತೆಗಳು' ಅಂದ್ರು ತುರೇಮಣೆ.

'ಕ್ಯಾಬಿನೆಟ್ ಮಂತ್ರಿ, ಜಿಲ್ಲಾ ಮಂತ್ರಿ, ತಾಲ್ಲೋಕು ಮಂತ್ರಿ, ಹೋಬಳಿ ಮಂತ್ರಿ ಅಂತ ಎಲ್ಲಾ ಖಾತೆಗೂ ನಾಕುನಾಕು ಮಂತ್ರಿ ಪೋಸ್ಟು, ಒಂದೊಂದು ಗೂಟದ ಕಾರು ಕೊಟ್ರೆ 135ರ ಲೆಕ್ಕ ಸರೋಯ್ತದೆ!' ನನ್ನ ಘನಂದಾರಿ ವಿಚಾರ ಬಿಚ್ಚಿಟ್ಟೆ.

'ಇವುಗಳಲ್ಲಿ ವಯಸ್ಸಾಗಿ ಗೆಯ್ಯಕ್ಕಾಗದೇ ಗೊಡ್ಡು ಬಿದ್ದಿದ್ದವೇ ಜಾಸ್ತಿ ಅವೆ ಕನೋ! ಒಂದೊಂದೂವೆ ಕೊಂಬಿಗೆ ತಲಾ ಹತ್ತತ್ತು ಕ್ರಿಮಿನಲ್ ಕೇಸುಗಳ ನೇತಾಕ್ಯಂಡವೆ. ಜನ ಚುನಾವಣೇಲಿ ಬಾಲ ಕಟ್ ಮಾಡಿರೋ ಉಮ್ಮೇದುವಾರರು ಎಲ್ಲಾ ಪಕ್ಷದೇಲೂ ಅವೆ. ಇವರುನ್ನೆಲ್ಲಾ ತಕ್ಕೋಗಿ ಯಾವುದನ್ನಾ ಪಿಂಜರಾಪೋಲಿಗೆ ದಬ್ಬಿದ್ರೆ ಜನ ನೆಮ್ಮದಿಯಾಗಿರಬೈದು' ಅಂತ ತುರೇಮಣೆ ದಿವಿನಾದ ಐಡಿಯಾ ಕೊಟ್ಟರು.

ದಿನದ ಟ್ವೀಟ್

ಚುನಾವಣೆ ನಡೆಸಿ

ಆತ್ಮೀಯ ಡಿ.ಕೆ.ಶಿವಕುಮಾರ್ ಸರ್, ಭ್ರಷ್ಟಾಚಾರಮುಕ್ತ ಹಾಗೂ ನಾಗರಿಕಸ್ನೇಹಿ ಆಡಳಿತಕ್ಕೆ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ನಿಶ್ಚಿತವಾಗಿಯೂ ನಿರ್ಣಾಯಕವಾದವುಗಳು. ದಯವಿಟ್ಟು ಬಿಬಿಎಂಪಿಗೆ ಚುನಾವಣೆ ನಡೆಸಿ. ಇದರಿಂದ ಕಾರ್ಪೊರೇಟರ್‌ಗಳನ್ನು ಹೊಂದುವ ಮೂಲಕ ಅಧಿಕಾರಿಗಳನ್ನು ಉತ್ತರದಾಯಿತ್ವಕ್ಕೆ ಒಳಪಡಿಸಲು ಸಾಧ್ಯವಾಗುತ್ತದೆ. ಜೊತೆಗೆ, ಅಪ್ಪಟ ಸ್ಥಳೀಯ ಸಕ್ರಿಯ ನಾಗರಿಕರಿರುವ ವಾರ್ಡ್ ಸಮಿತಿಗಳನ್ನು ರಚಿಸಿ.

ಶ್ರೀನಿವಾಸ್ ಅಲವಿಲ್ಲಿ, ಸಹ ಸಂಸ್ಥಾಪಕ, ಸಿಟಿಜನ್ಸ್ ಫಾರ್ ಬೆಂಗಳೂರು

ಕಿಡಿನುಡಿ

ಪ್ರತಿಭಟನೆನಿರತ ನಮ್ಮ ಕುಸ್ತಿಪಟುಗಳ ಭಯಾನಕ ಚಿತ್ರಗಳು ಕಣ್ಮುಂದೆ ಬಂದು, ಕಳೆದ ರಾತ್ರಿಯಿಡೀ ನನಗೆ ನಿದ್ದೆಯೇ ಬರಲಿಲ್ಲ. ಎಲ್ಲ ಕ್ರೀಡಾ ಸಂಸ್ಥೆಗಳಲ್ಲೂ ಸುರಕ್ಷತೆಗೆ ಸಂಬಂಧಿಸಿದಂತೆ ಸ್ವಾಯತ್ತ ವ್ಯವಸ್ಥೆ ರೂಪಿಸಲು ಈಗಲಾದರೂ ನಾವು ಮುಂದಾಗಬೇಕಿದೆ. ಅಹಿತಕರ ಪರಿಸ್ಥಿತಿ ಉದ್ಭವಿಸಿದಾಗ ಅತ್ಯಂತ ಸಂವೇದನಾಶೀಲತೆ ಹಾಗೂ ಗೌರವದೊಂದಿಗೆ ಅದನ್ನು ನಿರ್ವಹಿಸಲಾಗುತ್ತದೆ ಎಂಬುದನ್ನು ನಾವು ಖಾತರಿಗೊಳಿಸಬೇಕು. ಪ್ರತಿಯೊಬ್ಬ ಕ್ರೀಡಾಪಟುವೂ ಸುರಕ್ಷಿತ ಹಾಗೂ ಸಬಲೀಕರಣಕ್ಕೆ ಪೂರಕವಾದ ವಾತಾವರಣದಲ್ಲಿ ಇರಲು ಅರ್ಹರಾದವರು.

ಅಭಿನವ್ ಎ. ಬಿಂದ್ರಾ, ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಶೂಟರ್

25 ವರ್ಷಗಳ ಹಿಂದೆ

ಶನಿವಾರ, 30-5-1998

• **ಜನಸಾಮಾನ್ಯರಿಗೆ ಹೆಚ್ಚು ಹೊರೆಯಾದ ರೈಲ್ವೆ ಬಜೆಟ್**

ನವದೆಹಲಿ, ಮೇ 29 (ಪಿಟಿಐ, ಯುಎನ್‌ಐ)– ಪ್ಲ್ಯಾಟ್‌ಫಾರಂ ಟಿಕೆಟ್ ದರವೂ ಸೇರಿದಂತೆ ಎಲ್ಲ ರೈಲುಗಳ ಸಾಮಾನ್ಯ, ಎರಡನೇ ಮತ್ತು ಮೊದಲ ದರ್ಜೆ ಪ್ರಯಾಣ ದರವನ್ನು ತೀವ್ರ ಪ್ರಮಾಣದಲ್ಲಿ ಏರಿಸಲಾಗಿದೆ. ಭಾರತೀಯ ಜನತಾ ಪಕ್ಷದ ಮೊತ್ತಮೊದಲ ರೈಲ್ವೆ ಬಜೆಟ್ ಜನಸಾಮಾನ್ಯರ ಮೇಲೆ ತೀವ್ರ ಹೊರೆ ಹೇರಿದೆ.

ಪ್ರಯಾಣ ದರಗಳ ಏರಿಕೆಯಿಂದ 450 ಕೋಟಿ ರೂಪಾಯಿ ನಿರೀಕ್ಷಿಸಿರುವ ರೈಲ್ವೆ ಸಚಿವ ನಿತೀಶ್ ಕುಮಾರ್ ಅವರು 1,206 ಕೋಟಿ ರೂಪಾಯಿಗಳ ಉಳಿತಾಯ ರೈಲ್ವೆ ಬಜೆಟ್ ಅನ್ನು ಇಂದು ಸಂಸತ್ತಿನಲ್ಲಿ ಮಂಡಿಸಿದರು. ಚೆನ್ನೈ ಮತ್ತು ಕಲ್ಕತ್ತ ಮಹಾನಗರ ರೈಲುಗಳೂ ಸೇರಿದಂತೆ ಎಲ್ಲ ರೈಲುಗಳ ಉನ್ನತ ದರ್ಜೆ ಪ್ರಯಾಣದಲ್ಲಿ ತೀವ್ರ ಏರಿಕೆ ಮಾಡಲಾಗಿದೆ.

ರಾಜ್ಯಕ್ಕೆ ಹೊಸ ರೈಲು: ಗುಂತಕಲ್ ಮಾರ್ಗವಾಗಿ ವಾರಕ್ಕೊಮ್ಮೆ ಬೆಂಗಳೂರು–ವಿಶಾಖಪಟ್ಟಣಂ ಎಕ್ಸ್‌ಪ್ರೆಸ್, ಕೊಂಕಣ ಮಾರ್ಗವಾಗಿ ಮಂಗಳೂರು–ಕುರ್ಲಾ ಎಕ್ಸ್‌ಪ್ರೆಸ್ ಹೊಸ ರೈಲುಗಳು, ತಿರುಚಿರಾಪಳ್ಳಿಯವರೆಗಿನ ಮಂಗಳೂರು– ಪಾಲ್ಘಾಟ್ ಎಕ್ಸ್‌ಪ್ರೆಸ್ ವಿಸ್ತರಣೆ, ಬ್ರಾಡ್‌ಗೇಜ್ ಕಾರ್ಯ ಮುಗಿದ ಮೇಲೆ ವಿಜಾಪೂರ–ಹೂಟಗಿ ನಡುವೆ ಮೂರು ಅವಳಿ ಪುಶ್–ಪುಲ್ ಸರ್ವಿಸಸ್ ಮತ್ತು ಕರ್ನೂಲ್‌ವರೆಗೆ ಸಿಕಂದರಾಬಾದ್ ಮಹಬೂಬ್‌ನಗರ ತುಂಗಭದ್ರಾ ಎಕ್ಸ್‌ಪ್ರೆಸ್ ವಿಸ್ತರಣೆ ಕರ್ನಾಟಕಕ್ಕೆ ನೂತನ ರೈಲ್ವೆ ಬಜೆಟ್‌ನ ಕೊಡುಗೆ.

50 ವರ್ಷಗಳ ಹಿಂದೆ

ಬುಧವಾರ, 30-5-1973

• **ಮಲೆನಾಡಿನಲ್ಲಿ ಗೇಣಿದಾರರ ಮೇಲೆ ಭೂಮಾಲೀಕರ ದೌರ್ಜನ್ಯದ ಆರೋಪ**

ಬೆಂಗಳೂರು, ಮೇ 29– ಗೇಣಿದಾರರ ಮೇಲೆ ಮಲೆನಾಡಿನಲ್ಲಿ ಭೂ ಮಾಲೀಕರು ದೌರ್ಜನ್ಯ ನಡೆಸಿದ್ದಾರೆಂದು ಶ್ರೀ ಕೋಣಂದೂರು ಲಿಂಗಪ್ಪ (ಸಮಾಜವಾದಿ) ಅವರು ಇಂದು ವಿಧಾನಸಭೆಯಲ್ಲಿ ಆಪಾದಿಸಿದರು.

ಪೊಲೀಸರು ಭೂ ಮಾಲೀಕರಿಗೆ ಸಹಾಯಕರಾಗಿ ಹೆಂಗಸರು, ಮಕ್ಕಳನ್ನು ಬಂಧಿಸಿದ್ದಾರೆಂದು ಅವರು ಹೇಳಿ ಅದನ್ನು ಸರ್ಕಾರದ ಗಮನಕ್ಕೆ ತಂದರು.

ಶ್ರೀ ಹುಚ್ಚಮಾಸ್ತಿಗೌಡ: ವಿವರಗಳನ್ನು ಕಳುಹಿಸಿಕೊಟ್ಟರೆ ಅಧಿಕಾರಿಗಳಿಗೆ ತಿಳಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವೆ.

ಶ್ರೀ ಜಯಪ್ರಕಾಶ್ ನಾರಾಯಣ್: ಉತ್ತರ ಕನ್ನಡ ಜಿಲ್ಲೆಯಲ್ಲೂ ಅದೇ ಪರಿಸ್ಥಿತಿ, ಒಂದು ಸರ್ಕ್ಯುಲರ್ ಹೊರಡಿಸಿ.

ಸಚಿವರು: ಸರ್ಕ್ಯುಲರ್ ಕಳುಹಿಸಲಾಗಿದೆ. ಜಿಲ್ಲಾಧಿಕಾರಿಗಳೇ ಖುದ್ದು ಪರಿಶೀಲನೆ ಮಾಡಿ ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿ ಮೇಲೆ ಕ್ರಮ ತೆಗೆದುಕೊಂಡು ಗೇಣಿದಾರರು ಪುನಃ ತಮ್ಮ ಜಮೀನಿಗೆ ಹಿಂದಿರುಗುವಂತೆ ಮಾಡಲು ತಿಳಿಸಲಾಗಿದೆ.

ವಿಧಾನಸಭೆಯ ಶೂನ್ಯ ವೇಳೆಯಲ್ಲಿ ಇಂದು ಇದರ ಜೊತೆಗೆ ಇನ್ನೂ ಹಲವು ಅಹವಾಲುಗಳು ಬಂದವು.

ಸಂಗತ

ಮಕ್ಕಳೇನೋ ಸಿದ್ಧ, ನಾವು?

ರಜೆ ಮುಗಿಸಿ ಶಾಲೆಗೆ ಬರುತ್ತಿರುವ ಮಗು ಹುರುಪಿನಿಂದ ಸಿದ್ಧತೆ ಮಾಡಿಕೊಂಡಿರುವಂತೆ ಪೋಷಕರು, ಶಿಕ್ಷಕರು ಸಹ ಅದಕ್ಕೆ ಪೂರಕವಾಗಿ ಸನ್ನದ್ಧರಾಗಬೇಕು

• ಸದಾಶಿವ್ ಸೊರಟೂರು

ಇಲ್ಲೊಬ್ಬಳು ಪಕ್ಕದ ಮನೆಯ ಪೋರಿ ಮತ್ತೆ ತೆರೆಯಲಿರುವ ತನ್ನ ಶಾಲೆಗಾಗಿ ತಡರಾತ್ರಿಯವರೆಗೂ ತಯಾರಿ ಮಾಡಿಕೊಂಡಿದ್ದಾಳೆ. ಬ್ಯಾಗು, ಪುಸ್ತಕ, ಲೇಖನ ಸಾಮಗ್ರಿ ಎಲ್ಲವನ್ನೂ ಜೋಡಿಸಿಕೊಂಡಿದ್ದಾಳೆ. ಮೊದಲನೇ ದಿನ ಶಾಲೆಯಲ್ಲಿ ಸ್ನೇಹಿತರು, ಶಿಕ್ಷಕರನ್ನು ಯಾವಾಗ ಭೇಟಿ ಮಾಡಿಯೇನು ಎಂಬ ತುಡಿತ ಅವಳದು. ಪೋಷಕರನ್ನು ಕೇಳಿ ತನಗೆ ಬೇಕಾದದ್ದನ್ನು ತರಿಸಿಕೊಂಡಿದ್ದಾಳೆ. ಮನಸಿನಲ್ಲಿ ಹೊಸ ಹುರುಪು ಮೂಡಿದೆ. ಇದನ್ನೆಲ್ಲ ನೋಡಿದರೆ, ಮೊದಲ ದಿನ ಬಾರಿಸುವ ಶಾಲೆಯ ಮೊದಲ ಬೆಲ್ಲು ಅವಳಿಗೆಷ್ಟು ಹಿತಕರವಾಗಬಹುದು ಅನಿಸುತ್ತದೆ.

ಈ ಪುಟ್ಟ ಹುಡುಗಿ ಕಲಿಯಲು ಹೊರಟ ಎಲ್ಲಾ ಮಕ್ಕಳ ಪ್ರತಿನಿಧಿಯಂತೆ ಕಾಣುತ್ತಾಳೆ. ಒಂದು ರೂಪಕದಂತೆ ಅನಿಸುತ್ತಾಳೆ. ಅಷ್ಟೇ ಅಲ್ಲ, ಕಲಿಸಬೇಕಾದವರು ಮಾಡಿಕೊಳ್ಳಬೇಕಾದ ಸಿದ್ಧತೆಯನ್ನೂ ಆ ಮಗು ಸೂಚ್ಯವಾಗಿ ಹೇಳುವಂತಿದೆ. ಮಗು ಎಂದೂ ಕಲಿಯಲು ಸಿದ್ಧವಿರುತ್ತದೆ. ಅದು ಯಾವ ಕಲಿಕೆಯನ್ನೂ ತಿರಸ್ಕರಿಸುವುದಿಲ್ಲ. ನೀವು ಏನು ಕಲಿಸಿದ್ದೀರಿ ಎಂಬುದರ ಮೇಲೆ ಮುಂದಿನದು ನಿರ್ಧಾರವಾಗುತ್ತದೆ. ಸರಿಯಾಗಿ ಕಲಿಸದೇ ಹೋದರೆ ಅದೆಂಥ ನಷ್ಟ?! ಆದ್ದರಿಂದ ಕಲಿಸುವವರು ವ್ಯವಸ್ಥಿತವಾಗಿ ಸಿದ್ಧರಾಗಬೇಕಾದದ್ದು ತುಂಬಾ ಅವಶ್ಯಕ.

ಸುಮಾರು ಎರಡು ತಿಂಗಳು ರಜೆಯ ಮೇಲಿದ್ದ ಮಕ್ಕಳು ಶಾಲೆಯತ್ತ ಮುಖ ಮಾಡಲಿದ್ದಾರೆ. ಮೌನವಾಗಿದ್ದ ಶಾಲೆಯ ಅಂಗಳ ಕಳೆಗಟ್ಟುತ್ತದೆ. ಶಾಲೆ ಶುರುವಾಗಲಿರುವ ಈ ಸಂದರ್ಭದಲ್ಲಿ ನಾವು ಕೆಲವು ವಿಚಾರಗಳ ಬಗ್ಗೆ ಚರ್ಚಿಸುವ ಅವಶ್ಯಕತೆ ಇದೆ. ಐದನೇ ತರಗತಿಯ ಮಗು ಶಾಲೆಗೆ ಹೋಗಲು ಅಷ್ಟೊಂದು ಕಾಳಜಿಯಿಂದ ಸಿದ್ಧತೆ ಮಾಡಿಕೊಳ್ಳುತ್ತಿರುವಾಗ ಪೋಷಕರು, ಶಿಕ್ಷಕರು, ಶಾಲೆ, ಶಿಕ್ಷಣ ಇಲಾಖೆ ಇನ್ನೂ ಯಾವ ಮಟ್ಟಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದನ್ನು ಇದು ಸೂಚಿಸುತ್ತದೆ. ತೆರೆಯಬೇಕಾದದ್ದು ಶಾಲೆಯ ಬಾಗಿಲು ಮಾತ್ರವಲ್ಲ, ಈ ನಾಲ್ಕು ಕಂಬಗಳ ಮನಸ್ಸು ಕೂಡ.

ಮೊದಲ ದಿನ ಮಗು ಶಾಲೆಗೆ ಸಿದ್ಧವಾಗುವಂತೆ ಪೋಷಕರು ಕೂಡ ಒಂದು ಯೋಜನೆ ರೂಪಿಸಿಕೊಳ್ಳುವುದು ಅವಶ್ಯಕ: ಮಗುವನ್ನು, ಅದರ ಕನಸನ್ನು ಗೌರವಿಸುತ್ತೇನೆ. ಓದಲು ಪೂರಕ ವಾತಾವರಣ ಒದಗಿಸುತ್ತೇನೆ. ಅದರೊಂದಿಗೆ ಕೂತು ನಾನೂ ಓದುತ್ತೇನೆ. ಅದರಂತೆ ನಾನು ಕೂಡ ಮೊಬೈಲ್ ಅನ್ನು ಅಗತ್ಯ ಬಿದ್ದಾಗ ಮಾತ್ರ ಬಳಸುತ್ತೇನೆ. ಮಗುವಿನ ಸೋಲನ್ನು ಗೌರವಿಸುತ್ತೇನೆ. ಆತ್ಮವಿಶ್ವಾಸ ತುಂಬುತ್ತೇನೆ. ಮಗುವಿನ ಒಡನಾಟ ಗಮನಿಸುತ್ತೇನೆ. ಮಗುವಿಗೆ ಬರೀ ಹೇಳುವುದಿಲ್ಲ, ಸ್ವತಃ ನಡವಳಿಕೆಯಲ್ಲಿ ಅದನ್ನು ತೋರಿಸುತ್ತೇನೆ. ಇಂತಹ ಹತ್ತೆಂಟು ಪ್ರಮಾಣಗಳನ್ನು ಪೋಷಕರು ತಮ್ಮಲ್ಲಿ ಮಾಡಿಕೊಂಡು ಸಿದ್ಧರಾಗಬೇಕು.

ಇಲಾಖೆಯು ಹಿಂದೆಂದಿಗಿಂತ ಈ ಬಾರಿ ಉತ್ತಮ ಸಿದ್ಧತೆ ಮಾಡಿಕೊಂಡಿದೆ. ವರ್ಷಪೂರ್ತಿ ಶಾಲೆಯಲ್ಲಿ ಏನೇನಾಗಬೇಕು ಎಂಬ ಬಗ್ಗೆ ಸ್ಪಷ್ಟ ಮಾರ್ಗದರ್ಶಿ ಸೂತ್ರ ಹೊರಡಿಸಿದೆ. ಇದು ಬೋಧನೆ ಮತ್ತು ಕಲಿಕೆಯ ಸಮಗ್ರ ಒಳನೋಟವನ್ನು ಒಳಗೊಂಡಿದೆ. ಮೊದಲ ದಿನವೇ ಮಕ್ಕಳ ಕೈಗೆ ಪಠ್ಯಪುಸ್ತಕ, ಸಮವಸ್ತ್ರ ಲಭ್ಯವಾಗುತ್ತಿವೆ. ಶಿಕ್ಷಕರ ಅಭಾವ ಇರುವೆಡೆ ಅತಿಥಿ ಶಿಕ್ಷಕರ ನೇಮಕಕ್ಕೆ ಆದೇಶ ಹೊರಡಿಸಿದೆ. ಹಾಲು, ಊಟಕ್ಕೆ ಸಿದ್ಧತೆಗಳಾಗಿವೆ. ಆದರೆ ಮಾಡಿಕೊಂಡ ಈ ಯೋಜನೆಗಳು ವರ್ಷಪೂರ್ತಿ ಕ್ರಮವರಿತು ಅನುಷ್ಠಾನ ಆಗಬೇಕಾದದ್ದು ಅತಿ ಮುಖ್ಯ.

ಇದೆಲ್ಲಕ್ಕಿಂತ ಮುಖ್ಯವಾಗಿ, ಕಲಿಸಬೇಕಾದ ಶಿಕ್ಷಕ ತಾನು ಸಂಪೂರ್ಣ ಸನ್ನದ್ಧನಾಗಬೇಕಾದದ್ದು ಅತಿ ಮುಖ್ಯ. ಒಂದು ದೀರ್ಘ ವಿಶ್ರಾಂತಿಯ ನಂತರ ಶಿಕ್ಷಕರು ಶಾಲೆ ಕಡೆ ಬರುತ್ತಿದ್ದಾರೆ. ಈ ವರ್ಷ ತಾನು ಬೋಧಿಸಬೇಕಾದ ವಿಷಯಗಳ ಅಧ್ಯಯನವಾಗಬೇಕು. ಯಾವಾಗ, ಯಾವ ಪಾಠ ಮಾಡಬೇಕು ಅನ್ನುವ ಯೋಜನೆ ತಯಾರಾಗಬೇಕು. ಪಾಠಕ್ಕೆ ಸಿದ್ಧನಾಗದೆ ತಾನು ತರಗತಿಗೆ ಹೋಗುವುದಿಲ್ಲ ಎಂದು ತನಗೆ ತಾನೇ ಪ್ರಮಾಣ ಮಾಡಿಕೊಳ್ಳಬೇಕು. ಬರೀ ಬೋಧನೆಯಲ್ಲದೆ ಶಾಲೆಯ ಭೌತಿಕ ವಾತಾವರಣವನ್ನು ಕಲಿಕಾಸ್ನೇಹಿ ಆಗುವಂತೆ ಸಿದ್ಧಗೊಳಿಸಬೇಕು. ಸಮುದಾಯದ ಸಹಕಾರದಲ್ಲಿ ಅದನ್ನು ಸಾಧ್ಯವಾಗಿಸುವ ಮತ್ತು ಮೊದಲನೆ ದಿನವೇ ಎಲ್ಲಾ ಮಕ್ಕಳು ಶಾಲೆಯಲ್ಲಿ ಇರುವಂತೆ ಕ್ರಮ ವಹಿಸಬೇಕು. ಹೊಸ ಹೊಸ ಕಲಿಕಾ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಶಾಲೆಯಲ್ಲಿ ಮಗು ಕಲಿಯಲು ಆಹ್ಲಾದಕರ ವಾತಾವರಣ ಸೃಷ್ಟಿಸಬೇಕು.

ಎಷ್ಟೋ ಶಾಲೆಗಳಲ್ಲಿ ಮಕ್ಕಳಿಗೆ ಕುಡಿಯುವ ನೀರಿಲ್ಲ. ಕೆಲವು ಶಾಲೆಗಳಲ್ಲಿ ಶೌಚಾಲಯಗಳಿಲ್ಲ. ಕೆಲವು ಕಡೆ ಮಕ್ಕಳು ತುಂಬಾ ದೂರದಿಂದ ನಡೆದುಕೊಂಡು ಬರಬೇಕಾಗುತ್ತದೆ. ಇನ್ನು ಕೆಲವು ಕಡೆ ಮಕ್ಕಳು ಆಡಲು ಆಟದ ಮೈದಾನಗಳಿಲ್ಲ. ಕೊಠಡಿಗಳ ಅಭಾವ ಇದೆ. ಮನೆಯಲ್ಲಿ ಬಡತನದ ಕಾರಣಕ್ಕೆ ಮಕ್ಕಳು ಶಾಲೆಗೆ ಬರುವುದಿಲ್ಲ. ಒತ್ತಡದ ಪರಿಣಾಮವಾಗಿ ಕೆಲವು ಮಕ್ಕಳು ಶಾಲೆ ತೊರೆಯುತ್ತಿದ್ದಾರೆ. ಅಲ್ಲಲ್ಲಿ ಕೆಲವು ಶಿಕ್ಷಕರ ಕರ್ತವ್ಯದ ಬಗ್ಗೆ ಕೇಳಿಬರುವ ಅಪಸ್ವರ, ಇಲಾಖೆಯ ಕೆಲವೊಂದು ಆತುರದ ನಿರ್ಧಾರಗಳು... ಇಂತಹ ಕೆಲವು ಸಮಸ್ಯೆಗಳು ಮಗುವಿನ ಕಲಿಕೆಗೆ ಕೊಂಚ ಹಿನ್ನಡೆ ಉಂಟುಮಾಡಬಹುದು.

ಈ ಸಮಸ್ಯೆಗಳನ್ನು ಬಗೆಹರಿಸುವುದು ನಮ್ಮ ಆದ್ಯತೆಯಾಗಬೇಕು ಮತ್ತು ಸಮಸ್ಯೆಗಳಿವೆಯೆಂದು ಹಾಗೇ ಸುಮ್ಮನೆ ಕೂರುವುದಲ್ಲ. ಸಮಸ್ಯೆಗಳು ಎಲ್ಲ ಕಾಲಕ್ಕೂ ಇರುತ್ತವೆ. ಸಮಸ್ಯೆಗಳಿಗೆ ಪರಿಹಾರ ಹುಡುಕಿಕೊಳ್ಳುತ್ತಾ, ಅದಕ್ಕೆ ಬದಲಿ ವ್ಯವಸ್ಥೆ ಮಾಡಿಕೊಳ್ಳುತ್ತಾ ಮಗುವಿನ ಕಲಿಕೆಯನ್ನು ಮಾತ್ರ ಪ್ರಧಾನವಾಗಿಟ್ಟು ನಾವು ಮುನ್ನಡೆದರೆ, ನಮ್ಮ ಮಕ್ಕಳು ನಮ್ಮ ಸಮಾಜದ ಆಸ್ತಿಯಾಗಬಹುದು. ಅದೇ ತಾನೇ ಶಿಕ್ಷಣದ ಉದ್ದೇಶ?

ವಾಚಕರ ವಾಣಿ

ನಂದಿ ಮುದ್ರಿಕೆಯೇ ಸೂಕ್ತ

ಹೊಸ ಸಂಸತ್ ಭವನದಲ್ಲಿ ಸ್ಥಾಪನೆಯಾಗಿರುವ ರಾಜದಂಡ 'ಸೆಂಗೋಲ್'ನ ನೆತ್ತಿಯಲ್ಲಿ ನಂದಿ ವಿಗ್ರಹದ ಬದಲು ರಾಷ್ಟ್ರಲಾಂಛನವಾದ ನಾಲ್ಕು ಸಿಂಹಗಳ ಮುದ್ರಿಕೆಯನ್ನು ಅಳವಡಿಸುವುದು ಅರ್ಥಪೂರ್ಣ ಎಂದು ಡಾ. ಟಿ.ಗೋವಿಂದರಾಜು ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಮೇ 27). ಸೆಂಗೋಲ್‌ನಲ್ಲಿ ಈಗಾಗಲೇ ನಂದಿ ವಿಗ್ರಹವನ್ನು ಅಳವಡಿಸಿರುವುದು ಅತ್ಯಂತ ಸೂಕ್ತವಾಗಿದೆ. ನಂದಿ ಮುದ್ರಿಕೆ ಭಾರತದ ಪ್ರಾಚೀನ ನಾಗರಿಕತೆ, ಸಂಸ್ಕೃತಿಯ ಪ್ರತೀಕ ಎನ್ನಬಹುದು. ಸಿಂಧೂ ನದಿಯ ನಾಗರಿಕರು 'ನಂದಿ'ಯನ್ನು ಪವಿತ್ರ ಪಶು ಎಂದು ನಂಬಿದ್ದರು. ಅಷ್ಟೇ ಅಲ್ಲದೆ ಭಾರತ ದೇಶವು ಪ್ರಾಚೀನ ಕಾಲದಿಂದಲೂ ಕೃಷಿ ಪ್ರಧಾನ ಸಂಸ್ಕೃತಿಯನ್ನು ಹೊಂದಿದೆ. ರೈತರು ನಂದಿಯನ್ನು ಕೃಷಿಯ ಸಹಾಯಕ್ಕೆ ಬಳಸಿಕೊಂಡು ಬಂದಿದ್ದಾರೆ. ನಂದಿಗೆ ಪ್ರಮುಖ ಸ್ಥಾನ ನೀಡಿದ್ದಾರೆ. ರೈತರ ಪ್ರತೀಕವಾದ ನಂದಿಯು ದೇಶದ ಪ್ರತೀಕ ಆಗುವುದಾದರೆ ತಪ್ಪೇನು? ರಾಷ್ಟ್ರಲಾಂಛನವಾಗಿ ಸಿಂಹ ಇದ್ದೇ ಇದೆ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

ಇದೇ ನಿಜವಾದ ಸಮಾಜಶಾಸ್ತ್ರ...

ನೂತನ ಸಂಸತ್ ಭವನದ ಉದ್ಘಾಟನಾ ಸಮಾರಂಭಕ್ಕೆ ದೇಶದ ಮೊದಲ ಪ್ರಜೆಯಾದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಆಹ್ವಾನಿಸದೇ ಇರುವುದನ್ನು ಅಕ್ಷಮ್ಯ ನಡೆ ಎಂದೇ ಪರಿಗಣಿಸಬೇಕಿದೆ. ಶ್ರೇಷ್ಠತೆಯ ಹುನ್ನಾರದ ಮನಸ್ಸುಗಳು ಇಲ್ಲಿ ಅಂತರ್ಗತವಾಗಿ ಕೆಲಸ ಮಾಡಿವೆ ಎಂದೇ ನಾವು ಭಾವಿಸಬೇಕಿದೆ. ಅಸ್ಪೃಶ್ಯತಾ ಮನೋಭಾವದ ಮನಸ್ಸುಗಳು ಸಮಾಜದಿಂದ ತೊಲಗದ ವಿನಾ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆ ಬರಲಾರದು. ಈ ದಿಸೆಯಲ್ಲಿ ಪ್ರಜ್ಞಾವಂತ ಮನಸ್ಸುಗಳು ಚೌಕಾಸಿಯಿಲ್ಲದೆ ಸಮಾಜದ ತರತಮ ತೊಡೆದುಹಾಕಲು ಮುಂದಾಗಬೇಕಿದೆ. ಇದೇ ನಿಜವಾದ ಸಮಾಜಶಾಸ್ತ್ರವೆಂದು ಪರಿಗಣಿಸಬೇಕಿದೆ.

ಹೊರೆಯಾಲ ದೊರೆಸ್ವಾಮಿ, ಮೈಸೂರು

ಸಂಸತ್ ಭವನ: ದಕ್ಷಿಣಕ್ಕೆ ಬೇಕಿತ್ತು ಆದ್ಯತೆ

ಈಗಾಗಲೇ ಸಂಸತ್ ಭವನ ಇರುವ ದೆಹಲಿಯಲ್ಲಿಯೇ ಮತ್ತೊಂದು ಸಂಸತ್ ಭವನ ನಿರ್ಮಿಸುವ ಅವಶ್ಯಕತೆ ಇರಲಿಲ್ಲ. ಹೊಸ ಭವನವನ್ನು ದಕ್ಷಿಣ ಭಾರತದ ಯಾವುದಾದರೂ ಒಂದು ಸ್ಥಳದಲ್ಲಿ ನಿರ್ಮಿಸಿದ್ದರೆ ದಕ್ಷಿಣದ ರಾಜ್ಯಗಳ ಸಮಸ್ಯೆಗಳನ್ನು ಚರ್ಚಿಸಲು ಸೂಕ್ತವಾಗುತ್ತಿತ್ತು. ಭಾರತಕ್ಕೆ ಮುಂಗಾರು ಬರುವುದು ಮೊದಲು ದಕ್ಷಿಣ ಭಾರತದ ರಾಜ್ಯಗಳಲ್ಲಿ. ಆದ್ದರಿಂದ ಮುಂಗಾರು ಅಧಿವೇಶನವನ್ನು ದಕ್ಷಿಣದ ಸಂಸತ್ ಭವನದಲ್ಲಿ ಮತ್ತು ಚಳಿಗಾಲದ ಅಧಿವೇಶನವನ್ನು ದೆಹಲಿಯಲ್ಲಿ ನಡೆಸುವ ಮೂಲಕ ಋತುಮಾನ ಆಧಾರಿತವಾಗಿ, ಜೀವನೋಪಾಯದ ಸಮಸ್ಯೆಗಳಿಗೆ ಪರಿಹಾರ ಮತ್ತು ಪ್ರಾದೇಶಿಕ ಅಭಿವೃದ್ಧಿಯನ್ನು ಸಾಧ್ಯವಾಗಿಸಬಹುದಿತ್ತು.

ಕಲ್ಮೇಶ್ ಬಿರಾದಾರ, ವಿಜಯಪುರ

ಕ್ರಮ ಕೈಗೊಳ್ಳದಿರುವುದೇಕೆ?

ದೆಹಲಿಯ ನೂತನ ಸಂಸತ್ ಭವನದ ಎದುರು ಪ್ರತಿಭಟನೆ ನಡೆಸಲು ಮುಂದಾದ ಕುಸ್ತಿಪಟುಗಳನ್ನು ಪೊಲೀಸರು ಬಲಪ್ರಯೋಗ ನಡೆಸಿ ತಡೆದದ್ದು ಖಂಡನೀಯ. ಈ ವೇಳೆ, ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ ಭವನದ ಒಳಗೆ ಭಾಷಣ ಮಾಡುತ್ತಾ, ಪುರೋಹಿತರ ಜೊತೆಯಲ್ಲಿದ್ದರೆ, ಹೊರಗೆ, ದೇಶದ ಗೌರವವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾಪಾಡಿದ ಕುಸ್ತಿಪಟುಗಳು ಮತ್ತು ಪೊಲೀಸರ ನಡುವೆ 'ಕುಸ್ತಿ' ನಡೆಯುತ್ತಿತ್ತು.

ಪೈಲ್ವಾನರಿಗೆ ನ್ಯಾಯ ಕೊಡಿಸಲು ಆಗದೇ ಇರುವುದು ಯಾಕೆಂಬ ಪ್ರಶ್ನೆ ಮೂಡುತ್ತಿದೆ. ಪ್ರಧಾನಿಗೆ ಇದು ಕಾಣುತ್ತಿಲ್ಲವೇ? ಲೈಂಗಿಕ ದೌರ್ಜನ್ಯದ ಆರೋಪ ಎದುರಿಸುತ್ತಿರುವ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಬಿಜೆಪಿ ಸಂಸದ ಎಂಬ ಒಂದೇ ಕಾರಣಕ್ಕೆ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲವೇ? ಆದಷ್ಟು ಬೇಗ ಕುಸ್ತಿಪಟುಗಳಿಗೆ ನ್ಯಾಯ ದೊರಕಲಿ, ಪ್ರಜಾಪ್ರಭುತ್ವ ಗೆಲ್ಲಲಿ.

ಪ್ರದೀಪ್ ಕೊಲ್ವೆದಬೈಲ್, ಬೆಳ್ತಂಗಡಿ

ಮನೆ ಕಟ್ಟೋಕೆ ಮುಂಚೇನೆ...

ಬಿಜೆಪಿ ಶಾಸಕ ಆರ್.ಅಶೋಕ ಅವರು, 'ನಾನು ಸಹ 200 ಯೂನಿಟ್‌ವರೆಗಿನ ವಿದ್ಯುತ್ ಬಿಲ್ ಕಟ್ಟುವುದಿಲ್ಲ. ನೀವೂ ಕಟ್ಟಬೇಡಿ. ಯಾರು ಫ್ಯೂಸ್ ತೆಗೆಯಲು ಬರುತ್ತಾರೊ ನೋಡೋಣ' ಎಂದು ಪ್ರಚೋದನಾತ್ಮಕ ಕರೆ ಕೊಟ್ಟಿರುವುದು (ಪ್ರ.ವಾ., ಮೇ 27) ಅರಾಜಕತೆಗೆ ಕಾರಣವಾಗುತ್ತದೆ. 'ಮನೆ ಕಟ್ಟೋಕೆ ಮುಂಚೇನೆ ಇಲಿಗಳ ಅವಾಂತರ' ಎನ್ನುವ ಹಾಗೆ ಆಗಿದೆ ಇದು. ಯಾವ ದಿನಾಂಕದಿಂದ ಈ ಹೊಸ ಗ್ಯಾರಂಟಿ ನಿಯಮ ಅನ್ವಯವಾಗುತ್ತದೆ ಎಂದಾದರೂ ಪ್ರಕಟಣೆ ಆಗಬೇಕಲ್ಲವೆ? ಅಲ್ಲಿಂದಾಚೆಗಿನ ವಿದ್ಯುತ್ ಶುಲ್ಕ ಕಟ್ಟುವುದರ ಅಗತ್ಯ ಇಲ್ಲ ಎಂಬ ಅಂಶ ಎಂತಹ ಸಾಮಾನ್ಯನಿಗೂ ಅರ್ಥವಾಗುವಂತಹುದು. ಈಗಲೇ ಕಟ್ಟಬೇಡಿ ಎಂದು ಚಿತಾವಣೆ ಮಾಡುವುದು ರಾಜಕಾರಣದಲ್ಲಿನ ಪರಿಪಕ್ವತೆಯ ಲೋಪದ ಸೂಚಕವಾಗುತ್ತದೆ. 'ಒಂದುವೇಳೆ ವಿದ್ಯುತ್ ಬಿಲ್ ಕಟ್ಟಿದರೆ, ಬಸ್ ಟಿಕೆಟ್ ತೆಗೆದುಕೊಂಡರೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರಿಗೆ ಅವಮಾನ ಮಾಡಿದಂತಾಗುತ್ತದೆ' ಎಂಬ ವ್ಯಂಗ್ಯದ ಮೂಲಕ ಮಾಡುವ ಪುಸಲಾವಣೆಯು ವಿರೋಧ ಪಕ್ಷದ ಶಕ್ತಿ, ಘನತೆಯನ್ನೇ ಕಳೆದುಬಿಡುತ್ತದೆ.

ಇವರು, ಒಬ್ಬೊಬ್ಬರ ಖಾತೆಗೆ ₹ 15 ಲಕ್ಷ ಹಾಕದಿದ್ದುದನ್ನು, ವಾರ್ಷಿಕವಾಗಿ ಎರಡು ಕೋಟಿ ಉದ್ಯೋಗ ಕೊಡುವಲ್ಲಿ ವಿಫಲವಾದದ್ದನ್ನು, ಭ್ರಷ್ಟಾಚಾರವನ್ನು ನಾಲ್ಮಡಿಗೊಳಿಸಿದ್ದನ್ನು, ಕಪ್ಪುಹಣ ಹೊರತೆಗೆಯುವಲ್ಲಿ ಸೋತದ್ದನ್ನು, ಒಂದು ಸಮುದಾಯದ ಜನ ಬದುಕಲಾಗದಂತೆ ಸತಾಯಿಸಿದ್ದನ್ನು, ಕೃಷಿ ಕಾಯ್ದೆ ಮತ್ತು ಗೋಹತ್ಯಾ ನಿಷೇಧದಿಂದ ರೈತರನ್ನು ಸಂಕಷ್ಟಕ್ಕೀಡು ಮಾಡಿದ್ದನ್ನು, ಬೆಲೆಯೇರಿಕೆಯಿಂದ ಬಡವರು ನರಳುವಂತೆ ಮಾಡಿದ್ದನ್ನು, ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾಗಿ ಪಠ್ಯಪುಸ್ತಕಗಳ ಪರಿಷ್ಕರಣೆಗೆ ಸಂಬಂಧಿಸಿದಂತೆ ಎಸಗಿದ ಹಲವು ಕೇಸರೀಕರಣದ ಹುಚ್ಚಾಟಗಳನ್ನು, ಮೀಸಲಾತಿಯ ಎಡವಟ್ಟುಗಳನ್ನು, ಉರಿಗೌಡ ಮತ್ತು ನಂಜೇಗೌಡರ ಕಪೋಲಕಲ್ಪನೆಗಳನ್ನು, ಶಾಸಕರ ಸಾಮೂಹಿಕ ಪಕ್ಷಾಂತರದಿಂದ ಗದ್ದುಗೆ ಗಟ್ಟಿಗೊಳಿಸಿಕೊಂಡದ್ದನ್ನು ಜನ ಇನ್ನೂ ಮರೆತಿಲ್ಲ! ಆದ್ದರಿಂದ ಹೀಗೆ ಗೊತ್ತು ಗುರಿಯಿಲ್ಲದೆ ಕಲ್ಲೆಸೆಯುವ ಬದಲು, ಸರ್ಕಾರದ ಮೇಲೆ ಹದ್ದುಗಣ್ಣಿಟ್ಟು ಅವರ ಗಂಭೀರವಾದ ಲೋಪಗಳನ್ನು ಎತ್ತಿ ತೋರಿಸಿ ಕಾಂಗ್ರೆಸ್ಸಿಗರ ಜಂಘಾಬಲವೇ ಉಡುಗುವ ಹಾಗೆ ಮಾಡಬಹುದು. ಆಗ ಸರ್ಕಾರವೂ ವಿರೋಧ ಪಕ್ಷಕ್ಕೆ ಹೆದರಿ ಹೆಜ್ಜೆ ಹಾಕುವುದರಿಂದ ಕರ್ನಾಟಕಕ್ಕೆ ಮಾದರಿ ಆಡಳಿತ ಲಭ್ಯವಾದೀತು!

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕ್ರೀಡಾ ಕ್ಷೇತ್ರದಲ್ಲಿ ಲೈಂಗಿಕ ದೌರ್ಜನ್ಯ

ಆಂತರಿಕ ದೂರು ಸಮಿತಿಯೇ ಇಲ್ಲ

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಪ್ರಕಾರ ಕ್ರೀಡಾ ಸಂಸ್ಥೆಗಳನ್ನೂ ಕೆಲಸದ ಸ್ಥಳ ಎಂದೇ ಪರಿಗಣಿಸಲಾಗುತ್ತದೆ. ಹೀಗಿರುವಾಗ ಕ್ರೀಡಾ ಸಂಸ್ಥೆಗಳಲ್ಲೂ ಲೈಂಗಿಕ ದೌರ್ಜನ್ಯ ತಡೆಗೆ ಆಂತರಿಕ ದೂರು ಸಮಿತಿ ರಚಿಸಬೇಕಿರುವುದು ಕಡ್ಡಾಯ. ಆದರೆ, ಭಾರತೀಯ ಕುಸ್ತಿ ಫೆಡರೇಷನ್‌ನಲ್ಲಿ ಅಂತಹ ಸಮಿತಿಯೇ ಇಲ್ಲ



ಸಂಸತ್ ಭವನದ ಬಳಿಗೆ ಹೋಗುತ್ತಿದ್ದ ಮಹಿಳಾ ಕುಸ್ತಿಪಟುಗಳಾದ ವಿನೇಶಾ ಪೋಗಾಟ್ ಹಾಗೂ ಸಂಗೀತಾ ಪೋಗಾಟ್ ಅವರನ್ನು ತಡೆದ ಭದ್ರತಾ ಪಡೆಗಳು –ಪಿಟಿಐ ಚಿತ್ರ

● ಸುಕೃತ ಎಸ್.

ತಿಂಗಳುಗಳಿಂದ ನಡೆಯುತ್ತಿರುವ ಮಹಿಳಾ ಕುಸ್ತಿಪಟುಗಳ ಹೋರಾಟವು ಗಂಭೀರವಾದ ಹಲವಾರು ವಿಷಯಗಳನ್ನು ಸಾಮಾನ್ಯ ಜನರ ಮುಂದಿಟ್ಟಿದೆ. ಈ ಪ್ರತಿಭಟನೆಯು ಹಲವು ಸ್ತರದ ಚರ್ಚೆಗಳನ್ನು ಹುಟ್ಟುಹಾಕಿದೆ. ದೇಶಕ್ಕಾಗಿ ಪದಕ ಗೆದ್ದವರೂ ನ್ಯಾಯಕ್ಕಾಗಿ ಬೀದಿಗಿಳಿದು ಹೋರಾಡುತ್ತಿರುವುದು ಕ್ರೀಡಾ ಕ್ಷೇತ್ರದಲ್ಲಿನ ಹಲವು ನ್ಯೂನತೆಗಳತ್ತ ಬೊಟ್ಟು ಮಾಡಿದೆ.

ಭಾರತೀಯ ಕುಸ್ತಿ ಫೆಡರೇಶನ್‌ನ ಅಧ್ಯಕ್ಷರಾಗಿದ್ದವರ ವಿರುದ್ಧ ಕುಸ್ತಿಪಟುಗಳು ಮಾಡಿರುವ, ಲೈಂಗಿಕ ದೌರ್ಜನ್ಯದ ಆರೋಪವು ಗಂಭೀರವಾದದು. ಈ ಆರೋಪ ಮತ್ತು ದೂರು ನೀಡಿದ ಪ್ರಕ್ರಿಯೆಗಳ ಬಗ್ಗೆಯೇ ಹಲವು ಆಕ್ಷೇಪಗಳು ವ್ಯಕ್ತವಾಗಿವೆ. ಆದರೆ, ಸ್ಥಾಪಿತ ಕಾನೂನಿನ ಪ್ರಕಾರ ದೂರು ನೀಡುವ ಮತ್ತು ಅದನ್ನು ಪರಿಹರಿಸುವ ವ್ಯವಸ್ಥೆಯೇ ಕುಸ್ತಿ ಫೆಡರೇಷನ್‌ನಲ್ಲಿ ಇಲ್ಲ ಎಂಬುದನ್ನು ಈ ಹೋರಾಟವು ಬಹಿರಂಗಪಡಿಸಿದೆ. ಈಗಾಗಲೇ ಇರುವ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಕಾನೂನುಗಳು ಕ್ರೀಡಾಕ್ಷೇತ್ರದಲ್ಲಿ ಎಷ್ಟರಮಟ್ಟಿಗೆ ಜಾರಿಯಾಗಿವೆ ಎನ್ನುವುದನ್ನೂ ಈ ಹೋರಾಟ ಬಿಚ್ಚಿಟ್ಟಿದೆ.

ದೆಹಲಿಯ ನಿರ್ಭಯ ಪ್ರಕರಣದ ನಂತರ ಮಹಿಳೆಯರ ಮೇಲಿನ ಅತ್ಯಾಚಾರ, ಲೈಂಗಿಕ ದೌರ್ಜನ್ಯದ ಕುರಿತು ಸಮಾಜ ಹೆಚ್ಚು ಸೂಕ್ಷ್ಮವೂ ಜಾಗೃತವೂ ಆಗಿದೆ. ಕೆಲಸದ ಸ್ಥಳಗಳಲ್ಲಿಯೂ ಮಹಿಳೆಯರು ಹೆಚ್ಚು ಸುರಕ್ಷಿತವಾಗಿ ಇರಲು 2013ರಲ್ಲಿ 'ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆ, ನಿಷೇಧ ಮತ್ತು ಪರಿಹಾರ ಕಾಯ್ದೆ'ಯನ್ನು ಅನುಷ್ಠಾನಗೊಳಿಸಲಾಗಿದೆ. ಪ್ರತಿ ಸಂಸ್ಥೆಯಲ್ಲೂ ಆಂತರಿಕ ದೂರು ಸಮಿತಿ ಇರಬೇಕು ಎನ್ನುವುದು ಈ ಕಾಯ್ದೆಯ ಬಹು ಮುಖ್ಯವಾದ ಅಂಶ. ಆದರೆ, ಇದು ಇಂದಿಗೂ ಹಲವು ಸಂಸ್ಥೆಗಳಲ್ಲಿ ಇಲ್ಲ. ಈ ಅಪವಾದಕ್ಕೆ ಕ್ರೀಡಾ ಕ್ಷೇತ್ರವೂ ಹೊರತಲ್ಲ. ದೇಶದಲ್ಲಿರುವ ಹಲವು ಕ್ರೀಡಾ ಸಂಸ್ಥೆಗಳಲ್ಲಿ ಇಂತಹ ಸಮಿತಿಗಳೇ ಇಲ್ಲ. ಕುಸ್ತಿಪಟುಗಳ ಹೋರಾಟ ಆರಂಭವಾದ ನಂತರವಷ್ಟೇ ಕೆಲವಾರು ಕ್ರೀಡಾ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿ ರಚಿಸಲಾಗಿದೆ.

ಕುಸ್ತಿಪಟುಗಳ ಹೋರಾಟದ ನಂತರ, ಅವರು ಮಾಡಿರುವ ಆರೋಪಗಳ ಬಗ್ಗೆ ತನಿಖೆ ನಡೆಸಲು ಕ್ರೀಡಾ ಸಚಿವಾಲಯವು ತಜ್ಞರ ಸಮಿತಿ ರಚಿಸಿತ್ತು. ಸಮಿತಿಯ ವರದಿಯು ಹಲವು ವಿಚಾರಗಳನ್ನು ಮುಂದಿಟ್ಟಿದ್ದರೂ, ಲೈಂಗಿಕ ದೌರ್ಜನ್ಯ ತಡೆಗಾಗಿ 'ಆಂತರಿಕ ದೂರು ಸಮಿತಿ'ಯನ್ನು ಕುಸ್ತಿ ಫೆಡರೇಷನ್ ಹೊಂದಿಲ್ಲ ಎಂಬುದನ್ನು ನಿಚ್ಚಳವಾಗಿ ಹೇಳಿತ್ತು. ಇದುವರೆಗೂ ಕುಸ್ತಿ ಫೆಡರೇಷನ್‌ನಲ್ಲಿ ಆಂತರಿಕ ದೂರು ಸಮಿತಿ ರಚನೆಯಾಗಿಲ್ಲ.

ಆದರೆ ಫೆಡರೇಷನ್‌ನಲ್ಲಿ 'ನೈತಿಕ ಸಮಿತಿ' ಎಂಬ ಸಮಿತಿ ಇದೆ. ಲೈಂಗಿಕ ದೌರ್ಜನ್ಯ ಕುರಿತ ದೂರುಗಳ ನಿರ್ವಹಣೆಯ ಜವಾಬ್ದಾರಿಯನ್ನೂ ಅದೇ ಸಮಿತಿಗೆ ವಹಿಸಲಾಗಿದೆ. ಇದಕ್ಕಾಗಿ ಪ್ರತ್ಯೇಕವಾದ 'ಆಂತರಿಕ ದೂರು ಸಮಿತಿ' ಇಲ್ಲ. ಅಂತಹ ಸಮಿತಿ ಇಲ್ಲದಿರುವುದೂ ಈ ಪ್ರಕರಣದಲ್ಲಿ ದೊಡ್ಡ ಹಿನ್ನಡೆಯಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

'ಸಮಿತಿ ರಚಿಸಿ'

ಲೈಂಗಿಕ ದೌರ್ಜನ್ಯದ ಪ್ರಕರಣಗಳು ಕೇವಲ ಕ್ರೀಡಾಕ್ಷೇತ್ರದಲ್ಲಿ ಮಾತ್ರ ಆಗುತ್ತಿಲ್ಲ. ಇದೊಂದು ಸಾಮಾಜಿಕ ಸಮಸ್ಯೆಯಾಗಿದೆ. ಅದೇನೇ ಇದ್ದರು, ಕ್ರೀಡಾಕ್ಷೇತ್ರದಲ್ಲಿ ಲೈಂಗಿಕ ದೌರ್ಜನ್ಯ ತಡೆ ಕಾನೂನಿನ ಕುರಿತು ಅಸಡ್ಡೆ ಇರುವುದು ಸತ್ಯ. ಕೆಲವು ದೂರುಗಳಿಗೆ ಕಠಿಣ ಶಿಕ್ಷೆಯಾಗದೇ ಇದ್ದದ್ದೂ ಇದೆ. ಈ ಮನಃಸ್ಥಿತಿ ಬದಲಾಗಬೇಕು. ಎಲ್ಲ ಫೆಡರೇಷನ್‌ಗಳು ಆಂತರಿಕ ದೂರು ಸಮಿತಿಯನ್ನು ರಚಿಸಿಕೊಳ್ಳಬೇಕು. ಈ ಸಮಿತಿಯು ಸ್ವಾಯತ್ತವಾಗಿರಬೇಕು

ಅಶ್ವಿನಿ ನಾಚಪ್ಪ,
ಅಂತರರಾಷ್ಟ್ರೀಯ ಅಥ್ಲೆಟ್

ಲೈಂಗಿಕ ದೌರ್ಜನ್ಯವೆಂದರೆ...

ಲೈಂಗಿಕ ದೌರ್ಜನ್ಯಕ್ಕೆ ವಿಸ್ತೃತವಾದ ವ್ಯಾಖ್ಯೆ ಇದೆ. 2013ರಲ್ಲಿ ಜಾರಿಗೆ ತರಲಾದ 'ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆ, ನಿಷೇಧ ಮತ್ತು ಪರಿಹಾರ ಕಾಯ್ದೆ'ಯಲ್ಲಿ ಲೈಂಗಿಕ ದೌರ್ಜನ್ಯ ಎಂದರೇನು ಮತ್ತು ಯಾವೆಲ್ಲ ನಡವಳಿಕೆಗಳು ಲೈಂಗಿಕ ದೌರ್ಜನ್ಯದ ವ್ಯಾಪ್ತಿಗೆ ಬರುತ್ತವೆ ಎಂಬುದನ್ನು ವಿವರಿಸಲಾಗಿದೆ.

ಕೆಲವು ಸ್ವರೂಪದ ಮಾತು, ನೋಟ, ನಡೆಗಳೂ ಈ ವ್ಯಾಪ್ತಿಗೆ ಬರುತ್ತವೆ. ಆದರೆ ಅಂತಹ ಕೃತ್ಯಗಳಿಗೆ ಸಾಕ್ಷ್ಯಗಳನ್ನು ಸಂಗ್ರಹ ಕಷ್ಟಸಾಧ್ಯ. ಹೀಗಾಗಿ, ಅಂತಹ ಪ್ರಕರಣಗಳಲ್ಲಿ ಶಿಕ್ಷೆಯಾಗುವುದೇ ಇಲ್ಲ. ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಗೊತ್ತಿದ್ದರೂ ಸಾಕ್ಷ್ಯಗಳ ಕೊರತೆಯಿಂದ ಆರೋಪಿಗಳು ಖುಲಾಸೆಯಾದ ಹಲವು ಪ್ರಕರಣಗಳಿವೆ. ಅಂತಹ ಪ್ರಕರಣಗಳನ್ನೂ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ದಾಖಲಿಸುತ್ತದೆ.

'ಕೆಲಸದ ಸ್ಥಳದಲ್ಲಿ ಮಹಿಳೆಗೆ ಸ್ವೀಕಾರಾರ್ಹವಲ್ಲದ ನಡೆಗಳನ್ನು ಲೈಂಗಿಕ ದೌರ್ಜನ್ಯ ಎನ್ನಲಾಗುತ್ತದೆ' ಎಂದು ಈ ಕಾಯ್ದೆಯ 2 (ಎನ್) ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಅಂತಹ ಕೆಲವು ನಡೆಗಳು ಇಂತಿವೆ

1. ಒತ್ತಾಯದ ಸ್ಪರ್ಶ
2. ಲೈಂಗಿಕ ಕ್ರಿಯೆಗಾಗಿ ಒತ್ತಾಯ ಮಾಡುವುದು
3. ಲೈಂಗಿಕತೆ ಕುರಿತ ಅಸಭ್ಯ ಮಾತುಗಳು
4. ನೀಲಿಚಿತ್ರಗಳನ್ನು ತೋರಿಸುವುದು
5. ಲೈಂಗಿಕತೆ ಮತ್ತು ಲೈಂಗಿಕ ಕ್ರಿಯೆ ಉದ್ದೇಶದ ಯಾವುದೇ ನಡೆಗಳು ಮತ್ತು ಮಾತುಗಳು

ಯಾವೆಲ್ಲಾ ನಡೆಗಳು ಲೈಂಗಿಕ ದೌರ್ಜನ್ಯದ ವ್ಯಾಪ್ತಿಗೆ ಬರುತ್ತವೆ ಎಂಬುದನ್ನು ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವಾಲಯವು ಹೊರತಂದಿರುವ 'ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ತಡೆ, ನಿಷೇಧ ಮತ್ತು ಪರಿಹಾರ ಕಾಯ್ದೆ'ಯ ಕೈಪಿಡಿ'ಯಲ್ಲಿ ವಿವರಿಸಲಾಗಿದೆ.

- ಕೆಲಸದ ಸ್ಥಳದಲ್ಲಿ ಮಹಿಳೆಯರ ಎದುರಲ್ಲಿ, ಅವರಿಗೆ ಕೇಳುವಂತೆ ಲೈಂಗಿಕತೆ ಕುರಿತಂತೆ ಮಾತನಾಡುವುದು ಅಥವಾ ಲೈಂಗಿಕತೆ ಕುರಿತು ಅವರಿಗೆ ಸಲಹೆ ನೀಡುವುದು
- ಮಹಿಳೆಯರ ದೇಹ ಮತ್ತು ವಸ್ತ್ರದ ಬಗ್ಗೆ ಪದೇ ಪದೇ ತುಚ್ಛವಾಗಿ ಮಾತನಾಡುವುದು
- ಅಸಭ್ಯವಾದ ಮತ್ತು ಆಕ್ರಮಣಕಾರಿಯಾದ ಮಾತುಗಳನ್ನು ಆಡುವುದು
- ಮಹಿಳೆಯ ಲೈಂಗಿಕ ಬದುಕಿನ ಬಗ್ಗೆ ಮಾತನಾಡುವುದು, ಪ್ರಶ್ನೆ ಕೇಳುವುದು ಮತ್ತು ಸಲಹೆ ನೀಡುವುದು
- ಲೈಂಗಿಕತೆಯನ್ನು ಪ್ರಚೋದಿಸುವಂತಹ ಚಿತ್ರಗಳು, ಪೋಸ್ಟರ್‌ಗಳು, ಬರಹಗಳು, ಸಂದೇಶಗಳು, ಎಂಎಂಎಸ್‌ಗಳನ್ನು ಕಳುಹಿಸುವುದು. ವಾಟ್ಸ್‌ಆ್ಯಪ್ ಅಥವಾ ಇ–ಮೇಲ್ ಮಾಡುವುದು
- ಲೈಂಗಿಕ ಕ್ರಿಯೆಗೆ ಸಹಕರಿಸುವಂತೆ ಒತ್ತಾಯ ಮಾಡುವುದು, ಆಮಿಷ ಒಡ್ಡುವುದು ಮತ್ತು ಬೆದರಿಕೆ ಒಡ್ಡುವುದು
- ಇಂತಹ ಕೃತ್ಯಗಳನ್ನು ಬಹಿರಂಗ ಮಾಡಬಾರದುಎಂದು ಒತ್ತಾಯ ಹೇರುವುದು ಮತ್ತು ಬೆದರಿಕೆ ಹಾಕುವುದು
- ಸ್ಪರ್ಶಿಸುವುದು, ಗಿಲ್ಲುವುದು, ಕೈಹಿಡಿದುಕೊಳ್ಳುವುದು, ತಬ್ಬಿಕೊಳ್ಳುವುದು, ಮುತ್ತಿಕ್ಕುವುದು (ಇವು ಲೈಂಗಿಕ ಕಿರುಕುಳದ ವ್ಯಾಪ್ತಿಗೂ ಬರುತ್ತವೆ)
- ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ತೀರಾ ಹತ್ತಿರದಲ್ಲಿ ಕೂರುವುದು, ಅನಗತ್ಯವಾಗಿ ದೇಹವನ್ನು ಸ್ಪರ್ಶಿಸಿಕೊಂಡು ಓಡಾಡುವುದು
- ಕೆಲಸದ ಸ್ಥಳದಲ್ಲಿ ಮಹಿಳೆಯರನ್ನು ಹಿಂಬಾಲಿಸುವುದು
- 'ಲೈಂಗಿಕ ಕ್ರಿಯೆಗೆ ಸಹಕರಿಸುವಂತೆ ಆಕೆ ನನ್ನನ್ನು ಕೇಳಿದಳು' ಎಂಬರ್ಥದ ಸುಳ್ಳು ಮಾತುಗಳನ್ನು ಹೇಳುವುದು
- ಮಹಿಳೆಯ ಖಾಸಗಿ ಬದುಕು ಮತ್ತು ಲೈಂಗಿಕತೆ ಬಗ್ಗೆ ವದಂತಿ ಹರಡುವುದು

'ಇಂತಹ ಕೃತ್ಯಗಳು ಒಮ್ಮೆ ನಡೆದಿರಬಹುದು ಅಥವಾ ಪದೇ ಪದೇ ನಡೆದಿರಬಹುದು. ಪ್ರತಿ ಕೃತ್ಯವನ್ನೂ ಪ್ರತ್ಯೇಕ ಕೃತ್ಯ ಎಂದೇ ಪರಿಗಣಿಸಬೇಕಾಗುತ್ತದೆ' ಎಂದು ಈ ಕೈಪಿಡಿಯಲ್ಲಿ ಹೇಳಲಾಗಿದೆ.

ಕಾಯ್ದೆ ಹೇಳುವುದೇನು?

ಕೆಲಸದ ಸ್ಥಳ: ಕಾಯ್ದೆಯ 2ನೇ ಸೆಕ್ಷನ್‌ನಲ್ಲಿ ಕೆಲಸದ ಸ್ಥಳ ಅಂದರೆ ಏನು ಎಂಬುದನ್ನು ವ್ಯಾಖ್ಯಾನಿಸಲಾಗಿದೆ.

ಸರ್ಕಾರದ ಯಾವುದೇ ಇಲಾಖೆ, ಸಂಸ್ಥೆ, ಕಚೇರಿ, ಸರ್ಕಾರದ ಅಧೀನ ಸಂಸ್ಥೆಗಳು, ನೇರವಾಗಿ ಅಥವಾ ಪರೋಕ್ಷವಾಗಿ ಸರ್ಕಾರದಿಂದ ಹಣಕಾಸಿನ ನೆರವು ಪಡೆಯುವ ಸಂಸ್ಥೆ, ನಿಗಮ ಮಂಡಳಿ, ಸಹಕಾರ ಸಂಸ್ಥೆ, ಖಾಸಗಿ ಕ್ಷೇತ್ರದ ಸಂಸ್ಥೆಗಳು, ಎನ್‌ಜಿಒಗಳು, ಶಿಕ್ಷಣ ಸಂಸ್ಥೆಗಳು, ಮನರಂಜನಾ ಕ್ಷೇತ್ರ, ಕಾರ್ಖಾನೆಗಳು, ಆಸ್ಪತ್ರೆಗಳು, ನರ್ಸಿಂಗ್ ಹೋಮ್ ಮುಂತಾದವುಗಳು ಕೆಲಸದ ಸ್ಥಳಗಳು ಎಂದು ಕಾಯ್ದೆಯಲ್ಲಿ ವಿವರಿಸಲಾಗಿದೆ.

ಇದರೊಂದಿಗೆ ಕ್ರೀಡಾ ಕ್ಷೇತ್ರಕ್ಕೆ ಸಂಬಂಧಿಸಿದ ಕೆಲಸದ ಸ್ಥಳಗಳ ಬಗ್ಗೆಯೂ ಕಾಯ್ದೆಯಲ್ಲಿ ಉಲ್ಲೇಖವಿದೆ. ಯಾವುದೇ ಕ್ರೀಡಾ ಸಂಸ್ಥೆ, ಕ್ರೀಡಾಂಗಣ, ಕ್ರೀಡಾ ಸಂಕೀರ್ಣ ಅಥವಾ ಸ್ಪರ್ಧೆ ಅಥವಾ ಕ್ರೀಡಾಕೂಟ ನಡೆಯುವ ಸ್ಥಳ, ವಸತಿಯುಕ್ತ ಕ್ರೀಡಾ ತರಬೇತಿ ಕೇಂದ್ರಗಳು ಹೀಗೆ ಈ ಎಲ್ಲವೂ ಕೆಲಸದ ಸ್ಥಳಗಳು ಎಂದು ವ್ಯಾಖ್ಯಾನಿಸಲಾಗಿದೆ.

ಯಾರು ಈ ಮಾಲೀಕ/ಉದ್ಯೋಗದಾತ: ಮೇಲೆ ಹೇಳಿದ ಕೆಲಸದ ಸ್ಥಳಗಳ ಮುಖ್ಯಸ್ಥನೇ ಮಾಲೀಕ. ಮಾಲೀಕ ಅಲ್ಲದಿದ್ದರೆ, ಆ ಕೆಲಸದ ಸ್ಥಳದ ಜವಾಬ್ದಾರಿ ಹೊತ್ತಿರುವವನು, ನಿರ್ವಹಿಸುವವನು, ಮೇಲ್ವಿಚಾರಣೆ ನಡೆಸುವವನು, ಇಡೀ ಸ್ಥಳವನ್ನು ತನ್ನ ನಿಯಂತ್ರಣದಲ್ಲಿ ಇರಿಸಿಕೊಂಡವನು– ಕಾಯ್ದೆಯಲ್ಲಿ ಈ ರೀತಿಯಾಗಿ ಮಾಲೀಕನನ್ನು ವಿವರಿಸಲಾಗಿದೆ.

ಆಂತರಿಕ ದೂರು ಸಮಿತಿ

ಎಲ್ಲ ಕೆಲಸದ ಸ್ಥಳಗಳಲ್ಲೂ ಆಂತರಿಕ ದೂರು ಸಮಿತಿಯನ್ನು ಕಡ್ಡಾಯವಾಗಿ ರಚಿಸಬೇಕು ಎಂದು ಕಾಯ್ದೆಯಲ್ಲಿ ಹೇಳಲಾಗಿದೆ. ಜೊತೆಗೆ, ಈ ಸಮಿತಿಯಲ್ಲಿ ಯಾರ‍್ಯಾರು ಇರಬೇಕು ಎಂದೂ ವಿವರಿಸಲಾಗಿದೆ.

- ಕೆಲಸದ ಸ್ಥಳದಲ್ಲಿ ಇರುವ ಎಲ್ಲರಿಗಿಂತ ಹಿರಿಯರಾದ ಮಹಿಳಾ ಉದ್ಯೋಗಿಯು ಈ ಸಮಿತಿಯ ಅಧ್ಯಕ್ಷರಾಗಿರಬೇಕು. ಒಂದು ವೇಳೆ ಹಿರಿಯರು ಇಲ್ಲದಿದ್ದರೆ, ಬೇರೆ ಆಡಳಿತ ಕಚೇರಿಯಲ್ಲಿರುವ ಹಿರಿಯ ಮಹಿಳೆಯನ್ನು ನೇಮಕ ಮಾಡಬೇಕು
- ಲೈಂಗಿಕ ದೌರ್ಜನ್ಯದ ಕುರಿತು ಹೆಚ್ಚು ಕೆಲಸ ಮಾಡಿರುವ ಎನ್‌ಜಿಒದಲ್ಲಿ ಕೆಲಸ ಮಾಡಿದ ಅನುಭವ ಇರುವ ಮಹಿಳೆಯೂ ಈ ಸಮಿತಿಯಲ್ಲಿರಬೇಕು. ಜೊತೆಗೆ ಕಾನೂನು ತಜ್ಞರಾದ ಒಬ್ಬರು ಇರಬೇಕು
- ಸಮಿತಿಯ ಒಟ್ಟು ಸದಸ್ಯರಲ್ಲಿ ಅರ್ಧದಷ್ಟು ಮಹಿಳೆಯರೇ ಇರಬೇಕು

ಕುಸ್ತಿ ಫೆಡರೇಷನ್‌ನಲ್ಲಿ ಯಾವ ಸಮಿತಿ ಇದೆ?

ಇದಾಗಲೇ ಹೇಳಿದ ಹಾಗೆ, ಕುಸ್ತಿ ಫೆಡರೇಷನ್‌ನಲ್ಲಿ ಆಂತರಿಕ ದೂರು ಸಮಿತಿ ಎನ್ನುವ ಯಾವ ಸಮಿತಿಯೂ ಇಲ್ಲ. ಇಲ್ಲಿ ಇರುವುದು 'ನೈತಿಕ ಸಮಿತಿ'. ಕ್ರೀಡಾಪಟುಗಳ ನೈತಿಕ ನಡಾವಳಿಗಳು, ನ್ಯಾಯಯುತವಾಗಿ ಆಟವಾಡುವುದು, ಉದ್ದೀಪನ ಮದ್ದು ಸೇವನೆ, ಮ್ಯಾಚ್ ಫಿಕ್ಸಿಂಗ್, ತಪ್ಪು ವಯಸ್ಸಿನ ಉಲ್ಲೇಖ ಮತ್ತು ಮಹಿಳೆಯರ ಮೇಲಾಗುವ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟಲು ಈ ಸಮಿತಿಯನ್ನು ರಚಿಸಲಾಗಿದೆ ಎಂದು ಫೆಡರೇಷನ್ ಹೇಳಿಕೊಂಡಿದೆ.

ಆಂತರಿಕ ದೂರು ಸಮಿತಿಯನ್ನು ರಚನೆ ಮಾಡದ ಕಾರಣಕ್ಕೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಫೆಡರೇಷನ್‌ಗೆ ಮೇ 11ರಂದು ನೋಟಿಸ್ ನೀಡಿದೆ.

ಈ ಸಮಿತಿಯಲ್ಲಿ ಇರುವವರು ಯಾರು?: ಕಾಯ್ದೆಯಲ್ಲಿ ಹೇಳಿದ ರೀತಿಯಲ್ಲಿ ಈ ಸಮಿತಿಯ ರಚನೆ ನಡೆದಿಲ್ಲ. ಬಹಳ ಮುಖ್ಯವಾಗಿ ಕಾಯ್ದೆಯಲ್ಲಿ ಹೇಳಿದ ಹಾಗೆ ಇರುವ ಸಮಿತಿ ಕೂಡ ಇದಲ್ಲ. ಸಾಕ್ಷಿ ಮಲಿಕ್ ಕೂಡ ಈ ಸಮಿತಿಯ ಸದಸ್ಯೆ ಎನ್ನುವುದು ಗಮನಿಸಬೇಕಾದ ಅಂಶವಾಗಿದೆ.

- **ಅಧ್ಯಕ್ಷ** : ವಿ.ಎನ್. ಪ್ರಸೂದ್, ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ
- **ಸಂಚಾಲಕ** : ಜೈ ಪ್ರಕಾಶ್, ಫೆಡರೇಷನ್‌ನ ಸಂಚಾಲಕ
- **ಸದಸ್ಯರು** : ವಿಶಾಲ್ ಸಿಂಗ್, ಕಾರ್ಯಕಾರಿ ಸದಸ್ಯ
  ದೇವೇಂದ್ರ ಕುಮಾರ್ ಸಾಹು, ಫೆಡರೇಷನ್‌ನ ಕಾರ್ಯಕಾರಿ ಸದಸ್ಯ
  ಸಾಕ್ಷಿ ಮಲಿಕ್, ಅರ್ಜುನ/ಧ್ಯಾನ್‌ಚಂದ್ ಖೇಲ್ ಪ್ರಶಸ್ತಿ ವಿಜೇತೆ

ಆಧಾರ: ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆ ಕಾಯ್ದೆ, ಮಹಿಳಾ ಮಕ್ಕಳ ಕಲ್ಯಾಣ ಸಚಿವಾಲಯದ ಕೈಪಿಡಿ, ಎನ್‌ಸಿಆರ್‌ಬಿ ವರದಿಗಳು, ಪಿಟಿಐ

'ಮಹಿಳೆಯರಿಗೆ ಇದೆ ಹಲವು ತೊಡಕು'

ಹೆಣ್ಣುಮಗಳೊಬ್ಬಳು ಕ್ರೀಡಾಕ್ಷೇತ್ರದಲ್ಲಿ ಸಾಧನೆ ಮಾಡುತ್ತಾಳೆ ಅಂತಾದರೆ ಅದರ ಹಿಂದೆ ಹಲವು ವರ್ಷಗಳ ಹೋರಾಟ ಇರುತ್ತದೆ. ಕ್ರೀಡೆಯನ್ನು ವೃತ್ತಿಯಾಗಿ ಸ್ವೀಕರಿಸಬೇಕು ಅಂತಾದರೆ, ಹೆಣ್ಣುಮಕ್ಕಳಿಗೆ ಬಹಳ ತೊಂದರೆ, ತೊಡಕುಗಳಿವೆ. ಹೆಣ್ಣುಮಕ್ಕಳು ಮೊದಲಿಗೆ ಮನೆಯವರನ್ನು ಒಪ್ಪಿಸಬೇಕು. ನಂತರ ಸಮಾಜವನ್ನು ಒಪ್ಪಿಸಬೇಕು. ಹೇಗೊ ಈ ಎಲ್ಲ ತೊಡಕುಗಳನ್ನು ದಾಟಿದ ಮೇಲೆ ಮದುವೆ ಆಗುವ ವಯಸ್ಸಿನಲ್ಲಿ, ಮದುವೆಯಾದ ಮೇಲೆ ಕ್ರೀಡೆಯನ್ನು ಬಿಟ್ಟುಬಿಡುವ ಹೆಣ್ಣುಮಕ್ಕಳ ಸಂಖ್ಯೆ ದೊಡ್ಡ ಮಟ್ಟದಲ್ಲಿದೆ. ಮದುವೆ ಆದ ಮೇಲಂತೂ ಮಹಿಳೆಯೊಬ್ಬಳು ಕ್ರೀಡೆಯಲ್ಲಿ ಮುಂದುವರಿಯುವುದು ಕಷ್ಟಸಾಧ್ಯವೇ ಸರಿ. ಆಟವಾಡುವಾಗ ತುಂಡು ತುಂಡು ಬಟ್ಟೆ ತೊಡಬೇಕು. ನಮ್ಮ ಮನೆ ಮಕ್ಕಳು ಹೀಗೆಲ್ಲಾ ಮೈ ತೋರಿಸುವುದು ಸರಿಯಲ್ಲ. ದೂರದ ಊರುಗಳಿಗೆ ಹೋಗಬೇಕಾಗುತ್ತದೆ. ಆದ್ದರಿಂದ ಕ್ರೀಡೆಯನ್ನು ಬಿಟ್ಟುಬಿಡು ಎನ್ನುವ ಕುಟುಂಬಗಳೂ ಇವೆ. ಈ ಎಲ್ಲ ಕಾರಣಗಳಿಂದಲೇ ಹೆಣ್ಣುಮಕ್ಕಳು ಕ್ರೀಡೆಯನ್ನು ವೃತ್ತಿಯಾಗಿ ಸ್ವೀಕರಿಸುವುದು ಕಡಿಮೆ. ಶಾಲಾ–ಕಾಲೇಜು ಮಟ್ಟಕ್ಕೇ ತಮ್ಮ ಆಸಕ್ತಿಯನ್ನು ತೊರೆದು ಬಿಡುತ್ತಾರೆ

ಪುಷ್ಪಾ ರಮೇಶ್, 2004ರ ಏಷಿಯನ್ ಗೇಮ್ಸ್ ಪವರ್ ಲಿಫ್ಟಿಂಗ್ ಬೆಳ್ಳಿ ಪದಕ ವಿಜೇತೆ, ಸಾಗರ

'ಕ್ರಮ ತೆಗೆದುಕೊಳ್ಳದಿರುವುದು ಅಪಾಯಕಾರಿ'

'**ಕುಸ್ತಿಪಟುಗಳ** ಹೋರಾಟ ಮತ್ತು ಅವರು ಹೇಳುತ್ತಿರುವ ಹಲವು ವಿಷಯಗಳನ್ನು ಗಮನಿಸಿದರೆ, ನಮಗೆ ಭಯವಾಗುತ್ತದೆ. ತಾನು ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಸಾಧನೆ ಮಾಡಬೇಕು ಎಂದು ನನ್ನ ಮಗಳೇ ಬಯಸಿದ್ದಳು. ಅವಳ ಬಯಕೆಯನ್ನು ನಾವು ನಿರಾಕರಿಸಲಿಲ್ಲ; ಈಗಲೂ ನಿರಾಕರಿಸುವುದಿಲ್ಲ. ಆದರೆ, ಹೆಣ್ಣುಮಕ್ಕಳಿಗೆ ಈ ಕ್ಷೇತ್ರದಲ್ಲಿ ಭದ್ರತೆ ಇಲ್ಲ ಎನ್ನುವುದು ಪೋಷಕರಾಗಿ ನಮ್ಮನ್ನು ಚಿಂತೆಗೆ ದೂಡಿದೆ' ಎನ್ನುತ್ತಾರೆ ಹೈದರಾಬಾದ್‌ನ ಪ್ರತೀಕ ನಿಸರ್ಗ. ಪ್ರತೀಕ ಅವರ ಮಗಳು ಪ್ರಾಂಜಲ, ಗೋಪಿಚಂದ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾಳೆ. 15 ವರ್ಷದ ಒಳಗಿನ ವಿಭಾಗದಲ್ಲಿ ರಾಷ್ಟ್ರದಲ್ಲಿ ಐದನೇ ರ‍್ಯಾಂಕ್‌ನಲ್ಲಿದ್ದಾಳೆ.

'ನಮ್ಮ ಹೆಣ್ಣುಮಕ್ಕಳು ಬೆಳಿಗ್ಗೆಯೇ ಎದ್ದು, ತರಬೇತಿಗೆ ಹೋಗುತ್ತಾರೆ. ಹೀಗೆ ಕಷ್ಟಪಡುವ ನಮ್ಮ ಹೆಣ್ಣುಮಕ್ಕಳಿಗೆ ಲೈಂಗಿಕ ದೌರ್ಜನ್ಯದಂತಹ ಸಮಸ್ಯೆಗಳು ಎದುರಾಗುತ್ತವೆ ಮತ್ತು ಸರ್ಕಾರ ಈ ಬಗ್ಗೆ ಯಾವುದೇ ರೀತಿಯ ಕ್ರಮ ಕೈಗೊಳ್ಳದಿರುವುದು ಹೆಚ್ಚು ಅಪಾಯಕಾರಿ ಎನ್ನುವುದು ನನ್ನ ಅಭಿಪ್ರಾಯ' ಎಂದರು.

ಪಿವಿ ಫ್ಯಾಕ್ಟ್ ಚೆಕ್

ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ ಮಾಡಿರುವ ಕುಸ್ತಿಪಟುಗಳ ಹೋರಾಟವು ರಾಜಕೀಯ ಪ್ರೇರಿತವಾದುದು ಎಂಬ ಆರೋಪವಿದೆ. 'ನೂತನ ಸಂಸತ್ ಭವನದ ಉದ್ಘಾಟನೆ ಸಂದರ್ಭದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲು ಮುಂದಾದ ಕುಸ್ತಿಪಟುಗಳನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದಿದ್ದರು. ಕುಸ್ತಿಪಟುಗಳನ್ನು ಬಸ್‌ನಲ್ಲಿ ಕರೆದೊಯ್ಯುವಾಗ ಅವರು ನಗುತ್ತಿದ್ದರು. ಮೋದಿ ಕಾರ್ಯಕ್ರಮವನ್ನು ಹಾಳು ಮಾಡುವ ಉದ್ದೇಶ ಈಡೇರಿತು ಎಂಬುದು ಅವರ ನಗುವಿನ ಅರ್ಥವಾಗಿತ್ತು' ಎಂಬ ವಿವರಗಳಿರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ, ಇದು ಸುಳ್ಳು ಸುದ್ದಿ ಮತ್ತು ತಿರುಚಲಾದ ಚಿತ್ರ.

ಕುಸ್ತಿಪಟುಗಳನ್ನು ಪೊಲೀಸರು ಬಸ್‌ನಲ್ಲಿ ಕರೆದೊಯ್ಯುತ್ತಿರುವ ಚಿತ್ರವನ್ನು ಮೇ 28ರ ಮಧ್ಯಾಹ್ನ 12.31ಕ್ಕೆ ಮನಿಂದರ್ ಪೂನಿಯಾ ಎಂಬವರು ಮೊದಲು ಟ್ವೀಟ್ ಮಾಡಿದ್ದರು. ಈ ಚಿತ್ರದಲ್ಲಿರುವ ನಾಲ್ವರು ಕುಸ್ತಿಪಟುಗಳೂ ನಗುತ್ತಿಲ್ಲ

ಇಲ್ಲಿ ನಾಲ್ವರು ಕುಸ್ತಿಪಟುಗಳೂ ನಗುತ್ತಿದ್ದಾರೆ. ತಿರುಚಲಾದ ಈ ಚಿತ್ರವನ್ನು ಅಭಿಜಿತ್ ಮಜುಂದಾರ್ ಎಂಬವರು ಮೇ 28ರ ಸಂಜೆ 4.28ಕ್ಕೆ ಟ್ವೀಟ್ ಮಾಡಿದ್ದಾರೆ. ಅವರ ವಿರುದ್ಧ ಪ್ರಕರಣ ದಾಖಲಿಸುವುದಾಗಿ ಕೆಲವು ಕುಸ್ತಿಪಟುಗಳು ಹೇಳಿದ್ದಾರೆ

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಅನಂತ ಶುದ್ಧಾಸತ್ವ

ಭಾನೂದಯಾಸ್ತಗಳಿನಲ್ತೆ ದಿಕ್ಕಾಲಗಳ |
ಮಾನಗಣಿತವು ನಮಗೆ? ಭಾನುವಿರದೊಡದೇಂ?
ಅನಂತ್ಯ, ಶುದ್ಧಸತ್ತಾಮಾತ್ರ, ಬೊಮ್ಮನದು |
ಲೀನನಾಗದರೊಳಗೆ – ಮಂಕುತಿಮ್ಮ || 894 ||

ಪದ-ಅರ್ಥ: ಭಾನೂದಯಾಸ್ತಗಳಿನಲ್ತೆ = -ಭಾನು(ಸೂರ್ಯ) + ಉದಯ + ಅಸ್ತ ಗಳಿ-ನ್(ಮುಳುಗುವಿಕೆಗಳಿಂದ) + ಅಲ್ತೆ(ಅಲ್ಲವೆ), ದಿಕ್ಕಾಲಗಳ = ದಿಕ್ಕು + ಕಾಲಗಳ, ಮಾನಗಣಿತ-ವು = ಮಾನ(ಅಳತೆ) + ಗಣಿತವು (ಲೆಕ್ಕಾಚಾರ), ಭಾನುವಿರದೊಡದೇಂ = ಭಾನು + ಇರದೊಡೆ (ಇರದಿದ್ದರೆ) + ಅದೇಂ, ಅನಂತ್ಯ = ಅನಂತವಾದ, ಲೀನವಾಗದರೊಳಗೆ = ಲೀನವಾಗು + ಅದರೊಳಗೆ.

ವಾಚ್ಯಾರ್ಥ: ಸೂರ್ಯನ ಉದಯ ಮತ್ತು ಮುಳುಗುವಿಕೆಯಿಂದಲೇ ನಮಗೆ ದಿಕ್ಕು, ಕಾಲಗಳ ಅಳತೆ ಮತ್ತು ಲೆಕ್ಕಾಚಾರವಲ್ಲವೆ? ಸೂರ್ಯನೇ ಇರದಿದ್ದರೆ? ಆಗ ಇರುವುದು ಅನಂತವಾದ, ಶುದ್ಧಸತ್ವ ಪರಮಾತ್ಮನದು. ಅದರಲ್ಲಿ ನೀನು ಲೀನವಾಗು.

ವಿವರಣೆ: ವೇದದಲ್ಲಿರುವ ವಿಚಾರದ ಪ್ರಖರತೆಗೆ ಋಗ್ವೇದದಲ್ಲಿ ಬರುವ "ನಾಸದೀಯ ಸೂಕ್ತ"ವನ್ನು ನೋಡಬೇಕು. ಈ ಸೃಷ್ಟಿ ಹುಟ್ಟಿದ್ದು ಹೇಗೆ? ಆಗ ಏನಿತ್ತು ಎಂಬ ಗಂಭೀರವಾದ ಚಿಂತನೆ ಅಲ್ಲಿ ಮೂಡಿದೆ. ಅದರ ಕೆಲವು ಶ್ಲೋಕಗಳ ಅನುವಾದವನ್ನು ಹೀಗೆ ಮಾಡಬಹುದು – "ಸತ್ತೆಂಬುದಿರಲಿಲ್ಲ, ಅಸತ್ತೂ ಇರಲಿಲ್ಲ, ಲೋಕ ನೀಲಾಕಾಶ, ಆಚೆಯದು ಇರಲಿಲ್ಲ.ಯಾರು ಬಲ್ಲರು ಅದನು ಯಾವ ಆಶ್ರಯದಲ್ಲಿ ಏನನಾವರಿಸಿತ್ತು – ಜಲಧಿಯಿತ್ತೆ? ಮೃತ್ಯುವೂ ಇರಲಿಲ್ಲ, ಅಮೃತ್ಯುವೂ ಇರಲಿಲ್ಲ ರಾತ್ರಿ ಹಗಲುಗಳಿಗೆ ಭೇದವಿರಲಿಲ್ಲ, ಆದಿ ಮೂಲವದೊಂದು ಉಸಿರಾಡುತ್ತಿತ್ತು, ಅದ ಹೊರತು ಬೇರೇನೂ ಇರಲಿಲ್ಲ ವಿಶ್ವದಲಿ" ಪ್ರಪಂಚ ಸೃಷ್ಟಿಯಾದಾಗ, ಸೂರ್ಯನು ಹುಟ್ಟದಿದ್ದಾಗ ಏನಿತ್ತು ಎಂಬುದನ್ನು ಕಾವ್ಯಾತ್ಮಕವಾಗಿ ಹೇಳುತ್ತದೆ ಈ ಸೂಕ್ತ. ಈಗ ಸೂರ್ಯನಿದ್ದಾನೆ. ಆದ್ದರಿಂದ ನಮಗೆ ಹಗಲು-ಬೆಳಕುಗಳ ತಿಳಿವು ಬಂದಿದೆ. ಸೂರ್ಯನಿಂದಲೇ ನಮಗೆ ದಿಕ್ಕುಗಳ ಮತ್ತು ಸಮಯಗಳ ಕಲ್ಪನೆ. ಕಗ್ಗ ಸೂಕ್ತದ ಮಾತನ್ನೇ ಕೇಳುತ್ತದೆ. ಸೂರ್ಯನೇ ಇಲ್ಲದಿದ್ದಾಗ ಏನಾಗಬಹುದು? ಅದಕ್ಕೆ ಸೂಕ್ತವೇ ಉತ್ತರ ನೀಡಿದೆ. ಆಗ, ಆದಿಮೂಲವೊಂದು ಇತ್ತು. ಅದರ ಹೊರತು ಬೇರೆ ಏನೂ ಇರಲಿಲ್ಲ ವಿಶ್ವದಲ್ಲಿ. ಆ ಆದಿಮೂಲವಾದದ್ದು ಅನಂತವಾದದ್ದು. ಅದೊಂದು ಪರಮಶುದ್ಧ ಸತ್ವ. ಅದೇ ಬ್ರಹ್ಮ. ಕಗ್ಗದ ಚಿಂತನೆ, ಪ್ರೇರಣೆ ಆ ಅನಂತವಾದ ಬ್ರಹ್ಮದಲ್ಲಿ ಲೀನವಾಗಬೇಕು ಎನ್ನುವುದು. ಯಾಕೆಂದರೆ ಈ ಪ್ರಪಂಚ, ಪ್ರಪಂಚದ ಪ್ರತಿಯೊಂದು ಸೃಷ್ಟಿ ಕೂಡ ಅಶಾಶ್ವತವಾದದ್ದು. ಒಂದಲ್ಲ ಒಂದು ದಿನ ಕರಗಿ ಹೋಗುವಂಥದ್ದು. ಆದರೆ ಪ್ರಪಂಚದ ಸೃಷ್ಟಿಗಿಂತ ಮೊದಲಿದ್ದು, ಅದು ಅಳಿದ ಮೇಲೂಇರುವ ಶಾಶ್ವತ ಸತ್ವದಲ್ಲಿ ಲೀನವಾಗುವುದು ಬದುಕಿನ ಉದ್ದೇಶ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಮೇ 30, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ದಶಮಿ ಗಂ. 13-09 ನಕ್ಷತ್ರ: ಹಸ್ತ ಅಹೋರಾತ್ರ ಯೋಗ: ಸಿದ್ಧಿ (ಆಸ್ರಿಕ್) ಗಂ. 20-54, ಕರಣ: ಗರ ಗಂ. 13-09, ವೃಷಭ ಮಾಸದ 15 ನೇ ದಿನ, ಮಳೆನಕ್ಷತ್ರ: ರೋಹಿಣಿ 2. ರಾಹುಕಾಲ : ಸಾಯಂಕಾಲ 03-00 – 04-30
ಸೂರ್ಯೋದಯ : 06-06 ಸೂರ್ಯಾಸ್ತ : 06-50, ಮುಸ್ಲಿಂ ದಿನಾಂಕ : 10 ಜುಲ್ಕಾಯದ್
ದಿನ ವಿಶೇಷ : ಗಂಗಾ ದಶಹರ
ಅದೃಷ್ಟ ಸಂಖ್ಯೆ : 3, 11

ಮೇಷ: ಪರೋಪಕಾರ ಮತ್ತು ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ಮಕ್ಕಳು ಜೀವನದಲ್ಲಿ ಒಂದು ಹಂತವನ್ನು ತಲುಪಿರುವುದನ್ನು ಯೋಚಿಸಿಕೊಂಡು ನೆಮ್ಮದಿ ಹಾಗೂ ಸಂತಸ ಪಡುವಂತಾಗುವುದು.

ವೃಷಭ: ವೈಯಕ್ತಿಕ ಅಭಿವೃದ್ಧಿಗೂ ಸಾಮಾಜಿಕ ಏಳಿಗೆಗೂ ಅನುಕೂಲ ಮಾಡಲಿದೆ. ಈವರೆಗೆ ನೀವು ಮಾಡಿ ಮುಗಿಸಬೇಕೆಂದು ಆಲೋಚಿಸಿದ್ದ ಮನೆಯ ಕೆಲಸಗಳನ್ನೆಲ್ಲಾ ಈ ದಿನ ಪೂರ್ಣಗೊಳಿಸುವಿರಿ.

ಮಿಥುನ: ಹಿರಿಯರ ಆರೋಗ್ಯದ ಬಗ್ಗೆ ಯೋಚನೆ ನಡೆಸಲೇಬೇಕಾಗುತ್ತದೆ. ಹಣದ ಹರಿವು ಸುಗಮವಾಗಿರುತ್ತದೆ. ಮಹತ್ವದ ವಿಷಯವೊಂದರ ಚಿಂತನೆ ಅಗತ್ಯವೆನಿಸುವುದು. ಮನೆಯಲ್ಲಿ ಸುಖ ಸಂತೋಷ ನೆಮ್ಮದಿ ಕಂಡುಬರಲಿದೆ.

ಕರ್ಕಾಟಕ: ಅತಿಯಾಗಿ ಒತ್ತಡ ತರುವ ಕೆಲಸಗಳಿಂದ ದೂರ ಉಳಿಯುವ ಯೋಚನೆಯು ಸರಿಯಾಗಿರುವುದು. ತಾಂತ್ರಿಕ ವಿದ್ಯಾರ್ಥಿಗಳು ನಿಮ್ಮ ವಿನೂತನ ಯೋಜನೆ ಮಂಡಿಸುವಲ್ಲಿ ಯಶಸ್ವಿಯಾಗುವಿರಿ. ನಂಜು ಉಂಟಾಗುತ್ತದೆ.

ಸಿಂಹ: ಸಾಹಸಿ ಕಾರ್ಯವನ್ನು ಮಾಡುವ ಮನಸ್ಥಿತಿ ಹೊಂದಿದವರಿಗೆ ದಾಖಲೆ ಸೃಷ್ಟಿಸುವ ಅವಕಾಶ ಸಿಗುವುದು. ವಿದೇಶಿ ಬಂಡವಾಳಗಳಿಂದ ಲಾಭ ಗಳಿಸುವ ಅವಕಾಶ ಬರಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳಿಗೆ ಸಿದ್ಧತೆ ನಡೆಯಲಿದೆ.

ಕನ್ಯಾ: ಕರ್ತವ್ಯ ಕೊರತೆಯಿಂದ ಜೀವನದಲ್ಲಿ ಉಲ್ಲಾಸ ಕಳೆದುಕೊಳ್ಳುವ ಸಮಯ ಎದುರಾಗಲಿದೆ. ಹೊಸ ಮನೆಯ ಕೆಲಸಗಳು ಮುಗಿದು ಹಿರಿಯರ ಸಲಹೆಯಂತೆಯೇ ಗೃಹ ಪ್ರವೇಶದ ದಿನ ನಿಗದಿಗೊಳಿಸುವಿರಿ.

ತುಲಾ: ಕಾಳಜಿ ಹೊಂದಿದವರ ಸಲಹೆಗಳಿಗೆ ಕಿವಿಗೊಡಿ, ಅದರಿಂದಾಗಿ ಅನುಕೂಲವಾಗುವುದು. ಮಕ್ಕಳಿಂದ ದುಬಾರಿ ಬೆಲೆಯ ವಸ್ತುಗಳ ಖರೀದಿಯ ಒತ್ತಡ ಬರುವುದು. ವೃತ್ತಿ ವಿಷಯದಲ್ಲಿ ಒಪ್ಪಂದಗಳು ಏರ್ಪಡುವ ಸಾಧ್ಯತೆ ಇದೆ.

ವೃಶ್ಚಿಕ: ಪತ್ರಿಕಾ ವರದಿಗಾರರಿಗೆ ಈ ದಿನವು ಬಹಳ ವಿಶೇಷ ದಿನ ನೆನಪಿರುವಂತೆ ಆಗಬಹುದು. ಶೀತಬಾಧೆಯಿಂದ ಚಟುವಟಿಕೆಯಲ್ಲಿ ವ್ಯತ್ಯಾಸಗಳಾಗುತ್ತದೆ. ನೆಂಟರಿಷ್ಟರ ಆಗಮನ ಮನೆಯಲ್ಲಿ ಹಬ್ಬದ ವಾತಾವರಣ ಮೂಡಿಸಲಿದೆ.

ಧನು: ಕೈಗೆತ್ತಿಕೊಂಡಿರುವ ಕೆಲಸಗಳು ಹೆಚ್ಚಿನ ಖರ್ಚಿಗೆ ಕಾರಣವಾದರೂ ಮುಂದಿನ ದಿನಗಳಲ್ಲಿ ಲಾಭದಾಯಕವೆನಿಸಲಿದೆ. ನಿಮ್ಮ ಆಹಾರ ಸೇವನೆ ವಿಧಾನ ಬದಲಾಯಿಸಿ ಕೊಳ್ಳಬೇಕಾಗುವುದು.

ಮಕರ: ನಿರ್ಧಾರಗಳು ಅಗತ್ಯವಾಗಿ ತೆಗೆದುಕೊಳ್ಳುವ ಸಮಯದಲ್ಲಿ ಜ್ಯೋತಿಷ್ಯರನ್ನು ಸಂಪರ್ಕಿಸಿ. ಹಿರಿಯರ ಜೀವನಾನುಭವ ಸಲಹೆಗಳನ್ನು ಕೇಳಿ ತಿಳಿದುಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ನಡೆಸಿಕೊಳ್ಳಿರಿ.

ಕುಂಭ: ಕೆಲಸ ಮಾಡುವ ಮುನ್ನ ವಾಸ್ತವಾಂಶಗಳನ್ನು ಅರಿತುಕೊಳ್ಳುವ ಪ್ರಯತ್ನ ಒಳ್ಳೆಯದು. ಸ್ವಯಂ ಉದ್ಯೋಗಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿರುವುದು. ಭೂಮಿಗೆ ಸಂಬಂಧಿಸಿದಂತೆ ಪ್ರಯತ್ನ ಪಟ್ಟ ಕೆಲಸ ಫಲ ನೀಡಲಿವೆ.

ಮೀನ: ತಂದೆಯಾಗುವ ಸುದ್ದಿ ಕೇಳಿ ಸಂತೋಷವನ್ನು ಎಲ್ಲರೊಂದಿಗೆ ಹಂಚಿಕೊಳ್ಳುವಂತಾಗುವುದು. ಲಾಭ ನಷ್ಟಗಳ ಬಗ್ಗೆ ಪುನರಾವಲೋಕನೆ ಅಗತ್ಯವೆನಿಸುವುದು. ಹೆಚ್ಚಿನ ಮನೋಬಲದಿಂದ ಕಾರ್ಯ ಸಾಧಿಸಿಕೊಳ್ಳುವಿರಿ.

ಪದಬಂಧ 5334

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಂತೋಷ ಹೀಗೆ ಬಂದಿದೆ (3)
4.ಹಸನ್ಮುಖ ವದನ (4)
6.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
8.ಮುಸಲ್ಮಾನರ ಕಾಲಗಣನೆ (3)
11.ಕುದುರೆಯನ್ನೇರುವ ಬಳೆ (3)
13.ಸೂರ್ಯನ ಇನ್ನೊಂದು ಹೆಸರು (4)
17.ಯಕ್ಷಿಣಿಗಾರನಿಲ್ಲಿ ತಿರುಗಿದ್ದಾನೆ (4)
18.ಯೋಗವಿರುವ ಅದೃಷ್ಟ (3)

ಮೇಲಿಂದ ಕೆಳಕ್ಕೆ
1.ದೇವೋಭವ ಎನ್ನಿಸಿಕೊಳ್ಳುವ ಗುರು (3)
2.ಈತ ದನಗಳನ್ನು ಕಾಯುವವನು (4)
3.ಕಾವ್ಯದ ನವರಸಗಳಲ್ಲಿ ಒಂದು (3)
5.ಪಗಡೆಯಾಟದಲ್ಲಿ ದಾಳದಿಂದಸೂಚಿತವಾಗುವ ಸಂಖ್ಯೆ (2)
7.ವಿಸ್ತಾರವಾದ ನಿರೂಪಣೆ (3)
9.ದುರಸ್ತಿಯನ್ನು ಹೀಗೆನ್ನಿ (3)
10.ವಿಷಯದ ಕ್ರಮಬದ್ಧವಾದ ನಿರೂಪಣೆ (3)
12.ಚಿಲ್ಲರೆ ಹಣವಿದು (4)
14.ಹಿತವಾದ ಮಾತು (3)
15.ತಿರುಗಿದಾಗ ಆಶ್ರಯ ಸ್ಥಾನ ಕಾಣುತ್ತಿದೆಯಲ್ಲಾ

1		2	■	■	■	■	3	■
	■	4			5	■		■
	■		■	■	6			7
■	■	8		9	■	■	■	
10	■	■	■		■	■	■	
	■	■	■	11		12	■	■
13	14		15	■	■		■	16
■		■	17				■	
■		■	■	■	■	18		

5333ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಿತಾಪ 3.ಕೂಗಳತೆ
5.ಮಾರ್ಮಿಕ 6.ಅವಗುಣ
8.ಷರಬತ್ತು 10.ಮತದಾನ
12.ತರಗತಿ 13.ವಕ್ತಾರ
16.ಉಪಹಾಸ 17.ಮಧುಚಂದ್ರ

ಮೇಲಿಂದ ಕೆಳಕ್ಕೆ
1.ಪತ್ತೆ 2.ಪರಿಮಾಣ
3.ಕೂಲಂಕಷ 4.ತೆಪ್ಪ
7.ವರಾತ 9.ಬಳಗ
11.ನವಮಾಸ 12.ತರತಮ
14.ಗ್ರಉ 15.ಇಂದ್ರ

ಸುಡೊಕು 5720

		4	9		2	1		6
1		6					8	
	8			6				5
7								
	5		7	1	4	2		8
4					6			7
2		5		7			6	
	6					8		
8		1	6		3			9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5719 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

‘ಹಣದುಬ್ಬರ ನಿಯಂತ್ರಣದಲ್ಲಿ ಎಚ್ಚರ ತಪ್ಪುವುದಿಲ್ಲ’

ಮುಂಬೈ (ಪಿಟಿಐ): ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಕೇಂದ್ರ ಸರ್ಕಾರ ಪರಿಶೀಲನೆ ನಡೆಸುತ್ತಿದ್ದು, ಹಣದುಬ್ಬರ ನಿಯಂತ್ರಣ ವಿಚಾರದಲ್ಲಿ ಎಚ್ಚರ ತಪ್ಪುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರವು ಹಣದುಬ್ಬರಕ್ಕೆ ಸಂಬಂಧಿಸಿದ ಎಲ್ಲಾ ಅಂಶಗಳನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದೆ. ಈಗಾಗಲೇ ಹಣದುಬ್ಬರವು ಇಳಿಮುಖವಾಗಿದೆ ಎಂದು ಹೇಳಿದ್ದಾರೆ.

ಗ್ರಾಹಕ ದರ ಸೂಚ್ಯಂಕ (ಸಿಪಿಐ) ಆಧರಿಸಿದ ಚಿಲ್ಲರೆ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ 4.7ರಷ್ಟು ಆಗಿದ್ದು, 18 ತಿಂಗಳ ಕನಿಷ್ಠ ಮಟ್ಟಕ್ಕೆ ತಲುಪಿದೆ. ಗ್ರಾಹಕ ದರ ಸೂಚ್ಯಂಕದಲ್ಲಿ ಸುಮಾರು ಅರ್ಧದಷ್ಟು ಪಾಲು ಹೊಂದಿರುವ ಆಹಾರ ವಸ್ತುಗಳ ದರ ಇಳಿಕೆ ಆಗಿರುವುದರಿಂದ ಏಪ್ರಿಲ್‌ನಲ್ಲಿ ಹಣದುಬ್ಬರ ಇಳಿಕೆ ಆಗುವಂತಾಗಿದೆ.

ಹಣದುಬ್ಬರವು ಶೇ 4ರ ಮಟ್ಟಕ್ಕೆ ಬರಲಿದೆ ಎನ್ನುವುದು ಆರ್ಥಿಕ ತಜ್ಞರ ನಿರೀಕ್ಷೆ ಆಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,499
ಇಂದಿನ ಅಂತ್ಯ	18,598
▲	99
ದಿನದ ಗರಿಷ್ಠ	18,641

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹540
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹545

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1605 (1605)
ಸೋಯಾ (ರಿಫೈನ್ಡ್)	₹915(905)
ಸೂರ್ಯಕಾಂತಿ (ರಿಫೈನ್ಡ್)	₹940(925)
ಪಾಮೋಲಿನ್	₹870 (870)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1200-1600
ಮಧ್ಯಮ	₹800-1200
ಸಣ್ಣ	₹400-800

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹155
ಆರ್‌ಎಸ್‌ಎಸ್-5	₹150
ಗುಡ್ ಲಾಟ್	₹131

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹15000
ಎಸಿ	₹7980
ಆರ್‌ಪಿ	₹10500
ಆರ್‌ಸಿ	₹5910

ಕರ್ಣಾಟಕ ಬ್ಯಾಂಕ್ ಲಾಭ ಹೆಚ್ಚಳ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ಣಾಟಕ ಬ್ಯಾಂಕ್ 2022-23ನೇ ಹಣಕಾಸು ವರ್ಷದಲ್ಲಿ ಶೇ 171.53ರಷ್ಟು ಬೆಳವಣಿಗೆ ಸಾಧಿಸಿ, ಒಟ್ಟು ₹1,179.68 ಕೋಟಿ ನಿವ್ವಳ ಲಾಭ ದಾಖಲಿಸಿದೆ. ಹಿಂದಿನ ಹಣಕಾಸು ವರ್ಷದಲ್ಲಿ ಬ್ಯಾಂಕ್ ₹507.99 ಕೋಟಿ ಲಾಭ ಗಳಿಸಿತ್ತು.

ಅಂತೆಯೇ, 2022-23ರ 4ನೇ ತ್ರೈಮಾಸಿಕದಲ್ಲಿ ₹353.53 ಕೋಟಿ ನಿವ್ವಳ ಲಾಭ ದಾಖಲಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹130.20 ಕೋಟಿ ಲಾಭ ಘೋಷಿಸಿತ್ತು.

ಬ್ಯಾಂಕ್‌ನ ಪ್ರಧಾನ ಕಚೇರಿಯಲ್ಲಿ ಈಚೆಗೆ ನಡೆದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ 2022-23ನೇ ಸಾಲಿನ ಪರಿಶೋಧಿತ ಹಣಕಾಸು ವರದಿಯನ್ನು ಅಂಗೀಕಾರಿಸಲಾಯಿತು. ಹೂಡಿಕೆದಾರರಿಗೆ ಶೇ 50ರಷ್ಟು ಡಿವಿಡೆಂಡ್ ನೀಡಲು ಸಭೆಯಲ್ಲಿ ಶಿಫಾರಸು ಮಾಡಲಾಯಿತು.

2022-23ರಲ್ಲಿ ಬ್ಯಾಂಕ್‌ನ ಒಟ್ಟು ವ್ಯವಹಾರವು ಶೇ 7.40ರಷ್ಟು ವೃದ್ಧಿಯಾಗಿ ₹1,47,319.53 ಕೋಟಿಗೆ ತಲುಪಿದೆ. ಬ್ಯಾಂಕ್‌ನ ಠೇವಣಿ ಶೇ 8.68 ದರದಲ್ಲಿ ವೃದ್ಧಿಗೊಂಡು ₹87,367.91 ಕೋಟಿಗೆ ಹಾಗೂ ಮುಂಗಡ ಶೇ 5.58 ರಷ್ಟು ವೃದ್ಧಿಸಿ ₹59,951.62 ಕೋಟಿಗೆ ತಲುಪಿದೆ.

ಅನುತ್ಪಾದಕ ಸ್ವತ್ತುಗಳು ನಿಯಂತ್ರಣದಲ್ಲಿದ್ದು, 2023 ರ ಅಂತ್ಯಕ್ಕೆ ಶೇ 1.70 ರಷ್ಟಿದೆ (₹1,021.27 ಕೋಟಿ). ಆದ್ಯತಾರಂಗಕ್ಕೆ ನೀಡಿದ ಮುಂಗಡಗಳು ಬ್ಯಾಂಕಿನ ಒಟ್ಟು ಮುಂಗಡದ ಶೇ 41.47 ರಷ್ಟಿದೆ. ಇದು ಆರ್‌ಬಿಐ ನಿರ್ದೇಶಿತ ಗುರಿ ಕನಿಷ್ಠ ಶೇ 40 ಕ್ಕಿಂತ ಅಧಿಕವಾಗಿಯೇ ಇದೆ ಎಂದು ಪ್ರಕಟಣೆ ತಿಳಿಸಿದೆ.

ಭೀಮಾ ಪಲ್ಸಸ್: ಬೇಕಿದೆ ಅನುದಾನ ಬಲ

ನಿರ್ಮಾಣವಾಗದ ತೊಗರಿ ಬೇಳೆ ಸಂಸ್ಕರಣಾ ಘಟಕ; ಇನ್ನೂ ಮಾರುಕಟ್ಟೆಗೆ ಬಾರದ ಬ್ರ್ಯಾಂಡ್

• ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: ಇಲ್ಲಿನ ಕೋಟನೂರ (ಡಿ) ಪ್ರದೇಶದಲ್ಲಿ ‘ಭೀಮಾ ಪಲ್ಸಸ್’ ಬ್ರ್ಯಾಂಡ್ ಹೆಸರಿನ ತೊಗರಿ ಬೇಳೆ ಸಂಸ್ಕರಣಾ ಘಟಕ ನಿರ್ಮಾಣ ಆಗದ ಕಾರಣ ₹ 2 ಕೋಟಿ ಮೊತ್ತದ ಯಂತ್ರೋಪಕರಣಗಳು ಇನ್ನು ಜೋಡಣೆ ಆಗಿಲ್ಲ.

ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಬೆಳೆಯುವ ವಿಶಿಷ್ಟವಾದ ಭೌಗೋಳಿಕ ಸೂಚಕ (ಜಿಐ ಟ್ಯಾಗ್) ಹೊಂದಿದ ತೊಗರಿ ಬೇಳೆಯನ್ನು ಭೀಮಾ ಪಲ್ಸಸ್ ಬ್ರ್ಯಾಂಡ್ ಅಡಿ ಮಾರಲು ಸರ್ಕಾರ ನಿರ್ಧರಿಸಿತ್ತು.

ಕೋಟನೂರ (ಡಿ) ಬಳಿಯಲ್ಲಿ ಜಿಲ್ಲಾ ಕೃಷಿ ಇಲಾಖೆ ನೀಡಿದ ಜಾಗದಲ್ಲಿ ತೊಗರಿ ಬೇಳೆ ಸಂಸ್ಕರಣಾ ಘಟಕ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ಆದರೆ, ಸಕಾಲಕ್ಕೆ ಬಾರದ ಅನುದಾನ, ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಉದ್ದೇಶಿತ ಕಾಮಗಾರಿಯು ಪೂರ್ಣವಾಗಿಲ್ಲ.

₹ 8 ಕೋಟಿ ವೆಚ್ಚದಲ್ಲಿ ತೊಗರಿ ಬೇಳೆ ಸಂಸ್ಕರಣಾ ಘಟಕ ನಿರ್ಮಿಸಲು ಉದ್ದೇಶಿಸಲಾಗಿದ್ದು, ರೈತರ ತರಬೇತಿ ಕೇಂದ್ರ ಕಟ್ಟಡದ ಕಾಮಗಾರಿ ಮುಗಿದಿದೆ. ಬೇಳೆ ಸಂಸ್ಕರಣೆಗೆ ಬೇಕಾದ ಯಂತ್ರಗಳು ಸಿದ್ಧವಾಗಿದ್ದು, ಜೋಡಣೆ ಆಗಬೇಕಿದೆ. ಸಂಸ್ಕರಣಾ ಘಟಕ ಮತ್ತು ಉಗ್ರಾಣ ಕಾಮಗಾರಿ ಉಳಿದಿದೆ.

ಭೀಮಾ ಪಲ್ಸಸ್ ಬ್ರ್ಯಾಂಡ್ ಬಿಡುಗಡೆಯಾಗಿ ತಿಂಗಳುಗಳೇ ಉರುಳಿದರೂ ಮಾರುಕಟ್ಟೆಗೆ ಬಂದಿಲ್ಲ.

ಹಿಂದಿನ ಬಿಜೆಪಿ ಸರ್ಕಾರದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಅಧ್ಯಕ್ಷರು ಸಂಸ್ಕರಣಾ ಘಟಕಕ್ಕಾಗಿ ₹3 ಕೋಟಿ ಅನುದಾನಕ್ಕೆ ಅನುಮೋದನೆ ನೀಡಿದ್ದರು. ಲೋಕೋಪಯೋಗಿ ಇಲಾಖೆ ಟೆಂಡರ್ ಕರೆದು, ಟೆಂಡರ್‌ನ ತಾಂತ್ರಿಕ ಪರಿಶೀಲನೆ ಮಾಡುವ ವೇಳೆಗೆ ಚುನಾವಣೆ ನೀತಿ ಸಂಹಿತಿ ಅಡ್ಡಿಯಾಗಿ ಅನುದಾನ ಬಿಡುಗಡೆ ಆಗಲಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಜೆಪಿ ಸರ್ಕಾರದ ಅವಧಿಯ ಕೊನೆಯಲ್ಲಿ ಮಂಜೂರು ಮಾಡಿದ್ದ ಕಾಮಗಾರಿಗಳು ಹಾಗೂ ಟೆಂಡರ್ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸುವಂತೆ ನಿರ್ದೇಶನ ನೀಡಿದ್ದಾರೆ. ಕೆಕೆಆರ್‌ಡಿಬಿಗೆ ಅಧ್ಯಕ್ಷರೂ ನೇಮಕ ಆಗಿಲ್ಲ. ಹೀಗಾಗಿ, ಸಂಸ್ಕರಣ ಘಟಕ ನಿರ್ಮಾಣಕ್ಕೆ ಅಡ್ಡಿಯಾಗಿದೆ.

ಪರ್ಯಾಯ ಮಾರ್ಗ ಏನು?: ಒಂದು ವೇಳೆ ಅನುದಾನ ಬಾರದಿದ್ದರೆ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯ ಮುಂದೆ ಮತ್ತೊಂದು ಸುತ್ತಿನ ಪ್ರಸ್ತಾಪ ಇರಿಸುವ ಚಿಂತನೆ ಅಧಿಕಾರಿಗಳದ್ದು. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿ ‘ಭೀಮಾ ಪಲ್ಸಸ್’ಗೆ ಅನುಮೋದನೆ ಸಿಕ್ಕಿದೆ. ಮಂಡಳಿಯ ಮುಂದೆ ಘಟಕ ನಿರ್ಮಾಣದ ಪ್ರಸ್ತಾಪ ಮಂಡಿಸಿ ಅನುದಾನ ತಂದು ಸಂಸ್ಕರಣಾ ಘಟಕ ಪೂರ್ಣಗೊಳಿಸುವ ವಿಶ್ವಾಸವನ್ನು ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

ಸಂಸ್ಕರಣಾ ಯಂತ್ರಗಳು ಆರು ತಿಂಗಳಿಂದ ಜೋಡಣೆಗಾಗಿ ಕಾಯುತ್ತಿವೆ. ಘಟಕ ನಿರ್ಮಾಣ ಕಾಮಗಾರಿ ಶುರುವಾದ 3–4 ತಿಂಗಳಲ್ಲಿ ಮುಗಿಯಲಿದೆ

ಆಂಥೋಣಿ ಮಾರಿಯಾ ಇಮ್ಯಾನುಯೆಲ್, ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕ

ಭೀಮಾ ಪಲ್ಸಸ್ ತೊಗರ ಬೇಳೆ ಪ್ಯಾಕೇಟ್ ಮಾದರಿ

ಕಲಬುರಗಿಯ ಹೊರವಲಯದ ಕೋಟನೂರ(ಡಿ) ಪ್ರದೇಶದಲ್ಲಿ ನಿರ್ಮಿಸಿರುವ ರೈತರ ತರಬೇತಿ ಕೇಂದ್ರ

ರೈತ ಸಂಪರ್ಕ ಕೇಂದ್ರ, ಎಫ್‌ಪಿಒ ಮೂಲಕ ನೋಂದಣಿ

‘ಜಿಐ ವ್ಯಾಪ್ತಿಯಲ್ಲಿನ ನೋಂದಾಯಿತ ಬೆಳೆಗಾರರಿಂದ ತೊಗರಿ ಖರೀದಿಸುವುದು ಕಡ್ಡಾಯ. ರೈತ ಉತ್ಪಾದಕರ ಸಂಸ್ಥೆಗಳು(ಎಫ್‌ಪಿಒ) ಹಾಗೂ ರೈತ ಸಂಪರ್ಕ ಕೇಂದ್ರಗಳ ಮೂಲಕ ಬೆಳೆಗಾರರ ನೋಂದಣಿ ನಡೆಯುತ್ತಿದ್ದು, ದೇಶಪಾಂಡೆ ಪ್ರತಿಷ್ಠಾನವೂ ಕೈಜೋಡಿಸಿದೆ’ ಎಂದು ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಆಂಥೋಣಿ ಮಾರಿಯಾ ಇಮ್ಯಾನುಯೆಲ್ ‘ಪ್ರಜಾವಾಣಿ’ಗೆ ತಿಳಿಸಿದರು.

ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಸುಮಾರು 34 ರೈತ ಸಂಪರ್ಕ ಕೇಂದ್ರಗಳಿಗೆ ತಲಾ 100 ಅರ್ಜಿಗಳು ನೀಡಲಾಗಿದೆ. 1,200ಕ್ಕೂ ಅಧಿಕ ಬೆಳೆಗಾರರು ಅರ್ಜಿ ಸಲ್ಲಿಸಿದ್ದು, 135ಕ್ಕೂ ಹೆಚ್ಚು ರೈತರು ನೋಂದಣಿ ಆಗಿದ್ದಾರೆ ಎಂದರು.

ಮುಂಬೈ ಧಾರಣೆ

ಶೇಂಗಾ

29-5-2023

ಜಾವಾ 70/80(ಹೊಸ)	12050-12100
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1615 (1615)
ಒಂದು ವಾರದ ಡೆಲಿವರಿ	1610 (1610)
ಸೋಯಾ ಕಚ್ಚಾ	850 (845)
ಪಾಮ್ ವಾರದ ಡೆಲಿವರಿ	868 (868)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

59,800 (59,900)

ಬೆಳ್ಳಿ ಕೆ.ಜಿ 70,800 (70,900)

ಆವರಣದಲ್ಲಿ ಸೋಮವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ			20199-35699	ತಟ್ಟಿಬೆಟ್ಟೆ	37699-47199
ಬಂಟ್ವಾಳ		ರಾಶಿ	38489-49609	**ಶಿರಸಿ**	
ಕೋಕ	12500-25000	ಸಿಪ್ಪೆಗೋಟು	5600-21269	ಬೆಟ್ಟೆ	36599-44099
ಹೊಸತು	27500-40500	**ಕುಂದಾಪುರ**		ಬಿಳಿಗೋಟು	25000-32799
ಹಳತು	48000-53000	ಹಳೆಚಾಲಿ	43000-46000	ಚಾಲಿ	34589-37898
ಕಾರ್ಕಳ		ಹೊಸಚಾಲಿ	36000-39000	ಕೆಂಪುಗೋಟು	
ಹೊಸತು	30000-40500	**ಶಿವಮೊಗ್ಗ**			22199-35031
ಹಳತು	40000-53000	ಬೆಟ್ಟೆ	48299-53410	ರಾಶಿ	41099-46919
ಕುಮಟಾ		ಗೊರಬಲು	18009-35569	**ಯಲ್ಲಾಪುರ**	
ಚಿಪ್ಪು	29990-32899	ರಾಶಿ	36000-49099	ಅಪಿ	52329-59765
ಕೋಕ	20189-31999	ಸರಕು	45159-81400	ಬಿಳಿಗೋಟು	24899-35199
ಹಳೆಚಾಲಿ	35699-39219	**ಸಿದ್ದಾಪುರ**		ಚಾಲಿ	34899-38666
ಹೊಸಚಾಲಿ	35399-37419	ಬಿಳಿಗೋಟು	27899-32811	ಕೋಕ	16899-31012
ಸಾಗರ		ಚಾಲಿ	35389-37909	ಕೆಂಪುಗೋಟು	
ಬಿಳಿಗೋಟು	26169-32299	ಕೋಕ	27119-32699		24099-34815
ಚಾಲಿ	34699-36609	ಹಳೆಚಾಲಿ	34499-37499	ರಾಶಿ	40789-49879
ಕೋಕ	20599-33453	ಕೆಂಪುಗೋಟು	31889-32399	ತಟ್ಟಿಬೆಟ್ಟೆ	37890-45099
ಕೆಂಪುಗೋಟು		ರಾಶಿ	44869-47509		

ಜಾಗತಿಕ ಮಾರುಕಟ್ಟೆಗಳ ಗಳಿಕೆ, ವಿದೇಶಿ ಹೂಡಿಕೆ

3ನೇ ದಿನವೂ ಗೂಳಿ ಓಟ

ಮುಂಬೈ (ಪಿಟಿಐ): ಅಮೆರಿಕದ ಮಾರುಕಟ್ಟೆಯಲ್ಲಿನ ಸಕಾರಾತ್ಮಕ ವಹಿವಾಟಿನ ಜೊತೆಗೆ ಭಾರತಕ್ಕೆ ವಿದೇಶಿ ಬಂಡವಾಳ ಒಳಹರಿವು ಮುಂದುವರಿದಿದೆ. ಈ ಕಾರಣಗಳಿಂದಾಗಿ ದೇಶದ ಷೇರುಪೇಟೆಗಳಲ್ಲಿ ಸತತ ಮೂರನೇ ದಿನವೂ ಗೂಳಿ ಓಟ ಮುಂದುವರಿಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 345 ಅಂಶ ಹೆಚ್ಚಾಗಿ 62,846 ಅಂಶಗಳಿಗೆ ತಲುಪಿತು. ವಹಿವಾಟಿನ ಒಂದು ಹಂತದಲ್ಲಿ 524 ಅಂಶಗಳವರೆಗೆ ಏರಿಕೆ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 99 ಅಂಶ ಹೆಚ್ಚಾಗಿ 18,598 ಅಂಶಗಳಿಗೆ ತಲುಪಿತು.

ಮೂರು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ 1,072 ಅಂಶ ಮತ್ತು ನಿಫ್ಟಿ 313 ಅಂಶ ಏರಿಕೆ ಕಂಡಿದೆ. ಸೆನ್ಸೆಕ್ಸ್‌ನಲ್ಲಿ ಮಹೀಂದ್ರ ಷೇರು ಮೌಲ್ಯ ಶೇ 3.71ರಷ್ಟು ಹೆಚ್ಚಾಗಿದೆ.

ವಲಯವಾರು ಗ್ರಾಹಕರ ಬಳಕೆ ವಸ್ತುಗಳು ಶೇ 1.58ರಷ್ಟು, ಲೋಹ ಶೇ 1.28, ಹಣಕಾಸು ಸೇವೆಗಳು ಶೇ 0.81ರಷ್ಟು ಏರಿಕೆ ಕಂಡಿವೆ.

ದೇಶಿ ಷೇರುಪೇಟೆಗಳು ಉತ್ತಮ ಗಳಿಕೆ ಕಂಡಿದ್ದು, ಸಾರ್ವಾಲಿಕ ಗರಿಷ್ಠ ಮಟ್ಟದ ಸಮೀಪಕ್ಕೆ ಬಂದಿವೆ. ದೇಶದ ಆರ್ಥಿಕ ಬೆಳವಣಿಗೆ ಉತ್ತಮವಾಗಿರುವ ನಿರೀಕ್ಷೆಯ ಜೊತೆಗೆ ಜಾಗತಿಕ ಷೇರುಪೇಟೆಗಳ ಸಕಾರಾತ್ಮಕ ವಹಿವಾಟು ಇದಕ್ಕೆ ಕಾರಣವಾಯಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಲೋಹ, ರಿಯಾಲ್ಟಿ ಮತ್ತು ಹಣಕಾಸು ವಲಯದ ಷೇರುಗಳು ಉತ್ತಮ ಖರೀದಿ ವಹಿವಾಟಿಗೆ ಒಳಗಾದವು. ಐ.ಟಿ. ಷೇರುಗಳಲ್ಲಿ ಲಾಭ ಗಳಿಕೆಯ ವಹಿವಾಟು ನಡೆಯಿತು ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ರಿಸರ್ಚ್‌ನ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ತಿಳಿಸಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.17ರಷ್ಟು ಇಳಿಕೆ ಕಂಡು ಬ್ಯಾರಲ್‌ಗೆ 76.82 ಡಾಲರ್‌ಗೆ ತಲುಪಿತು.

ಬ್ಯಾಂಕ್ ಆಡಳಿತದಲ್ಲಿ ಲೋಪ ಕಳವಳಕಾರಿ: ಆರ್‌ಬಿಐ ಗವರ್ನರ್

ಮುಂಬೈ (ರಾಯಿಟರ್ಸ್/ಪಿಟಿಐ): ಕಾರ್ಪೊರೇಟ್ ಆಡಳಿತಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳು ಇದ್ದರು ಸಹ ಕೆಲವು ಬ್ಯಾಂಕ್‌ಗಳು ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸದೇ ಲೋಪ ಎಸಗಿರುವುದು ಆತಂಕ ಮೂಡಿಸಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಸೋಮವಾರ ಹೇಳಿದ್ದಾರೆ.

ಬ್ಯಾಂಕ್‌ಗಳ ಆಡಳಿತ ಮಂಡಳಿಯ ನಿರ್ದೇಶಕರನ್ನು ಉದ್ದೇಶಿಸಿ ಮಾತನಾಡಿದ ಅವರು, ಮಾರ್ಗಸೂಚಿಗಳು ಸರಿಯಾಗಿ ಅನುಷ್ಠಾನವಾಗದೇ ಇರುವುದರಿಂದ ಬ್ಯಾಂಕಿಂಗ್ ವಲಯದಲ್ಲಿ ಒಂದಿಷ್ಟು ಅಸ್ಥಿರತೆಗೆ ಕಾರಣವಾಗುತ್ತದೆ. ಹೀಗಾಗಿ ಬ್ಯಾಂಕ್‌ಗಳ ಆಡಳಿತ ಮಂಡಳಿಗಳು ಅಂತಹ ಪ್ರವೃತ್ತಿಗಳನ್ನು ಬೆಳೆಯಲು ಬಿಡಬಾರದು ಎಂದಿದ್ದಾರೆ.

ಹಣಕಾಸು ಸಾಧನೆಯನ್ನು ಕೃತಕವಾಗಿ ಹೆಚ್ಚಾಗುವಂತೆ ಮಾಡುವ ‘ಸ್ಮಾರ್ಟ್ ಲೆಕ್ಕಪತ್ರ ವಿಧಾನ’ವನ್ನೂ ಬ್ಯಾಂಕ್‌ಗಳು ಅಳವಡಿಸಿಕೊಂಡಿರುವುದು ಗಮನಕ್ಕೆ ಬಂದಿದೆ. ಕೆಲವು ಬ್ಯಾಂಕ್‌ಗಳು ತಮ್ಮ ಸುಸ್ತಿ ಸಾಲದ ಸ್ಥಿತಿಗತಿಯ ಕುರಿತು ಮಾಹಿತಿಯನ್ನು ಮುಚ್ಚಿಡಲು ಪ್ರಯತ್ನಿಸಿರುವುದು ಪರಿಶೀಲನೆಯ ವೇಳೆ ಕಂಡುಬಂದಿದೆ ಅಂದು ಅವರು ತಿಳಿಸಿದ್ದಾರೆ.



ಶಕ್ತಿಕಾಂತ ದಾಸ್

ಬ್ಯಾಂಕ್‌ನ ಆಡಳಿತ ಮಂಡಳಿಯ ಚರ್ಚೆಗಳಲ್ಲಿ ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ಮುಖ್ಯ ಕಾರ್ಯನಿರ್ವಾಹಕರು ಮೇಲುಗೈ ಸಾಧಿಸಿದ್ದಾರೆ. ಇದು ಸರಿಯಲ್ಲ. ಸಿಇಒಗೆ ತನ್ನ ಜವಾಬ್ದಾರಿಗಳನ್ನು ನಿಭಾಯಿಸಲು ಅಡ್ಡಿಮಾಡುವಂತಹ ಪರಿಸ್ಥಿತಿ ಇರಬಾರದು ಎಂದಿದ್ದಾರೆ.

ಹೆಸರಷ್ಟೇ ಬದಲಾಗಿದೆ.
ಬದಲಾಗಲಿಲ್ಲ ಬದ್ಧತೆ.

ಐಡಿಎಫ್‌ಸಿ ಮ್ಯೂಚುವಲ್ ಫಂಡ್ ಈಗ ಆಗಿದೆ ಬಂಧನ್ ಮ್ಯೂಚುವಲ್ ಫಂಡ್.
ಬಂಧನ್ ಸಮೂಹದ ಪರಂಪರೆ, ಸದ್ಭಾವನೆ ಮತ್ತು ಒಳಗೊಳ್ಳುವಿಕೆಯ ಬೆಂಬಲದೊಂದಿಗೆ ನೀವು ಸದಾ ನಮ್ಮಿಂದ ನಿರೀಕ್ಷಿಸುತ್ತಿರುವ ಅದೇ ಉತ್ಸಾಹ, ಪರಿಣಿತಿ ಮತ್ತು ಹೂಡಿಕೆದಾರರಿಗೆ ಪ್ರಥಮ ಆದ್ಯತೆಯೊಂದಿಗೆ ನಾವು ಭವಿಷ್ಯದತ್ತ ವಿಶ್ವಾಸದೊಂದಿಗೆ ಹೆಜ್ಜೆ ಹಾಕುತ್ತಿದ್ದೇವೆ,
ಇಲ್ಲಿದೆ ಹೊಸ ಶುಭಾರಂಭ.

IDFC MUTUAL FUND ಈಗ ಆಗಿದೆ Bandhan Mutual Fund

www.bandhanmutual.com

ಮ್ಯೂಚುವಲ್ ಫಂಡ್ ಹೂಡಿಕೆಯು ಮಾರುಕಟ್ಟೆಯ ಅಪಾಯಗಳಿಗೆ ಒಳಪಟ್ಟಿರುತ್ತವೆ.ಎಲ್ಲ ಯೋಜನೆಗೆ ಸಂಬಂಧಿಸಿದ ದಾಖಲೆಗಳನ್ನು ಗಮನವಿಟ್ಟು ಓದಿ.

ಜುಲೈ 15ರಿಂದ ವಿವಾದ್ ಸೆ ವಿಶ್ವಾಸ್–2

ನವದೆಹಲಿ (ಪಿಟಿಐ): ಸರ್ಕಾರದ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಬಾಕಿ ಇರುವ ವ್ಯಾಜ್ಯಗಳನ್ನು ಇತ್ಯರ್ಥಪಡಿಸುವ ‘ವಿವಾದ್ ಸೆ ವಿಶ್ವಾಸ್–2’ ಯೋಜನೆಯು ಜುಲೈ 15 ರಿಂದ ಆರಂಭ ಆಗಲಿದ್ದು, ಗುತ್ತಿಗೆದಾರರಿಗೆ ಅಕ್ಟೋಬರ್ 31ರವರೆಗೆ ಕಾಲಾವಕಾಶ ಇರಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಸೋಮವಾರ ಹೇಳಿದೆ.

2023–24ನೇ ಸಾಲಿನ ಬಜೆಟ್‌ನಲ್ಲಿ ಈ ಯೋಜನೆಯನ್ನು ಘೋಷಿಸಲಾಗಿತ್ತು. ಸಚಿವಾಲಯದ ಮತ್ತು ಸರ್ಕಾರದ ಇಲಾಖೆಗಳಲ್ಲದೆ, ಕೇಂದ್ರ ಸರ್ಕಾರವು ಶೇ 50ರಷ್ಟು ಷೇರುಪಾಲು ಹೊಂದಿರುವ ಸ್ವಾಯತ್ತ ಸಂಸ್ಥೆಗಳು, ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಮತ್ತು ಉದ್ಯಮಗಳು ಹಾಗೂ ಎಲ್ಲಾ ಸಂಸ್ಥೆಗಳಿಗೂ ಈ ಯೋಜನೆ ಅನ್ವಯಿಸುತ್ತದೆ ಎಂದು ಸಚಿವಾಲಯ ಹೇಳಿದೆ.

ಸುಧಾ, ಮಯೂರ ಓದಿ

ದಾಖಲೆ ಇಲ್ಲದೇ ₹2,000 ವಿನಿಮಯ: ಅರ್ಜಿ ವಜಾ

ನವದೆಹಲಿ (ಪಿಟಿಐ): ದಾಖಲೆ ಇಲ್ಲದೆಯೇ ₹ 2,000 ಮುಖಬೆಲೆಯ ನೋಟುಗಳ ವಿನಿಮಯ ಮಾಡಿಕೊಳ್ಳಲು ಅವಕಾಶ ಕಲ್ಪಿಸಿ ಹೊರಡಿಸಿದ್ದ ಅಧಿಸೂಚನೆಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದೆಹಲಿ ಹೈಕೋರ್ಟ್ ಸೋಮವಾರ ವಜಾ ಮಾಡಿತು.

ಗುರುತಿನ ಚೀಟಿ ದಾಖಲೆಯಿಲ್ಲದೇ ₹ 2,000 ಮುಖಬೆಲೆಯ ನೋಟುಗಳ ವಿನಿಮಯಕ್ಕೆ ಆರ್‌ಬಿಐ ಮತ್ತು ಎಸ್‌ಬಿಐ ಅವಕಾಶ ಕಲ್ಪಿಸಿತ್ತು. ಇದನ್ನು ಪ್ರಶ್ನಿಸಿ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅರ್ಜಿ ಸಲ್ಲಿಸಿದ್ದರು.

ಮುಖ್ಯ ನ್ಯಾಯಮೂರ್ತಿ ಸತೀಶ್ ಕುಮಾರ್ ಶರ್ಮಾ ಮತ್ತು ನ್ಯಾಯಮೂರ್ತಿ ಸುಬ್ರಹ್ಮಣಿಯಂ ಪ್ರಸಾದ್ ಅರ್ಜಿಯನ್ನು ತಿರಸ್ಕರಿಸಿದರು.

ದುಬೈ: ಭಾರತೀಯರಿಗೆ ₹ 2,000 ನೋಟು ವಿನಿಮಯ ಸಂಕಷ್ಟ

ದುಬೈ(ಪಿಟಿಐ): ಎರಡು ಸಾವಿರ ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯಲು ನಿರ್ಧರಿಸಿರುವ ಆರ್‌ಬಿಐ ಕ್ರಮವು ಗಲ್ಫ್ ದೇಶಗಳಲ್ಲಿರುವ ಭಾರತೀಯರಿಗೆ ತಲೆನೋವು ತಂದಿದೆ.

ತನ್ನ ಇಬ್ಬರು ಮಕ್ಕಳೊಂದಿಗೆ, ಇಲ್ಲಿರುವ ಪತಿಯೊಂದಿಗೆ ಇರಲು ಎರಡು ದಿನಗಳ ಹಿಂದೆ ಇಲ್ಲಿಗೆ ಫಿರೋಜಾ ಶೇಖ್ (ಹೆಸರು ಬದಲಾಯಿಸಲಾಗಿದೆ) ಬಂದಿದ್ದಾರೆ. ಆರ್‌ಬಿಐ ಆದೇಶ ತಿಳಿದ ಅವರು, ನೋಟುಗಳನ್ನು ಬದಲಾಯಿಸಿಕೊಳ್ಳಲು ವಿನಿಮಯ ಕೇಂದ್ರಕ್ಕೆ ತೆರಳಿದಾಗ ಅಲ್ಲಿನ ಸಿಬ್ಬಂದಿ ಹೇಳಿದ ಮಾತು ಅವರಿಗೆ ಅಚ್ಚರಿ ಮೂಡಿಸಿದೆ.

ಭಾರತದ ಎರಡು ಸಾವಿರ ಮುಖಬೆಲೆಯ ನೋಟುಗಳನ್ನು ವಿನಿಮಯ ಮಾಡದಂತೆ ಆಡಳಿತ ಮಂಡಳಿಯು ಅವರಿಗೆ ಸೂಚಿಸಿದೆ. ಹಾಗಾಗಿ, ವಿನಿಮಯ ಸಾಧ್ಯವಿಲ್ಲವೆಂದು ಸಿಬ್ಬಂದಿ ಹೇಳುತ್ತಿರುವುದಾಗಿ ಶೇಖ್ ಹೇಳಿದರು.

ಟರ್ಕಿ ಅಧ್ಯಕ್ಷರಾಗಿ ರೆಸೆಪ್ ತಯ್ಯಿಪ್ ಎರ್ಡೊಗನ್ ಪುನರಾಯ್ಕೆ ಖಚಿತ

ಅಂಕಾರ (ಎ.ಪಿ): ಟರ್ಕಿ ಅಧ್ಯಕ್ಷರಾಗಿ ರೆಸೆಪ್ ತಯ್ಯಿಪ್ ಎರ್ಡೊಗನ್ ಅವರು ಪುನರಾಯ್ಕೆಯಾಗಿದ್ದು ಅಧಿಕೃತ ಪ್ರಕಟಣೆ ಅಷ್ಟೇ ಬಾಕಿ ಇದೆ. ಈ ಚುನಾವಣೆಯಲ್ಲಿ ಗೆಲ್ಲುವ ಮೂಲಕ ಅಧಿಕಾರ ಅವಧಿಯನ್ನು ಮೂರನೇ ದಶಕಕ್ಕೆ ವಿಸ್ತರಿಸಿದಂತಾಗಿದೆ.

ಮತಎಣಿಕೆ ಪ್ರಕ್ರಿಯೆಯು ಶೇ 99ರಷ್ಟು ಮುಗಿದಿದ್ದು, ಅನಧಿಕೃತ ಮಾಹಿತಿ ಪ್ರಕಾರ, ಎರ್ಡೊಗನ್ ಪರವಾಗಿ ಶೇ 52ರಷ್ಟು ಮತಗಳು ಹಾಗೂ ಅವರ ಪ್ರತಿಸ್ಪರ್ಧಿ ಕೆಮೆಲ್ ಕಿಲಿಡರೊಗ್ಲು ಅವರಿಗೆ ಶೇ 48ರಷ್ಟು ಮತಗಳು ಬಂದಿವೆ.

ಮತದಾನ ಪ್ರಕ್ರಿಯೆ ಮುಗಿದ ಬಳಿಕ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ್ದ ಎರ್ಡೊಗನ್ ಅವರು, ‘ಮತ್ತೊಮ್ಮೆ ದೇಶದ ಚುಕ್ಕಾಣಿ ಹಿಡಿಯಲು ತಮ್ಮ ಮೇಲೆ ವಿಶ್ವಾಸವಿಟ್ಟಿರುವ ಜನತೆಗೆ ಕೃತಜ್ಞನಾಗಿದ್ದೇನೆ’ ಎಂದು ಹೇಳಿದ್ದರು.



ರೆಸೆಪ್ ತಯ್ಯಿಪ್ ಎರ್ಡೊಗನ್

ಈ ಚುನಾವಣೆಯಲ್ಲಿ ಟರ್ಕಿ ಗೆದ್ದಿದೆ ಎಂದು ಹೇಳಿರುವ ಅವರು, ‘ಶತಮಾನೋತ್ಸವ ಆಚರಣೆ ವರ್ಷದಲ್ಲಿರುವ ಟರ್ಕಿ ಅಭಿವೃದ್ಧಿಗೆ ಶಕ್ತಿಮೀರಿ ಕಾರ್ಯನಿರ್ವಹಿಸುತ್ತೇನೆ’ ಎಂದು ಭರವಸೆ ನೀಡಿದರು.

ಮೋದಿ ಅಭಿನಂದನೆ: ಟರ್ಕಿ ಅಧ್ಯಕ್ಷರಾಗಿ ಪುನರಾಯ್ಕೆಯಾಗಿರುವ ರೆಸೆಪ್ ತಯ್ಯಿಪ್ ಎರ್ಡೊಗಾನ್ ಅವರಿಗೆ ಪ್ರಧಾನಿ ಮೋದಿ ಅಭಿನಂದಿಸಿದ್ದಾರೆ. ‘ಉಭಯ ರಾಷ್ಟ್ರಗಳ ಬಾಂಧವ್ಯ ಇನ್ನಷ್ಟು ಗಟ್ಟಿಗೊಳ್ಳಲಿದೆ’ ಎಂದು ಆಶಿಸಿದ್ದಾರೆ. ವಿಶ್ವದ ಪ್ರಮುಖ ನಾಯಕರು ಅಭಿನಂದನೆ ಸಲ್ಲಿಸಿದ್ದಾರೆ.

ಶಾಂಘೈ: ಶತಮಾನದಲ್ಲೇ ಗರಿಷ್ಠ ತಾಪಮಾನ

ಶಾಂಘೈ (ಎಎಫ್‌ಪಿ): ಚೀನಾದ ಶಾಂಘೈನಲ್ಲಿ ಕಳೆದ 100 ವರ್ಷಗಳಲ್ಲೇ ಅತಿ ಹೆಚ್ಚಿನ ತಾಪಮಾನ ಸೋಮವಾರ ದಾಖಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮಧ್ಯಾಹ್ನ 1.09ರ ಸಮಯದಲ್ಲಿ ಶುಯಿಜಿ ಮೆಟ್ರೊ ನಿಲ್ದಾಣದಲ್ಲಿ 36.1 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. 100 ವರ್ಷಗಳ ಹಿಂದೆ ಮೇ ತಿಂಗಳಲ್ಲಿ ದಾಖಲಾಗಿದ್ದ ಅತೀ ಹೆಚ್ಚಿನ ತಾಪಮಾನದ ದಾಖಲೆಯನ್ನು ಇದು ಮುರಿದಿದೆ ಎಂದು ಇಲಾಖೆ ಹೇಳಿದೆ. ಮಧ್ಯಾಹ್ನದ ನಂತರ, ಶಾಂಘೈನ ಕೇಂದ್ರ ಮೆಟ್ರೊ ನಿಲ್ದಾಣದಲ್ಲಿ ತಾಪಮಾನವು 36.7 ಡಿಗ್ರಿ ಸೆಲ್ಸಿಯಸ್‌ಗೆ ಏರಿಕೆಯಾಯಿತು ಎಂದು ಹವಾಮಾನ ಇಲಾಖೆ ತಿಳಿಸಿದೆ.

35.7 ಡಿಗ್ರಿ ಸೆಲ್ಸಿಯಸ್ ತಾಪಮಾನ ಈ ಹಿಂದಿನ ದಾಖಲೆಯಾಗಿತ್ತು. ಈ ಪ್ರಮಾಣದ ತಾಪಮಾನವು 1876, 1903, 1915 ಮತ್ತು 2018ರಲ್ಲಿ ಒಟ್ಟು ನಾಲ್ಕು ಬಾರಿ ದಾಖಲಾಗಿತ್ತು.

ಹಸಿರುಮನೆ ಅನಿಲಗಳ ಹೊರಸೂಸುವಿಕೆ ಮತ್ತು ಎಲ್‌ನಿನೊ ಪರಿಣಾಮದಿಂದಾಗಿ ಉಷ್ಣತೆ ಏರಿಕೆಯಾಗುವ ಮೂಲಕ 2023-2027ರ ಅವಧಿಯು ಅತ್ಯಂತ ಬಿಸಿಲಿನ ಅವಧಿಯಾಗಿರಲಿದೆ ಎಂದು ವಿಶ್ವಸಂಸ್ಥೆಯು ಇದೇ ತಿಂಗಳಲ್ಲಿ ಎಚ್ಚರಿಕೆ ನೀಡಿತ್ತು.

ಪ್ಯಾರಿಸ್ ಒಪ್ಪಂದದಲ್ಲಿ ನಿಗದಿಪಡಿಸಿದ, ಹವಾಮಾನ ಬದಲಾವಣೆ ತಗ್ಗಿಸುವ ಅತ್ಯಂತ ಮಹತ್ವಾಕಾಂಕ್ಷೆಯ ಗುರಿ ಸಾಧಿಸುವುದರಿಂದ ಹೊರಗುಳಿದರೆ, ಮುಂದಿನ ಐದು ವರ್ಷಗಳಲ್ಲಿ ಜಾಗತಿಕ ತಾಪಮಾನ ಈಗಿರುವುದಕ್ಕಿಂತಲೂ ಇನ್ನಷ್ಟು ಹೆಚ್ಚುವ ಸಾಧ್ಯತೆ ಇದೆ ಎಂದು ವಿಶ್ವಸಂಸ್ಥೆಯ ವಿಶ್ವ ಹವಾಮಾನ ಸಂಸ್ಥೆ (ಡಬ್ಲ್ಯುಎಂಒ) ಎಚ್ಚರಿಸಿದೆ.

ಬಾಹ್ಯಾಕಾಶಕ್ಕೆ ಸಾಮಾನ್ಯ ಪ್ರಜೆ: ಚೀನಾ ಸಿದ್ಧತೆ

ಬೀಜಿಂಗ್(ಎಎಫ್‌ಪಿ): 2030ರ ವೇಳೆಗೆ ಮಾನವ ಸಹಿತ ಚಂದ್ರಯಾನ ಗುರಿ ಸಾಧಿಸುವ ಯೋಜನೆ ಹೊಂದಿರುವ ಚೀನಾ, ಇದೇ ಮೊದಲಿಗೆ ಟಿಯಾನ್‌ಗೊಂಗ್ ಬಾಹ್ಯಾಕಾಶ ಕೇಂದ್ರಕ್ಕೆ ಸಾಮಾನ್ಯ ಪ್ರಜೆಯನ್ನು ಗಗನಯಾತ್ರಿಯಾಗಿ ಕಳುಹಿಸಲು ಸಿದ್ಧತೆ ನಡೆಸಿದೆ.

ಸೇನೆಯ ಮೇಲ್ವಿಚಾರಣೆ ಹೊಂದಿರುವ ಬಾಹ್ಯಾಕಾಶ ಯೋಜನೆಗೆ ಚೀನಾ ಕೋಟ್ಯಂತರ ರೂಪಾಯಿ ವ್ಯಯಿಸುತ್ತಿದೆ. ಈ ಮೂಲಕ ಅಮೆರಿಕ ಮತ್ತು ರಷ್ಯಾದ ಸಾಧನೆಯನ್ನು ಸರಿಗಟ್ಟಲು ಯತ್ನಿಸುತ್ತಿದೆ. ಬಾಹ್ಯಾಕಾಶಕ್ಕೆ ಚೀನಾ ಇದುವರೆಗೂ ಕಳುಹಿಸಿರುವ ಎಲ್ಲ ಗಗನಯಾತ್ರಿಗಳು, ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿಯ ಭಾಗವಾಗಿದ್ದರು.

‘ಬೀಜಿಂಗ್‌ನ ಬೀಹ್ಯಾಂಗ್ ಯೂನಿವರ್ಸಿಟಿಯ ಪ್ರೊಫೆಸರ್ ಗ್ಯೂ ಹೈಚಾವೊ ಅವರು ಯೋಜನೆಯ ಅವಧಿಯಲ್ಲಿ ಬಾಹ್ಯಾಕಾಶದಲ್ಲಿ ವೈಜ್ಞಾನಿಕ ಸಂಶೋಧನೆ ನಡೆಸುವರು‘ ಎಂದು ಚೀನಾ ಬಾಹ್ಯಾಕಾಶ ಸಂಸ್ಥೆ(ಸಿಎಂಎಸ್‌ಎ) ವಕ್ತಾರರು ಸೋಮವಾರ ತಿಳಿಸಿದರು. ‘ನಾನು ಸದಾ ಇಂಥದೊಂದು ಕನಸು ಕಾಣುತ್ತಿದ್ದೆ’ ಎಂದು ಗ್ಯೂ ಸುದ್ದಿಗಾರರಿಗೆ ತಿಳಿಸಿದರು. ‘ಗ್ಯೂ ಅವರು ಯುನಾನ್ ಪ್ರಾಂತ್ಯದ ಸಾಮಾನ್ಯ ಕುಟುಂಬಕ್ಕೆ ಸೇರಿದವರು’ ಎಂದು ಅವರು ಕೆಲಸ ಮಾಡುತ್ತಿರುವ ವಿಶ್ವವಿದ್ಯಾಲಯವು ತಿಳಿಸಿದೆ.

‘ಚೀನಾದ ಯಾಂಗ್ ಲೀವೈ ಅವರು ಬಾಹ್ಯಾಕಾಶ ತಲುಪಿದ ಸುದ್ದಿಯನ್ನು 2003ರಲ್ಲಿ ಕ್ಯಾಂಪಸ್ ರೇಡಿಯೊದಲ್ಲಿ ಆಲಿಸಿದ್ದರು. ಆ ನಂತರ ಗ್ಯೂ ಬಾಹ್ಯಾಕಾಶದತ್ತ ಆಕರ್ಷಿತರಾಗಿದ್ದರು’ ಎಂದು ವಿಶ್ವವಿದ್ಯಾಲಯವು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದೆ. ಬಾಹ್ಯಾಕಾಶ ಕ್ಷೇತ್ರದ ವಿಶ್ಲೇಷಕರಾಗಿರುವ ಚೆನ್ ಲ್ಯಾನ್ ಅವರು, ಈ ಮೂಲಕ ಚೀನಾ ಬಾಹ್ಯಾಕಾಶದ ಬಾಗಿಲನ್ನು ಸಾಮಾನ್ಯ ಜನರಿಗೂ ತೆರೆದಂತಾಗಲಿದೆ ಎಂದಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಶ್ರೀಶಕ್ತಿ ಹೆಲ್ತ್ ಕೇರನಲ್ಲಿ ಹೆಲ್ಪರ್ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 13000/- ರಿಂದ 15000/- ಸಾವಿರವರೆಗೆ. ಬೆಂಗಳೂರು. 9019626612

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್ ಕಂಪನಿಗಳಿಗೆ SSLC,PUC, ಡಿಗ್ರಿ,ಡಿಪ್ಲೋಮಾದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 65,000/- ವಸತಿಯೂಟದೊಂದಿಗೆ 9036125229

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611227266/ 9611221244

ಮನೆಯಿಂದಲೇ ಕೆಲಸ: ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್,ಡೇಟಾ ಎಂಟ್ರಿ, ಫಾರಂ ಫಿಲ್ಲಿಂಗ್ ಹಾಗೂ ಟೆಲಿಕಾಲಿಂಗ್ ಹುದ್ದೆಗಳು.ಗಳಿಸಿ,ತಿಂಗಳಿಗೆ 10,000-15,000/-. 8884013618, 6362470664,

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

DH DECCAN HERALD ಪ್ರಜಾವಾಣಿ

JOB CORNER

BOOK JOB ADS ON WEEKDAY + SUNDAY

@ 803/-* Per Sqcm Single Column

@ 825/-* Per Sqcm Multi Column

conditions apply*

For More Details Contact:
9731810277 | 9901641752
9845114560 | 9886213331
080- 45557163 | 45557164

ಪ್ರವಾಸ

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 22/6 ಕಾಶಿ, ಗಯಾ, ಅಯೋಧ್ಯೆ. 29/6 ಗುರುವಾಯೂರ್, ಕೊಚ್ಚಿನ್,ತಿರುವನಂತಪುರ 11/7 ಗುಜರಾತ್ ಪ್ಯಾಕೇಜ್ 9964527782/9591017782

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಚಿರಸ್ಮರಣೆ

ಶ್ರೀ ಎ. ಎಂ. ಕುಮಾರಸ್ವಾಮಿ
S/o ಎ. ಬಿ. ಮಲ್ಲಣ್ಣ, ಅತ್ತಿಬೆಲೆ–562107
ಜನನ: 01–11–1957 – ಮರಣ: 30–05–2022
ದುಃಖತಪ್ತರು: ಕುಟುಂಬಸ್ಥರು ಹಾಗು ಬಂಧು–ಮಿತ್ರರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಶಾಂತಿ ಪುನರ್ ಸ್ಥಾಪನೆಗೆ ಹಲವು ಸುತ್ತಿನ ಭದ್ರತಾ ಸಭೆ: ಸಾಮಾಜಿಕ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಮಾತುಕತೆ

ಮಣಿಪುರ: ಶಾ ವಾಸ್ತವ್ಯ– ಪರಿಸ್ಥಿತಿ ಅವಲೋಕನ

ನವದೆಹಲಿ/ಇಂಫಾಲ್ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹಿಂಸಾಚಾರಪೀಡಿತ ಮಣಿಪುರವನ್ನು ಸೋಮವಾರ ತಲುಪಿದ್ದಾರೆ. ಅವರು ನಾಲ್ಕು ದಿನಗಳ ತಮ್ಮ ಭೇಟಿಯ ವೇಳೆ ರಾಜ್ಯದಲ್ಲಿನ ಪರಿಸ್ಥಿತಿ ಅವಲೋಕನ ಮತ್ತು ಶಾಂತಿ ಪುನರ್‌ಸ್ಥಾಪನೆಗಾಗಿ ಹಲವು ಸುತ್ತಿನ ಭದ್ರತಾ ಸಭೆಗಳನ್ನು ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೇ 3ರಂದು ಪ್ರತಿಭಟನಾ ಮೆರವಣಿಗೆಯಲ್ಲಿ ಮೈತೇಯಿ ಮತ್ತು ಕೂಕಿ ಬುಡಕಟ್ಟು ಸಮುದಾಯಗಳ ನಡುವೆ ಸಂಘರ್ಷ ಮತ್ತು ಹಿಂಸಾಚಾರ ನಡೆದಿತ್ತು. ಬಳಿಕವೂ ರಾಜ್ಯದಲ್ಲಿ ಉದ್ವಿಗ್ನ ಪರಿಸ್ಥಿತಿ ಮುಂದುವರಿದಿದೆ.

ಗೃಹ ಸಚಿವರು ಜೂನ್ 1ರವರೆಗೆ ರಾಜ್ಯದಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಪರಿಸ್ಥಿತಿ ಅವಲೋಕನದ ಜತೆಗೆ ಅಲ್ಲಿನ ಜನಜೀವನವನ್ನು ಸಹಜಸ್ಥಿತಿಗೆ ತರುವ ಸಲುವಾಗಿ ಹಲವು ಸುತ್ತಿನ ಭದ್ರತಾ ಸಭೆಗಳನ್ನೂ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅವರು ಸಮಾಜದ ವಿವಿಧ ಸಂಘಟನೆಗಳ ಪ್ರತಿನಿಧಿಗಳು, ಮೈತೇಯಿ ಮತ್ತು ಕೂಕಿ ಸಮುದಾಯಗಳ ವಿವಿಧ ಗುಂಪುಗಳ ಪ್ರತಿನಿಧಿಗಳನ್ನು ಭೇಟಿಯಾಗುವ ನಿರೀಕ್ಷೆಯಿದೆ.

ಸೇನೆ– ಬಂಡುಕೋರರ ಮಧ್ಯೆ ಗುಂಡಿನ ಚಕಮಕಿ: 25 ಮಂದಿ ಬಂಧನ: ಸಂಘರ್ಷ ಪೀಡಿತ ಮಣಿಪುರದಲ್ಲಿ ಭದ್ರತಾ ಪಡೆಗಳು ಮತ್ತು ಬಂಡುಕೋರರ ನಡುವೆ ಸೋಮವಾರ ಕೂಡ ಗುಂಡಿನ ಚಕಮಕಿ ನಡೆದಿದೆ. ಸೇನೆ ಮತ್ತು ಅರೆ ಸೇನಾ ಪಡೆಗಳು ಬಂಡುಕೋರರ ವಿರುದ್ಧ ಕೈಗೊಂಡಿರುವ ಕಾರ್ಯಾಚರಣೆಯಲ್ಲಿ ಶಸ್ತ್ರಾಸ್ತ್ರ, ಮದ್ದುಗುಂಡು ಮತ್ತು ಗ್ರೆನೇಡ್‌ಗಳನ್ನು ಹೊಂದಿದ್ದ 25 ಮಂದಿ ಬಂಡುಕೋರರನ್ನು ಬಂಧಿಸಲಾಗಿದೆ.

ಇಂಫಾಲ್ ಕಣಿವೆಯಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗುಂಡಿನ ದಾಳಿ ಮತ್ತು ಘರ್ಷಣೆಗಳು ಸಂಭವಿಸಿವೆ. ಇಂಫಾಲ್‌ನ ಪೂರ್ವ-ದಲ್ಲಿರುವ ಸನ್ಸಬಿ, ಗ್ವಾಲ್ತಬಿ, ಶಬುನ್‌ಖೋಲ್, ಖುನೊದಲ್ಲಿ ನಡೆಸಿದ ಕಾರ್ಯಾಚರಣೆಗಳಲ್ಲಿ 22 ದುಷ್ಕರ್ಮಿ-ಗಳನ್ನು ಬಂಧಿಸಿದ್ದು, ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಇಂಫಾಲ ನಗರದಲ್ಲಿ ಅಕ್ರಮ ಶಸ್ತ್ರಾಸ್ತ್ರಗಳೊಂದಿ-ಗೆ ವಾಹನದಲ್ಲಿ ಪ್ರಯಾಣಿಸುತ್ತಿರುವ ಮೂವರು ವ್ಯಕ್ತಿಗಳನ್ನು ಭದ್ರತಾ ಪಡೆ ಸಿಬ್ಬಂದಿ ಬಂಧಿಸಿದೆ ಎಂದು ಸೇನೆ ತಿಳಿಸಿದೆ.

ಭದ್ರತಾ ಪಡೆ ಮತ್ತು ಕೂಕಿ ಬಂಡುಕೋರರ ನಡುವಿನ ಗುಂಡಿನ ಚಕಮಕಿಯಲ್ಲಿ ಮೃತಪಟ್ಟವರ ಸಂಖ್ಯೆ ಐದಕ್ಕೆ ಏರಿದೆ. ಭಾನುವಾರ ಇಬ್ಬರು ಮೃತಪಟ್ಟಿದ್ದು, ಗುಂಡೇಟುಗಳಿಂದ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ 12 ಮಂದಿಯಲ್ಲಿ ಸೋಮವಾರ ಮೂವರು ಮೃತಪಟ್ಟಿ-ದ್ದಾರೆ.

ಶುಗನುವಿನಲ್ಲಿ ನಡೆದ ಘರ್ಷಣೆಯಲ್ಲಿ ಪೊಲೀಸ್ ಸಿಬ್ಬಂದಿ-ಯೊಬ್ಬರು ಮೃತಪಟ್ಟಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ.

ಸೇನೆ ಮತ್ತು ಅರೆಸೇನಾ ಪಡೆ ಯೋಧರು ಇಂಫಾಲ್ ಕಣಿವೆ ಪ್ರದೇಶ ಮತ್ತು ಸುತ್ತಲಿನ ಜಿಲ್ಲೆಗಳಲ್ಲಿ ಬಂಡುಕೋರರ ವಿರುದ್ಧ ಕಾರ್ಯಾಚರಣೆ ಮುಂದುವರಿಸಿದ್ದಾರೆ. ಬಂಡುಕೋರರಿಂದ ಅಕ್ರಮ ಶಸ್ತ್ರಾಸ್ತ್ರ-ಗಳನ್ನು ವಶಪಡಿಸಿಕೊಳ್ಳಲು ಭದ್ರತಾ ಪಡೆಗಳು ಮಿಲಿಟರಿ ಕಾರ್ಯಾಚರಣೆ ನಡೆಸುತ್ತಿವೆ.

ಹಿಂಸಾಚಾರ ಘಟನೆಗಳು ಮರು-ಕಳಿಸುತ್ತಿರುವುದರಿಂದಾಗಿ, ಇಂಫಾಲ್ ಪೂರ್ವ ಮತ್ತು ಪಶ್ಚಿಮ ಜಿಲ್ಲೆಗಳಲ್ಲಿ ಹೇರಿದ್ದ 11 ಗಂಟೆಗಳ ಕರ್ಫ್ಯೂ ಸಡಿಲಿಕೆ ಅವಧಿಯನ್ನು ಜಿಲ್ಲಾ ಅಧಿಕಾರಿಗಳು ಕೇವಲ ಆರೂವರೆ ತಾಸುಗಳ ಅವಧಿಗೆ ಕಡಿತಗೊಳಿಸುವಂತೆ ಮಾಡಿವೆ.

ಮಣಿಪುರದ ಗಲಭೆ ಪೀಡಿತ ದೊಲೈತಾಭಿಯಲ್ಲಿ ಸೇನೆಯ ಯೋಧರು ಗಸ್ತಿನಲ್ಲಿರುವುದು –ಎಎಫ್‌ಪಿ ಚಿತ್ರ

40 ಬಂಡುಕೋರರ ಹತ್ಯೆ

ನಾಗರಿಕರ ಮೇಲೆ ಗುಂಡು ಹಾರಿಸಿ ಮತ್ತು ಅವರ ಮನೆಗಳಿಗೆ ಬೆಂಕಿ ಹಚ್ಚಿ ಹಿಂಸಾಚಾರ ನಡೆಸಿದವರಲ್ಲಿ ಸುಮಾರು 40 ಮಂದಿ ಶಸ್ತ್ರಸಜ್ಜಿತ ಬಂಡುಕೋರರು, ಭದ್ರತಾ ಪಡೆಗಳು ನಡೆಸಿದ ಸೇನಾ ಕಾರ್ಯಾಚರಣೆಯಲ್ಲಿ ಹತರಾಗಿದ್ದಾರೆ ಎಂದು ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಹೇಳಿದ್ದಾರೆ.

ಶಾಂತಿ ಸ್ಥಾಪಿಸಲು ಕಾರ್ಯಾಚರಣೆಗೆ ಇಳಿದಿರುವ ಭದ್ರತಾ ಪಡೆಗಳೊಂದಿಗೆ ಕೂಕಿ ಬಂಡುಕೋರರು ಶಸ್ತ್ರಾಸ್ತ್ರ ಸಂಘರ್ಷ ನಡೆಸಿದ್ದಾರೆ. ಬಂಡುಕೋರರು ಎಕೆ- 47 ಬಂದೂಕುಗಳು, ಎಂ-16 ಮತ್ತು ಸ್ನೈಪರ್ ರೈಫಲ್‌ಗಳಿಂದ ನಾಗರಿಕರ ಮೇಲೆ ಗುಂಡಿನ ದಾಳಿ ನಡೆಸಿರುವ ಪ್ರಕರಣಗಳೂ ವರದಿಯಾಗಿವೆ. ಈ ಬಂಡುಕೋರರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

9 ವರ್ಷದಿಂದಲೂ ಜನರ ಹಣ ಲೂಟಿ: ಖರ್ಗೆ ವಾಗ್ದಾಳಿ

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಕೇಂದ್ರ ಸರ್ಕಾರವು ಒಂಬತ್ತು ವರ್ಷಗಳಿಂದಲೂ ಜನರ ಹಣವನ್ನು ಲೂಟಿ ಮಾಡುತ್ತಿದೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದ್ದಾರೆ.

ಮೋದಿ ನೇತೃತ್ವದಡಿ ದೇಶ ಎಲ್ಲಾ ರಂಗಗಳಲ್ಲೂ ಸರ್ವಾಂಗೀಣ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಸಾಕ್ಷಿಯಾಗಿದೆ ಎಂದು ಬಿಜೆಪಿ ನೀಡಿದ ಹೇಳಿಕೆಗೆ ಟ್ವೀಟ್ ಮೂಲಕ ಖರ್ಗೆ ಖಾರವಾಗಿ ಪ್ರತಿಕ್ರಿಯಿ-ಸಿದ್ದಾರೆ.

ಒಂಬತ್ತು ವರ್ಷಗಳಲ್ಲಿ ಹಣದುಬ್ಬರದ ನಿಯಂತ್ರಣಕ್ಕೆ ಸರ್ಕಾರ ಕ್ರಮವಹಿಸಲಿಲ್ಲ. ಬಿಜೆಪಿ ಸಾರ್ವಜನಿಕರ ಆದಾಯವನ್ನು ಲೂಟಿ ಮಾಡಿದೆ. ಜಿಎಸ್‌ಟಿಯು ಜನರ ದೈನಂದಿನ ಬಜೆಟ್‌ಗೆ ಪೆಟ್ಟು ನೀಡಿದೆ. ಇದರಿಂದ ಅವರ ಜೀವನ ನಿರ್ವಹಣೆಗೆ ಸಂಕಷ್ಟ ತಂದೊಡ್ಡಿದೆ ಎಂದು ಟೀಕಿಸಿದ್ದಾರೆ.

'ಹಣದುಬ್ಬರ ಕಣ್ಣಿಗೆ ಕಾಣುವುದಿಲ್ಲ ಅಥವಾ ದುಬಾರಿ ವಸ್ತುಗಳನ್ನು ನಾವು ತಿನ್ನುವುದಿಲ್ಲವೆಂದು ಅವರು ಅಹಂಕಾರದಿಂದ ಮಾತನಾಡುತ್ತಾರೆ. ಆದರೆ, ಅಚ್ಛೇ ದಿನಗಳಿಂದ ಅಮೃತ ಕಾಲದವರೆಗೆ ಸಾರ್ವಜನಿಕರ ಹಣವನ್ನು ಲೂಟಿ ಮಾಡುವ ಪ್ರಮಾಣ ಮಾತ್ರ ಹೆಚ್ಚಿದೆ' ಎಂದು ಆಕ್ರೋಶ ವ್ಯಕ್ತಪಡಿಸಿ-ದ್ದಾರೆ.

ಅಗತ್ಯ ವಸ್ತುಗಳ ಬೆಲೆ ಏರಿಕೆ, ನಿರುದ್ಯೋಗ, ರೈತರ ಆದಾಯ ಕುಸಿತದ ವಿಷಯಗಳನ್ನು ಮುಂದಿಟ್ಟುಕೊಂಡು ಮೋದಿ ನೇತೃತ್ವದ ಸರ್ಕಾರಕ್ಕೆ ಪ್ರತಿಪ-ಕ್ಷವಾದ ಕಾಂಗ್ರೆಸ್ ಇತ್ತೀಚೆಗೆ ಒಂಬತ್ತು ಪ್ರಶ್ನೆಗಳನ್ನು ಕೇಳಿತ್ತು.

ಜೂ.12ಕ್ಕೆ ಪ್ರತಿಪಕ್ಷಗಳ ಸಭೆ ಮಮತಾ ಪಾಲ್ಗೊಳ್ಳುವ ನಿರೀಕ್ಷೆ

ಕೋಲ್ಕತ್ತ (ಪಿಟಿಐ): ಮುಂಬರುವ ಲೋಕಸಭಾ ಚುನಾವಣೆಗೆ ಬಿಜೆಪಿ ವಿರುದ್ಧ ಒಗ್ಗೂಡುವ ಸಂಬಂಧ ಬಿಹಾರದ ಪಟ್ನಾದಲ್ಲಿ ಜೂನ್ 12ರಂದು ನಡೆಯಲಿರುವ ಪ್ರತಿಪಕ್ಷಗಳ ಸಭೆಯಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಬಿಜೆಪಿ ವಿರುದ್ಧ ಪ್ರ-ತಿಪಕ್ಷಗಳನ್ನು ಒಂದೇ ವೇದಿಕೆಯಡಿ ತರಲು ಮುಂದಾಗಿದ್ದಾರೆ. ಇದರ ಭಾಗವಾಗಿಯೇ ಅವರ ಉಸ್ತುವಾರಿಯ-ಲ್ಲಿ ಪಟ್ನಾದಲ್ಲಿ ಸಭೆ ನಿಗದಿಯಾಗಿದೆ.

'ಮಮತಾ ಅವರು ಸಭೆಯಲ್ಲಿ ಭಾಗವಹಿಸಿ 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಎದುರಿಸಲು ಅಗತ್ಯವಿರುವ ವಿರೋಧ ಪಕ್ಷಗಳ ಒಗ್ಗಟ್ಟು ಮತ್ತು ಅದನ್ನು ಬಲಪಡಿಸುವ ಬಗ್ಗೆ ತಮ್ಮ ಸಲಹೆ ನೀಡಲಿದ್ದಾರೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಟಿಎಂಸಿ ಮುಖಂಡರೊಬ್ಬರು ತಿಳಿಸಿದ್ದಾರೆ.

ಕಳೆದ ತಿಂಗಳು ನಿತೀಶ್ ಕುಮಾರ್ ಕೋಲ್ಕತ್ತದಲ್ಲಿ ಮಮತಾ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದರು. ಈ ವೇಳೆ ಜಯಪ್ರಕಾಶ್ ನಾರಾಯಣ ಅವರ ಹೋರಾಟವನ್ನು ಸ್ಮರಿಸಿದ್ದ ದೀದಿ, ಪ್ರ-ತಿಪಕ್ಷಗಳ ಸಭೆ ಆಯೋಜನೆಗೆ ಸಲಹೆ ನೀಡಿದ್ದರು.

'ಕುಸ್ತಿಪಟುಗಳ ಹೋರಾಟಕ್ಕೆ ಜಂತರ್ ಮಂತರ್ ಬಂದ್'

ನವದೆಹಲಿ (ಪಿಟಿಐ): ಮಹಿಳಾ ಕುಸ್ತಿ-ಪಟುಗಳಿಗೆ ಮುಂದೆ ರಾಜಧಾನಿಯಲ್ಲಿ ಜಂತರ್ ಮಂತರ್ ಹೊರತುಪಡಿಸಿ ಇತರೆ ಸ್ಥಳದಲ್ಲಿ ಪ್ರತಿಭಟನೆ ನಡೆಸಲು ಅವಕಾಶ ಕಲ್ಪಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಸಾರ್ವಜನಿಕವಾಗಿ ತೀವ್ರ ಚರ್ಚೆಗೊಳಗಾದ, ಪ್ರತಿಭಟನನಿರತ ಕುಸ್ತಿಪಟುಗಳನ್ನು ಭದ್ರತಾ ಸಿಬ್ಬಂದಿ ಎಳೆದಾಡಿದ ಘಟನೆ ನಡೆದ ಮಾರನೇ ದಿನ ಪೊಲೀಸರು ಈ ತೀರ್ಮಾನಕ್ಕೆ ಬಂದಿದ್ದಾರೆ.

'ಭಾನುವಾರ ಕುಸ್ತಿಪಟುಗಳು ಪುನರಾವರ್ತಿತ ಮನವಿ ನಂತರವೂ ಕಾನೂನು ಉಲ್ಲಂಘಿಸಿದರು. ಹೀಗಾಗಿ, ನಾವು ಅವರನ್ನು ತೆರವುಗೊಳಿಸಿ ಧರಣಿ ಅಂತ್ಯಗೊಳಿಸಿದೆವು' ಎಂದು ಡಿಸಿಪಿ ಟ್ವೀಟ್ ಮಾಡಿದ್ದಾರೆ.

'ಮುಂದೆ ಧರಣಿ ನಡೆಸಲು ಅನುಮತಿ ಕೋರಿ ಕುಸ್ತಿಪಟುಗಳು ಮನವಿ ಸಲ್ಲಿಸಿದರೂ ಜಂತರ್ ಮಂತರ್ ಹೊರತುಪಡಿಸಿ ಸೂಕ್ತ ಎನಿಸುವ ಬೇರಾವುದೇ ಸ್ಥಳದಲ್ಲಿ ಧರಣಿಗೆ ಅವಕಾಶ ಕಲ್ಪಿಸುತ್ತೇವೆ' ಎಂದಿದ್ದಾರೆ.

ಕುಸ್ತಿಪಟುಗಳಾದ ವಿನೇಶಾ ಫೋಗಟ್, ಸಾಕ್ಷಿ ಮಲ್ಲಿಕ್, ಭಜರಂಗ್ ಪುನಿಯಾ ಮತ್ತು ಇತರೆ ಪ್ರತಿಭಟನ-ಕಾರರ ವಿರುದ್ಧ ಕಾನೂನು ಸುವ್ಯವಸ್ಥೆಗೆ ಭಂಗ ಉಂಟುಮಾಡಿದ, ನೌಕರರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಪೊಲೀಸರು ಮೊಕದ್ದಮೆಯನ್ನು ದಾಖಲಿಸಿದ್ದಾರೆ.

ಜಂತರ್ ಮಂತರ್‌ನಲ್ಲಿ 109 ಜನರು ಸೇರಿ ನಗರದಲ್ಲಿ ಭಾನುವಾರ 700 ಜನರನ್ನು ಬಂಧಿಸಲಾಗಿದೆ. ಬಂಧಿತ ಮಹಿಳಾ ಕುಸ್ತಿಪಟುಗಳನ್ನು ನಂತರ ಬಿಡುಗಡೆ ಮಾಡಲಾಯಿತು ಎಂದು ತಿಳಿಸಿದ್ದಾರೆ.

ತೀವ್ರ ಟೀಕೆ: ಇತ್ತ, ಕುಸ್ತಿಪಟುಗಳನ್ನು ಎಳೆದಾಡಿದ ಘಟನೆಗೆ ಕ್ರೀಡಾ ಮತ್ತು ರಾಜಕೀಯ ವಲಯದ ಪ್ರಮುಖರಿಂದ ತೀವ್ರ ಖಂಡನೆ ವ್ಯಕ್ತವಾಗಿದೆ. ಭಾನುವಾರ ರಾತ್ರಿಯೇ ಬಿಡುಗಡೆಗೊಂಡಿರುವ ಮಹಿಳಾ ಕುಸ್ತಿಪಟುಗಳು ತಮ್ಮ ಮುಂದಿನ ನಡೆ ಕುರಿತಂತೆ ಇನ್ನಷ್ಟೇ ತೀರ್ಮಾನಿಸಬೇಕಾಗಿದೆ.

'ನಮ್ಮ ಮುಂದಿನ ನಡೆ ಏನೆಂದು ಶೀಘ್ರವೇ ತಿಳಿಸುತ್ತೇವೆ. ನನ್ನನ್ನು ರಾತ್ರಿ 11 ಗಂಟೆಗೆ ಬಿಡುಗಡೆ ಮಾಡಿದರೆ, ಭಜರಂಗ್ ಅವರನ್ನು ಮಧ್ಯರಾತ್ರಿ ಬಿಡುಗಡೆ ಮಾಡಲಾಯಿತು. ಮುಂದಿನ ನಡೆ ಕುರಿತು ನಾವು ಭೇಟಿಯಾಗಿ ಚರ್ಚಿ-ಸಬೇಕಾಗಿದೆ' ಎಂದು ಕುಸ್ತಿಪಟು ಒಬ್ಬರು ತಿಳಿಸಿದರು.

ಕುಸ್ತಿ ಪಟುಗಳನ್ನು ಎಳೆದಾಡಿದ ಬೆಳವಣಿಗೆ ಕುರಿತು ಕ್ರೀಡಾಪಟುಗಳಾದ ಅಭಿನವ್ ಬಿಂದ್ರಾ, ಫುಟ್‌ಬಾಲ್ ಪಟು ಸುನಿಲ್ ಛೆತ್ರಿ, ಕ್ರಿಕೆಟ್ ಪಟು ಇರ್ಫಾನ್ ಪಠಾಣ್ ಖಂಡಿಸಿದ್ದಾರೆ.

'ಕುಸ್ತಿಪಟುಗಳನ್ನು ಎಳೆದಾಡಿದ ದೃಶ್ಯಗಳು ತೀವ್ರವಾಗಿ ಕಾಡಿದವು. ಕಳೆದ ರಾತ್ರಿ ನಿದ್ರೆ ಮಾಡಲಾಗಲಿಲ್ಲ' ಎಂದು ಒಲಿಂಪಿಕ್ ಚಿನ್ನದ ಪದಕ ವಿಜೇತ ಅಭಿನವ್ ಬಿಂದ್ರಾ ಪ್ರತಿಕ್ರಿಯಿಸಿದ್ದಾರೆ.

ಎಎಪಿಗೆ 'ಕೈ' ಬೆಂಬಲ ಅನುಮಾನ

ದೆಹಲಿ, ಪಂಜಾಬ್ ಕಾಂಗ್ರೆಸ್ ನಾಯಕರ ಜೊತೆ ಮಲ್ಲಿಕಾರ್ಜುನ ಖರ್ಗೆ ಚರ್ಚೆ

ನವದೆಹಲಿ (ಪಿಟಿಐ): ದೆಹಲಿ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತು ಕೇಂದ್ರ ಸರ್ಕಾರ ಹೊರಡಿಸಿರುವ ಸುಗ್ರೀವಾಜ್ಞೆ ವಿರುದ್ಧದ ಎಎಪಿ ಹೋರಾಟಕ್ಕೆ ಕಾಂಗ್ರೆಸ್ ಪಕ್ಷವು ಬೆಂಬಲ ನೀಡುವ ನಿರ್ಧಾರದಿಂದ ಹಿಂದೆ ಸರಿಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಎಎಪಿಗೆ ಬೆಂಬಲ ನೀಡುವ ವಿಷಯ ಕುರಿತು ಇಲ್ಲಿನ ಎಐಸಿಸಿ ಕಚೇರಿಯಲ್ಲಿ ಸೋಮವಾರ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ದೆಹಲಿ ಮತ್ತು ಪಂಜಾಬ್‌ನ ಕಾಂಗ್ರೆಸ್ ನಾಯಕರ ಅಭಿಪ್ರಾಯ ಪಡೆಯಲು ಸಭೆ ನಡೆಯಿತು.

ಇದರಲ್ಲಿ ಪಕ್ಷದ ನಾಯಕ ರಾಹುಲ್ ಗಾಂಧಿ ಕೂಡ ಭಾಗವಹಿಸಿದ್ದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಬಹುತೇಕ ನಾಯಕರು ಅರವಿಂದ್ ಕೇಜ್ರಿವಾಲ್ ಬಿಜೆಪಿಯ 'ಬಿ' ಟೀಮ್ ಆಗಿದ್ದಾರೆ. ದೆಹಲಿ, ಪಂಜಾಬ್ ಹೊರತಾಗಿ ಇತರ ರಾಜ್ಯಗಳಲ್ಲೂ ಅವರು ಕಾಂಗ್ರೆಸ್‌ಗೆ ವಿರುದ್ಧವಾಗಿದ್ದಾರೆ. ಹಾಗಾಗಿ, ಅವರಿಗೆ ಯಾವುದೇ ಕಾರಣಕ್ಕೂ ಬೆಂಬಲ ಘೋಷಿಸಬಾರದು ಎಂದು ವರಿಷ್ಠರಿಗೆ ಮನವರಿಕೆ ಮಾಡಿಕೊಟ್ಟರು ಎಂದು ಮೂಲಗಳು ತಿಳಿಸಿವೆ.

ಸುಗ್ರೀವಾಜ್ಞೆ ವಿರುದ್ಧದ ಹೋರಾಟಕ್ಕೆ ಬೆಂಬಲ ಕೋರಿ ಕೇಜ್ರಿವಾಲ್ ಅವರು, ಖರ್ಗೆ ಮತ್ತು ರಾಹುಲ್ ಗಾಂಧಿ ಅವರ ಭೇಟಿಗೆ ಸಮಯ ಕೋರಿದ್ದಾರೆ. ಪಕ್ಷದ ಮುಖಂಡರ ಜೊತೆಗೆ ಚರ್ಚಿಸಿದ ಬಳಿಕ ದೂರವಾಣಿ ಕರೆ ಮಾಡುವುದಾಗಿ ಖರ್ಗೆ ಅವರು ಕೇಜ್ರಿವಾಲ್‌ಗೆ ತಿಳಿಸಿದ್ದಾರೆ. ಹಾಗಾಗಿಯೇ ಈ ಸಭೆ ಆಯೋಜಿಸಲಾಗಿತ್ತು.

ಸದ್ಯ ದೆಹಲಿ ಮತ್ತು ಪಂಜಾಬ್ ನಾಯಕರ ಅಭಿಪ್ರಾಯ ಪಡೆಯಲಾಗಿದೆ. ಶೀಘ್ರವೇ, ಉಳಿದ ರಾಜ್ಯಗಳ ನಾಯಕರ ಅಭಿಪ್ರಾಯ ಪಡೆಯಲು ವರಿಷ್ಠರು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಭೆಯ ಬಳಿಕ ಸುದ್ದಿಗಾರರೊಂದಿ-ಗೆ ಮಾತನಾಡಿದ ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಮರಿಂದರ್ ಸಿಂಗ್ ರಾಜಾ, 'ಸಭೆಯಲ್ಲಿ ನಮ್ಮ ಅಭಿಪ್ರಾಯ ತಿಳಿಸಿದ್ದು, ಅಂತಿಮ ನಿರ್ಧಾರವನ್ನು ಪಕ್ಷದ ಹೈಕಮಾಂಡ್‌ಗೆ ಬಿಟ್ಟಿದ್ದೇವೆ' ಎಂದರು.

ನಾಯಕ ನವಜೋತ್ ಸಿಧು, 'ಸಭೆಯಲ್ಲಿ ಚರ್ಚಿಸಿದ ವಿಷಯವನ್ನು ಬಹಿರಂಗಪಡಿಸುವುದಿಲ್ಲ. ಖರ್ಗೆ ಅಥವಾ ರಾಹುಲ್ ಅವರಷ್ಟೇ ವಿವರ ಬಹಿರಂಗಪಡಿಸಲು ಸಾಧ್ಯ' ಎಂದು ಹೇಳಿದರು.

'ನನಗೆ ಭಾರತದ ಸಂವಿಧಾನವೇ ಸ್ಫೂರ್ತಿ. ಆದರೆ, ಕೇಂದ್ರ ಸರ್ಕಾರ ಇದರ ಮೇಲೆ ಸವಾರಿ ಮಾಡುತ್ತಿದೆ. ಇದರಿಂದ ಸಾಂವಿಧಾನಿಕ ಮೌಲ್ಯಗಳು ಕುಸಿಯುತ್ತಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಎನ್‌ವಿಎಸ್–01' ಯಶಸ್ವಿ ಉಡಾವಣೆ

ಚೆನ್ನೈ: 'ಎನ್‌ವಿಎಸ್–01' ನ್ಯಾವಿಗೇಷನ್ (ಪಥ ದರ್ಶಕ) ಉಪಗ್ರಹದ ಎರಡನೇ ಪೀಳಿಗೆಯ ಉಪಗ್ರಹವನ್ನು ಹೊತ್ತ ಜಿಎಸ್‌ಎಲ್‌ವಿ ರಾಕೆಟ್ ಸೋಮವಾರ ಬೆಳಿಗ್ಗೆ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ನಭಕ್ಕೆ ಹಾರಿತು. ಉಡಾವಣೆಯಾದ ಸುಮಾರು 19 ನಿಮಿಷದ ಬಳಿಕ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ರಾಕೆಟ್‌ನ ಯಶಸ್ವಿ ಉಡ್ಡಯನದ ಕುರಿತು ಮಾಹಿತಿ ನೀಡಿತು.



ಮರಣದಂಡನೆ ಕೋರಿ ಎನ್‌ಐಎ ಅರ್ಜಿ ಯಾಸಿನ್‌ಗೆ ಹೈಕೋರ್ಟ್ ನೋಟಿಸ್

ನವದೆಹಲಿ (ಪಿಟಿಐ): ಭಯೋತ್ಪಾದ-ಕರಿಗೆ ಹಣಕಾಸಿನ ನೆರವು ನೀಡಿರುವ ಪ್ರಕರಣದಲ್ಲಿ ಪ್ರತ್ಯೇಕತಾವಾದಿ ನಾಯಕ ಯಾಸಿನ್ ಮಲಿಕ್‌ಗೆ ಮರಣ ದಂಡನೆ ವಿಧಿಸಬೇಕೆಂದು ಕೋರಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿ ದೆಹಲಿ ಹೈಕೋರ್ಟ್ ಸೋಮವಾರ ಆತನಿಗೆ ನೋಟಿಸ್ ಜಾರಿ ಮಾಡಿದೆ.

ಯಾಸಿನ್‌ನನ್ನು ಆಗಸ್ಟ್ 9ರಂದು ನ್ಯಾಯಾಲಯದ ಮುಂದೆ ಹಾಜರು ಪಡಿಸಬೇಕೆಂದು ನ್ಯಾಯಮೂ-ರ್ತಿಗಳಾದ ಸಿದ್ಧಾರ್ಥ ಮೃದುಲ್ ಮತ್ತು ತಲ್ವಂತ್ ಸಿಂಗ್ ಅವರ ನ್ಯಾಯಪೀಠವು ವಾರಂಟ್ ಜಾರಿ ಮಾಡಿದೆ. ಭಯೋತ್ಪಾದನೆ ಮತ್ತು ಪ್ರ-ತ್ಯೇಕತಾವಾದದ ಚಟುವಟಿಕೆಗಳಲ್ಲಿ ಯಾಸಿನ್ ತೊಡ-ಗಿದ್ದುದರಿಂದ ಈ ಪ್ರಕರಣವನ್ನು ಅಪರೂಪದಲ್ಲಿ ಅಪರೂಪದ ಪ್ರಕರಣ ಎಂದು ಪರಿಗಣಿಸಿ ಆತನಿಗೆ ಮರಣದಂಡನೆ ವಿಧಿಸಬೇಕು ಎಂದು ಎನ್‌ಐಎ ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ವಾದಿಸಿದ್ದಾರೆ. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 121ರ ಅಡಿಯಲ್ಲಿ ಹೊರಿಸ ಲಾಗಿದ್ದ ಆರೋಪವನ್ನು ಯಾಸಿನ್ ಒಪ್ಪಿಕೊಂಡಿದ್ದಾನೆ. ಈ ಕೃತ್ಯಕ್ಕೆ ಮರಣ ದಂಡನೆ ವಿಧಿಸಲು ಅವಕಾಶ ಇದೆ. ಜೈಲು ಸುಪರಿಂಟೆಂಡೆಂಟ್ ಮೂಲಕ ಆತನಿಗೆ ನೋಟಿಸ್ ಜಾರಿ ಮಾಡುತ್ತೇವೆ' ಎಂದು ನ್ಯಾಯಾಲಯ ಹೇಳಿದೆ.

ಯಾಸಿನ್ ಮಲಿಕ್

ಕಾನೂನುಬಾಹಿರ ಚಟುವಟಿಕೆ ನಿಗ್ರಹ ಕಾಯ್ದೆ (ಯುಎಪಿಎ) ಹಾಗೂ ಐಪಿಸಿಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ದಾಖಲಾಗಿದ್ದ ಪ್ರಕರಣಗ-ಳಲ್ಲಿ ನಿಷೇಧಿತ ಜಮ್ಮು ಮತ್ತು ಕಾಶ್ಮೀರ ಲಿಬರೇಷನ್ ಫ್ರಂಟ್ (ಜೆಕೆಎಲ್‌ಎಫ್) ಮುಖ್ಯಸ್ಥ ಯಾಸಿನ್ ಅಪರಾಧಿ ಎಂದು ಘೋಷಿಸಿದ್ದ ವಿಚಾರಣಾ ನ್ಯಾಯಾಲಯವು 2022ರ ಮೇ 24ರಂದು ಆತನಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು.

ಹಾಕ್ ವಿಮಾನ ಖರೀದಿ ಹಗರಣ: ಸಿಬಿಐ ಎಫ್‌ಐಆರ್

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆ ಮತ್ತು ನೌಕಾಪಡೆಗೆ 'ಹಾಕ್ 115' ಅತ್ಯಾಧುನಿಕ ಜೆಟ್ ತರಬೇತಿ (ಎಜೆಟಿ) ವಿಮಾನಗಳ ಖರೀದಿಯಲ್ಲಿ ಲಂಚ ಪಡೆದ ಆರೋಪದ ಮೇಲೆ ಬ್ರಿಟಿಷ್ ಏರೋಸ್ಪೇಸ್ ಮತ್ತು ರಕ್ಷಣಾ ಕಂಪನಿ ರೋಲ್ಸ್ ರಾಯ್ಸ್ ಪಿಎಲ್‌ಸಿಯ ನಿರ್ದೇಶಕರು ಮತ್ತು ಶಸ್ತ್ರಾಸ್ತ್ರ ವಿತರಕರಾದ ಇಬ್ಬರು ಖಾಸಗಿ ವ್ಯಕ್ತಿಗಳ ವಿರುದ್ಧ ಸಿಬಿಐ ಭ್ರಷ್ಟಾಚಾರ ಪ್ರಕರಣ ದಾಖಲಿಸಿದೆ.

ರೋಲ್ಸ್ ರಾಯ್ಸ್ ಇಂಡಿಯಾ ನಿರ್ದೇಶಕ ಟಿಮ್ ಜೋನ್ಸ್, ರೋಲ್ಸ್ ರಾಯ್ ಪಿಎಲ್‌ಸಿ ಮತ್ತು ಬ್ರಿಟಿಷ್ ಏರೋಸ್ಪೇಸ್ ಸಿಸ್ಟಮ್ಸ್‌ನ ಶಸ್ತ್ರಾಸ್ತ್ರ-ಗಳ ವಿತರಕರಾದ ಸುಧೀರ್ ಚೌಧರಿ ಮತ್ತು ಭಾನು ಚೌಧರಿ ವಿರುದ್ಧ ಸಿಬಿಐ ಆರು ವರ್ಷಗಳ ಪ್ರಾಥಮಿಕ ತನಿಖೆಯ ನಂತರ, ಭಾರತೀಯ ದಂಡ ಸಂಹಿತೆಯ ಸೆಕ್ಷನ್ 120-ಬಿ (ಕ್ರಿಮಿನಲ್ ಪಿತೂರಿ) ಮತ್ತು ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದೆ.

ಆರ್‌ಎಸ್‌ಎಸ್ ಕುರಿತ 'ತಪ್ಪುಗ್ರಹಿಕೆ' ನಿವಾರಣೆಗೆ ವೆಬ್‌ಸೈಟ್ ಸ್ಥಾಪನೆ

ನವದೆಹಲಿ: ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಕುರಿತು ಇರುವ ತಪ್ಪು ಗ್ರಹಿಕೆಗಳನ್ನು ನಿವಾರಿಸುವ ಗುರಿಯೊಂದಿಗೆ ಸಂಘದ ಪರ ಒಲವು, ಮೃದುಧೋರಣೆ ಹೊಂದಿರುವ ಕೆಲವರು ಹೊಸದಾಗಿ ವೆಬ್‌ಸೈಟ್ (rssfacts.org) ಆರಂಭಿಸಿದ್ದಾರೆ.

ಆರ್‌ಎಸ್‌ಎಸ್ ಇದನ್ನು ಅಧಿಕೃತವಾಗಿ ಸ್ಥಾಪಿಸಿಲ್ಲ. ಕೆಲ ಸಂಶೋಧಕರು ಮತ್ತು ಸ್ವಯಂಸೇವಕರು ಒಟ್ಟುಗೂಡಿ, ಒಂದೂವರೆ ವರ್ಷದಿಂದ ಶ್ರಮವಹಿಸಿ ಇದನ್ನು ರೂಪಿಸಿದ್ದೇವೆ ಎಂದು ವೆಬ್‌ಸೈಟ್‌ನ ಸಂಪಾದಕ ಅರುಣ್ ಆನಂದ್ ಅವರು ತಿಳಿಸಿದ್ದಾರೆ.

'ಆರ್‌ಎಸ್‌ಎಸ್ ಸ್ಥಾಪಕ ಹೆಡಗೇವಾರ್ ಅವರು ಕಾಂಗ್ರೆಸ್ ಪಕ್ಷ 'ನಿರ್ಮೂಲನೆ' ಮಾಡಲು ಬಯಸಿದ್ದರು. ಎಂ.ಎಸ್.ಗೋಳ್ವಾಲ್ಕರ್ ಅವರು ತಮ್ಮ 'ವಿ ಅಂಡ್ ಅವರ ನೇಷನ್‌ವುಡ್ ಡಿಫೈನ್ಡ್' ಕೃತಿಯಲ್ಲಿ ಹಿಟ್ಲರ್ ಅವರನ್ನು ಶ್ಲಾಘಿಸಿದ್ದಾರೆ. ಹಿಂದುತ್ವ ಸಿದ್ಧಾಂತ ಆಧರಿಸಿ ಸಾವರ್ಕರ್ ಅವರು ಆರ್‌ಎಸ್‌ಎಸ್ ಸ್ಥಾಪಿಸಿದರು...' ಇತ್ಯಾದಿ 'ನಕಲಿ' ಗ್ರಹಿಕೆಗಳನ್ನು ನಿವಾರಿಸುವುದು ವೆಬ್‌ಸೈಟ್‌ನ ಉದ್ದೇಶ ಎಂದು ಅವರು ತಿಳಿಸಿದ್ದಾರೆ.

ರಸ್ತೆ ಅಪಘಾತ: 7 ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸಾವು

ಗುವಾಹಟಿ (ಪಿಟಿಐ): ರಸ್ತೆ ಅಪಘಾತದಲ್ಲಿ ಅಸ್ಸಾಂ ಎಂಜಿನಿಯರಿಂಗ್ ಕಾಲೇಜಿನ ಏಳು ವಿದ್ಯಾರ್ಥಿಗಳು ಮೃತಪಟ್ಟಿದ್ದು, ಆರು ಮಂದಿಗೆ ಗಂಭೀರ ಗಾಯಗಳಾಗಿವೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

10 ಮಂದಿ ತೃತೀಯ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಮುಂಜಾನೆ ಕಾರಿನಲ್ಲಿ ವೇಗವಾಗಿ ತೆರಳುತ್ತಿದ್ದ ವೇಳೆ ಕಾರು ರೋಡ್ ಡಿವೈಡರ್‌ಗೆ ಗುದ್ದಿದೆ. ಬಳಿಕ ಮತ್ತೊಂದು ವಾಹನಕ್ಕೆ ಡಿಕ್ಕಿ ಹೊಡೆದಿದೆ.

ಈ ದುರಂತದಲ್ಲಿ ಏಳು ವಿದ್ಯಾರ್ಥಿಗಳು ಸ್ಥಳದಲ್ಲಿಯೇ ಮೃತಪಟ್ಟರು. ಗಾಯಗೊಂಡಿರುವ ಮೂವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಭದ್ರಾವತಿ ವಿಭಾಗ, ಲೊಯರ್ ಹುತ್ತಾ, ಭದ್ರಾವತಿ –577301

Phone : 08282-266355 Fax: 08282 -266647

Email: dcfbdvt@yahoo.in

ಸ:ಎ2:ಬಿಯುಡಿ:"E-Tender"–ಸಿ.ಆರ್–26/23–24–1. Dt:26.05.2023

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ)

2023–24ನೇ ಸಾಲಿನಲ್ಲಿ ಭದ್ರಾವತಿ ಅರಣ್ಯ ವಿಭಾಗದ ಭದ್ರಾವತಿ ವಲಯ ವ್ಯಾಪ್ತಿಯಲ್ಲಿ ಕೆಳಕಂಡ ಕಾಮಗಾರಿ ನಿರ್ವಹಿಸಲು https://kppp.karnataka.gov.in ಪೋರ್ಟಲ್ ಮುಖಾಂತರ ದಿನಾಂಕ: 10–06–2023ರ ಸಂಜೆ 4.30 ಗಂಟೆಯವರೆಗೆ ನಿಗದಿಪಡಿಸಿ ಟೆಂಡರ್ ಅಹ್ವಾನಿಸಲಾಗಿದ್ದು, ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ. ಕಾಮಗಾರಿಯ ಅಂದಾಜು ಮೊತ್ತ:– 148.54400 ಲಕ್ಷಗಳು

1. "Planting in Advance work area during 2023-24 in Bhadravathi Range.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 10–06–2023
ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ: 11–06–2023
ಆರ್ಥಿಕ ಬಿಡ್ಡು ತೆರೆಯುವ ದಿನಾಂಕ: 12–06–2023

(ಶಿವಶರಣಯ್ಯ ಕ.ಅ.ಸೇ)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/50/05/23–24/51

ಫ್ರೆಂಚ್ ಓಪನ್ ಟೆನಿಸ್: ಪವ್ಲಿಚೆಂಕೋವಾ ಶುಭಾರಂಭ

ನೊವಾಕ್ ಜೊಕೊವಿಚ್ ಮುನ್ನಡೆ

ಪ್ಯಾರಿಸ್ (ಎಎಫ್‌ಪಿ): ಸೊಗಸಾದ ಆಟವಾಡಿದ ಸರ್ಬಿಯದ ನೊವಾಕ್ ಜೊಕೊವಿಚ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಎರಡನೇ ಸುತ್ತಿಗೆ ಮುನ್ನಡೆದರು.

ರೋಲಂಡ್ ಗ್ಯಾರೋಸ್‌ನ ಫಿಲಿಪ್ ಚಾಟ್ರಿಯರ್ ಕೋರ್ಟ್‌ನಲ್ಲಿ ಸೋಮವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಅವರು 6–3, 6–2, 7–6 ರಲ್ಲಿ ಅಮೆರಿಕದ ಅಲೆಕ್ಸಾಂಡರ್ ಕೊವಸೆವಿಚ್ ವಿರುದ್ಧ ಗೆದ್ದರು.

ಇಲ್ಲಿ ಮೂರನೇ ಶ್ರೇಯಾಂಕ ಪಡೆದಿರುವ ಜೊಕೊವಿಚ್, ಶಿಸ್ತಿನ ಆಟವಾಡಿ 2 ಗಂಟೆ 26 ನಿಮಿಷಗಳಲ್ಲಿ ಗೆಲುವು ಒಲಿಸಿಕೊಂಡರು. ಮೊದಲ ಎರಡು ಸೆಟ್‌ಗಳನ್ನು ಸುಲಭವಾಗಿ ಜಯಿಸಿದ ಅವರಿಗೆ ಮೂರನೇ ಸೆಟ್‌ನಲ್ಲಿ ಕೊವಸೆವಿಚ್ ಅಲ್ಪ ಪೈಪೋಟಿ ಒಡ್ಡಿದರು.

ಎರಡು ಬಾರಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ಅಮೆರಿಕದ ಆಟಗಾರ ಮೂರನೇ ಸೆಟ್‌ಅನ್ನು ಟೈಬ್ರೇಕರ್‌ಗೆ ಕೊಂಡೊಯ್ದರು. ಟೈಬ್ರೇಕರ್‌ನಲ್ಲಿ ಲಯ ಕಂಡುಕೊಂಡ ಜೊಕೊವಿಚ್ 7–1 ರಲ್ಲಿ ಜಯಿಸಿ ಪಂದ್ಯ ತಮ್ಮದಾಗಿಸಿಕೊಂಡರು.

ನೋರಿಗೆ ಜಯ: ಐದು ಸೆಟ್‌ಗಳ ಹಣಾಹಣಿ ನಡೆದ ಪಂದ್ಯದಲ್ಲಿ ಬ್ರಿಟನ್‌ನ ಕ್ಯಾಮರಾನ್ ನೋರಿ 7-5, 4-6, 3-6, 6-1, 6-4 ರಲ್ಲಿ ಫ್ರಾನ್ಸ್‌ನ ಬೆನೊಯ್ಟ್ ಪೇರ್ ಅವರನ್ನು ಮಣಿಸಿದರೆ, ಕೆನಡಾದ ಡೆನಿಸ್ ಶಪೊವಲೊವ್ 6-4, 7-5, 4-6, 3-6, 6-3 ರಲ್ಲಿ ಅಮೆರಿಕದ ಬ್ರೆಂಡನ್ ನಕಶಿಮ ಎದುರು ಗೆದ್ದರು.

ಪುರುಷರ ಸಿಂಗಲ್ಸ್ ವಿಭಾಗದ ಇತರ ಪಂದ್ಯಗಳಲ್ಲಿ ಸ್ಪೇನ್‌ನ ರಾಬರ್ಟೊ ಬಾಟಿಸ್ಟಾ ಆಗಟ್ 7–6, 6–1, 6–1 ರಿಂದ ಚೀನಾದ ವು ಯುಬಿಂಗ್ ವಿರುದ್ಧ; ಅರ್ಜೆಂಟೀನಾದ ಡಿಯಾಗೊ ಶ್ವಾರ್ಟ್ಸ್‌ಮನ್ 1-6, 6-7, 6-2, 6-0, 6-4 ರಿಂದ ಸ್ಪೇನ್‌ನ ಬೆರ್ನೆಬ್ ಮಿರಾಲೆಸ್ ವಿರುದ್ಧ; ಆಸ್ಟ್ರೇಲಿಯಾದ ಅಲೆಕ್ಸ್ ಡಿ ಮಿನೌರ್ 6-1, 5-7, 6-1, 6-3 ರಲ್ಲಿ ಇಲ್ಯಾ ಇವಾಶ್ಕ ವಿರುದ್ಧ ಗೆಲುವು ಸಾಧಿಸಿದರು.

ಪವ್ಲಿಚೆಂಕೋವಾ ಶುಭಾರಂಭ: ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಅನಸ್ತೇಸಿಯಾ ಪವ್ಲಿಚೆಂಕೋವಾ ಅವರು ಶುಭಾರಂಭ ಮಾಡಿದರು. ಸೋಮವಾರ ನಡೆದ ಮೊದಲ ಸುತ್ತಿನ ಹಣಾಹಣಿಯಲ್ಲಿ ಅವರು 6–2, 6–2 ರಲ್ಲಿ ಜೆಕ್ ರಿಪಬ್ಲಿಕ್‌ನ ಲಿಂಡಾ ಫ್ರುವಿರ್ತೋವಾ ಅವರನ್ನು ಮಣಿಸಿದರು.

2021 ರಲ್ಲಿ ಇಲ್ಲಿ ರನ್ನರ್ ಅಪ್ ಆಗಿದ್ದ 31 ವರ್ಷದ ಪವ್ಲಿಚೆಂಕೋವಾ ಅವರು 18 ವರ್ಷದ ಆಟಗಾರ್ತಿಯ ವಿರುದ್ಧ ಎರಡೂ ಸೆಟ್‌ಗಳಲ್ಲಿ ಆಕರ್ಷಕ ಪ್ರದರ್ಶನ ನೀಡಿದರು.

ಅಮೆರಿಕದ ಸ್ಲೊವಾನೆ ಸ್ಟೀಫನ್ಸ್ 6–0, 6–4 ರಲ್ಲಿ ಜೆಕ್ ರಿಪಬ್ಲಿಕ್‌ನ ಕರೋಲಿನಾ ಪಿಸ್ಕೊವಾ ವಿರುದ್ಧ ಗೆದ್ದರೆ, ಅಮೆರಿಕದ ಬರ್ನಾರ್ಡಾ ಪೆರಾ 7–6, 6–2 ರಲ್ಲಿ ಅನೆಟ್ ಕೊಂಟಾವೆಟ್ ಅವರನ್ನು ಸೋಲಿಸಿದರು.

ಅಮೆರಿಕದ ಕೈಲಾ ಡೇ ಮತ್ತು ಮ್ಯಾಡಿಸನ್ ಕೀಸ್ ಅವರೂ ಎರಡನೇ ಸುತ್ತಿಗೆ ಮುನ್ನಡೆದರು.

ನೊವಾಕ್ ಜೊಕೊವಿಚ್ ಆಟದ ವೈಖರಿ –ಎಎಫ್‌ಪಿ ಚಿತ್ರ

ಟೈಗರ್ ಕಪ್: ಮ್ಯಾಕ್ಸ್‌ಮುಲ್ಲರ್, ಸಿಲಿಕಾನ್ ಅಕಾಡೆಮಿ ಫೈನಲ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮ್ಯಾಕ್ಸ್‌ಮುಲ್ಲರ್ ಮತ್ತು ಸಿಲಿಕಾನ್ ಕ್ರಿಕೆಟ್ ಅಕಾಡೆಮಿ ತಂಡಗಳು ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ 16 ವರ್ಷದೊಳಗಿನವರ ವಿಭಾಗದ ಫೈನಲ್ ಪ್ರವೇಶಿಸಿದವು.

ರಾಜರಾಜೇಶ್ವರಿ ಮೆಡಿಕಲ್ ಕಾಲೇಜು ಮೈದಾನದಲ್ಲಿ ಸೋಮವಾರ ನಡೆದ ಸೆಮಿಫೈನಲ್‌ನಲ್ಲಿ ಮ್ಯಾಕ್ಸ್ ಮುಲ್ಲರ್ ತಂಡ 19 ರನ್‌ಗಳಿಂದ ಸಿಕ್ಸ್ ಕ್ರಿಕೆಟ್ ಅಕಾಡೆಮಿ ತಂಡವನ್ನು ಮಣಿಸಿತು. ಇನ್ನೊಂದು ನಾಲ್ಕ-ರಘಟ್ಟದ ಹಣಾಹಣಿಯಲ್ಲಿ ಸಿಲಿಕಾನ್ ಕ್ರಿಕೆಟ್ ಅಕಾಡೆಮಿ 9 ರನ್‌ಗಳಿಂದ ಕ್ರೀಡಾಕ್ಷೇತ್ರ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರ್: ಮ್ಯಾಕ್ಸ್ ಮುಲ್ಲರ್: 26.2 ಓವರ್‌ಗಳಲ್ಲಿ 147 (ನಿತೀಶ್ ಆರ್ಯ 61, ವರುಣ್ ಪಟೇಲ್ 27, ಕೆ.ಪಿ.ಅಹಾನ್ 11ಕ್ಕೆ 3, ಭುವನ್ 27ಕ್ಕೆ 3, ಅನಿರುದ್ಧ್ ದೀಪಕ್ 39ಕ್ಕೆ 3) ಸಿಕ್ಸ್ ಕ್ರಿಕೆಟ್ ಅಕಾಡೆಮಿ 30 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 128 (ಈಶನ್ 39, ಪ್ರತ್ಯೂಷ್ ಗುಪ್ತಾ 21, ಅನಿರುದ್ಧ್ ದೀಪಕ್ 20, ಅಭ್ಯುದಯ್ ಭಾರ್ಗವ್ 19ಕ್ಕೆ 2, ರಂಜೋಧ್ ರಾಘವನ್ 29ಕ್ಕೆ 2, ಆರ್ಯ ಕೆ ಗೌಡ 35ಕ್ಕೆ 2) ಫಲಿತಾಂಶ: ಮ್ಯಾಕ್ಸ್ ಮುಲ್ಲರ್‌ಗೆ 19 ರನ್ ಗೆಲುವು

ಸಿಲಿಕಾನ್ ಕ್ರಿಕೆಟ್ ಅಕಾಡೆಮಿ: 30 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 190 (ಎಂ.ಪಿ.ಶಶಾಂಕ್ 60, ಎಂ.ಶಿವು 44, ಮನೀಷ್ 26, ವಿಜಯ್ 23ಕ್ಕೆ 2) ಕ್ರೀಡಾ ಕ್ಷೇತ್ರ 29.3 ಓವರ್‌ಗಳಲ್ಲಿ 181 (ರೋನೆಲ್ 54, ಕೆ.ಅಶ್ವಥ್ 39, ಅದ್ವೈತ್ 8ಕ್ಕೆ 2, ಮದನ್ ಪಾಟೀಲ್ 21ಕ್ಕೆ 2, ಗಗನ್ 39ಕ್ಕೆ 2) ಫಲಿತಾಂಶ: ಸಿಲಿಕಾನ್ ಅಕಾಡೆಮಿಗೆ 9 ರನ್ ಜಯ

ಚೆಸ್: ಅಗ್ರಸ್ಥಾನದಲ್ಲಿ ವಿಯಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಯಾನಿ ಡಿಕುನ್ಹ ಅವರು ಅಕ್ಷಯಕಲ್ಪ ಆರ್ಗ್ಯಾನಿಕ್ ಕರ್ನಾಟಕ ರಾಜ್ಯ ಓಪನ್ ಫಿಡೆ ರೇಟೆಡ್ ಚೆಸ್ ಚಾಂಪಿಯನ್‌ಷಿಪ್‌ನ ಏಳನೇ ಸುತ್ತಿನ ಬಳಿಕ ಅಗ್ರಸ್ಥಾನದಲ್ಲಿ ಮುನ್ನಡೆದಿದ್ದಾರೆ.

ಕೋಣನಕುಂಟೆಯ ಫೋರಂ ಮಾಲ್‌ನಲ್ಲಿ ನಡೆಯುತ್ತಿರುವ ಈ ಚಾಂಪಿಯನ್‌ಷಿಪ್‌ನಲ್ಲಿ ಸೋಮವಾರ ನಡೆದ ಏಳನೇ ಸುತ್ತಿನಲ್ಲಿ ವಿಯಾನಿ ಅವರು ಎ.ಆಗಸ್ಟಿನ್ ವಿರುದ್ಧ ಗೆದ್ದರು. ಆರನೇ ಸುತ್ತಿನಲ್ಲಿ ಅವರು ಗವಿ ಸಿದ್ದಯ್ಯ ಅವರನ್ನು ಮಣಿಸಿದ್ದರು.

ಆರ್.ಪಾರ್ಥಸಾರಥಿ, ಶರಣ್ ರಾವ್ ಮತ್ತು ಡಿ.ಯಶಸ್ ಅವರು ತಲಾ 6.5 ಪಾಯಿಂಟ್ಸ್‌ಗಳೊಂದಿ-ಗೆ ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ. ಪಾರ್ಥಸಾರಥಿ (1938) ಅವರು ಏಳನೇ ಸುತ್ತಿನಲ್ಲಿ ತಮಗಿಂತ ಮೇಲಿನ ರ್‍ಯಾಂಕ್‌ನ ಆಟಗಾರ ಶರಣ್ (2248) ಜೊತೆ ಡ್ರಾ ಮಾಡಿಕೊಂಡರು.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

An ISO9001:2015 & 14001:2015 Company

ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂ.5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560 055.
ದೂರವಾಣಿ: 080–22164879, 22164886 ಇ–ಮೇಲ್: ksdl.dgmmtls@gmail.com
ವೆಬ್‌ಸೈಟ್: www.mysoresandal.org

ದಿನಾಂಕ: 29.05.2023

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ 2.0 ಜಾಲತಾಣ (https://kppp.karnataka.gov.in) ದ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2023-24/ IND0001	2023–24ನೇ ಸಾಲಿಗೆ ವಿವಿಧ ಮಾದರಿಯ HP ಮೇಕ್ ಲೇಸರ್ ಜೆಟ್ ಒರಿಜಿನಲ್ ಪ್ರಿಂಟರ್ ಕಾಟ್ರಿಡ್ಜ್‌ಗಳ ಖರೀದಿ	ಸರಕು	25.05.2023	08.06.2023
2	KSDL/2023-24/ IND0003	2023–24ನೇ ಸಾಲಿಗೆ ಮಹಿಳಾ ಉದ್ಯೋಗಿಗಳಿಗೆ ಸಮವಸ್ತ್ರದ ಸೀರೆಗಳ ಖರೀದಿ	ಸರಕು	25.05.2023	03.06.2023
3	KSDL/2023-24/ IND0004	2023–24ನೇ ಸಾಲಿಗೆ ಕೆಎಸ್&ಡಿಎಲ್ ಅಧಿಕಾರಿಗಳು ಮತ್ತು ಉದ್ಯೋಗಿಗಳಿಗೆ ಶೂಗಳು ಮತ್ತು ಸಾಕ್ಸ್‌ಗಳ ಖರೀದಿ	ಸರಕು	25.05.2023	03.06.2023
4	KSDL/2023-24/ IND0007	ಉಚಿತ ಟೂತ್ ಬ್ರಷ್‌ನೊಂದಿಗೆ 50 ಗ್ರಾಂ ಫ್ಲೋರೈಡ್ ಟೂತ್ ಪೇಸ್ಟ್‌ನ ಖರೀದಿ	6500000 ಸಂ.	25.05.2023	26.06.2023
5	KSDL/2023-24/ IND0008	2023–24ನೇ ಸಾಲಿಗೆ ಮಹಿಳಾ ಉದ್ಯೋಗಿಗಳಿಗೆ ಚಪ್ಪಲಿಗಳ ಖರೀದಿ	134 ಜೊತೆ	25.05.2023	03.06.2023
6	KSDL/2023-24/ IND0005	2023–24ನೇ ಸಾಲಿಗೆ ಸಮವಸ್ತ್ರದ ಸೂಟಿಂಗ್ ಮತ್ತು ಶರ್ಟಿಂಗ್‌ಗಳ ಖರೀದಿ	ಸರಕು	25.05.2023	03.06.2023
7	KSDL/2023-24/ IND0006	ನವೀಕರಿಸಿದ HRD ಇಲಾಖೆಗೆ HP ಮೇಕ್ ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳ ಖರೀದಿ	6 ಸಂ.	26.05.2023	12.06.2023
8	KSDL/2023-24/ SE0002	ಹೈದರಾಬಾದ್, ಬೆಂಗಳೂರು ಮತ್ತು ಚೆನ್ನೈ ಶಾಖೆಯ ಗುತ್ತಿಗೆ ನೌಕರರಿಗೆ ಗುಂಪು ವೈದ್ಯಕೀಯ ವಿಮೆ ಅನುಷ್ಠಾನಕ್ಕೆ ಟೆಂಡರ್ ಆಹ್ವಾನ	ಸೇವೆಗಳು	26.05.2023	12.06.2023
9	KSDL/2023-24/ IND0009	ಎಂಎಸ್ ಬಾಡಿ ವಾಶ್ 200ml ಗಾಗಿ ಮಲ್ಟಿ ಲೇಯರ್ ಲ್ಯಾಮಿಟ್ಯೂಬ್ ಖರೀದಿ	182000 ಸಂ.	26.05.2023	07.06.2023
10	KSDL/2023-24/ IND0011	1000ml PALD ಬಾಟಲಿಯನ್ನು ತುಂಬಲು ಪಾರ್ಟಿಷನ್ ಮತ್ತು ಟಾಪ್ ಪ್ಲೇಟ್‌ನೊಂದಿಗೆ ಕಾರೋಗೇಟೆಡ್ ಬಾಕ್ಸ್‌ನ ಖರೀದಿ	3500 ಸೆಟ್	26.05.2023	13.06.2023
11	KSDL/2023-24/ IND0010	KS&DL ನ ಪುರುಷ ಮತ್ತು ಮಹಿಳಾ ಉದ್ಯೋಗಿಗಳಿಗೆ ಜರ್ಕಿನ್‌ಗಳ ಖರೀದಿ	ಸರಕು	27.05.2023	07.06.2023

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಕೆಳಸಹಿದಾರರನ್ನು ಸಂಪರ್ಕಿಸಬಹುದು.

ಸಹಿ/- ಸ.ಪ್ರ.ವ್ಯ. (ಸಾಮಗ್ರಿ)

ಧೋನಿ ಬಳಗಕ್ಕೆ ಕಠಿಣ ಗುರಿಯೊಡ್ಡಿದ ಗುಜರಾತ್ ಟೈಟನ್ಸ್; ವೃದ್ಧಿಮಾನ್ ಸಹಾ ಅರ್ಧಶತಕ

ಸುದರ್ಶನ್ ಅಬ್ಬರಕ್ಕೆ ಬೆಚ್ಚಿದ ಚೆನ್ನೈ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್ ಟೈಟನ್ಸ್ ತಂಡದಲ್ಲಿರುವ ತಮಿಳುನಾಡು ಹುಡುಗ ಸಾಯಿ ಸುದರ್ಶನ್ ತಮ್ಮ ಅಬ್ಬರದ ಬ್ಯಾಟಿಂಗ್ ಮೂಲಕ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಕಠಿಣ ಸವಾಲೊಡ್ಡಿದರು.

ನಾಲ್ಕು ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡ ಸುದರ್ಶನ್ (96; 47ಎ) ಗುಜರಾತ್ ಟೈಟನ್ಸ್ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 214 ರನ್‌ಗಳ ಬೃಹತ್ ಮೊತ್ತ ಪೇರಿಸಲು ಕಾರಣರಾದರು.

ಭಾನುವಾರ ಸುರಿದ ಮಳೆಯಿಂದಾಗಿ ಫೈನಲ್ ಪಂದ್ಯವನ್ನು ಸೋಮವಾರಕ್ಕೆ ಮುಂದೂಡಲಾಗಿತ್ತು. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಚೆನ್ನೈ ತಂಡದ ನಾಯಕ ಮಹೇಂದ್ರಸಿಂಗ್ ಧೋನಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು.

ಆದರೆ, ಮೊದಲ ಪವರ್ ಪ್ಲೇನಲ್ಲಿ ದೀಪಕ್ ಚಾಹರ್ ಅವರ ಫೀಲ್ಡಿಂಗ್ ಲೋಪ ಮತ್ತು ಕಳಪೆ ಬೌಲಿಂಗ್‌ನಿಂದಾಗಿ ಗುಜರಾತ್ ತಂಡದ ಖಾತೆಗೆ ರನ್‌ಗಳು ಹರಿದವು. ಎರಡನೇ ಓವರ್‌ನಲ್ಲಿ ತುಷಾರ್ ದೇಶಪಾಂಡೆ ಎಸೆತದಲ್ಲಿ ಶುಭಮನ್ ಫ್ಲಿಕ್ ಮಾಡಿದ ಚೆಂಡನ್ನು ಕ್ಯಾಚ್ ಮಾಡುವಲ್ಲಿ ದೀಪಕ್ ವಿಫಲರಾದರು. ತಾವೇ ಹಾಕಿದ ಐದನೇ ಓವರ್‌ನಲ್ಲಿ ವೃದ್ಧಿಮಾನ್ ಸಹಾ ಅವರ ಕ್ಯಾಚ್ ಅನ್ನು ಪಡೆಯುವ ದೀಪಕ್ ಪ್ರಯತ್ನ ಕೈಗೂಡಲಿಲ್ಲ. ಇದರಿಂದಾಗಿ ಏಳೂ ಓವರ್‌ಗಳಲ್ಲಿ 67 ರನ್‌ಗಳು ಸೇರಿದವು.

ಇದರಿಂದಾಗಿ ಜಡೇಜ ಅವರನ್ನು ಕಣಕ್ಕಿಳಿಸಿದ ಧೋನಿ ಯೋಜನೆ ಕೈಗೂಡಿತು. ಸ್ಪಿನ್ ಎಸೆತವನ್ನು ಮುಂದೆ ಹೆಜ್ಜೆ ಇಟ್ಟು ಆಡಲು ಯತ್ನಿಸಿದ ಶುಭಮನ್ ಗಿಲ್ ಅವರನ್ನು ಮಿಂಚಿನ ವೇಗದಲ್ಲಿ ಸ್ಟಂಪ್ ಮಾಡಿದ ಧೋನಿ ಮೇಲುಗೈ ಸಾಧಿಸಿದರು. ಟೂರ್ನಿಯಲ್ಲಿ ಮೂರು ಶತಕ ಮತ್ತು ಅತಿ ಹೆಚ್ಚು ರನ್ ಗಳಿಸಿರುವ ಸಾಧನೆ ಮಾಡಿರುವ ಗಿಲ್ ಔಟಾಗಿದ್ದು ಚೆನ್ನೈ ತಂಡದಲ್ಲಿ ಸಮಾಧಾನ ಮೂಡಿಸಿತು. ಆದರೆ ಕ್ರೀಸ್‌ಗೆ ಬಂದ 21 ವರ್ಷದ ಸುದರ್ಶನ್ ಬೌಲರ್‌ಗಳನ್ನು ದಂಡಿಸಿದರು. ಸಹಾ ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 64 ರನ್‌ಗಳನ್ನು ಸೇರಿಸಿದರು.

14ನೇ ಓವರ್‌ನಲ್ಲಿ ಚಾಹರ್ ಎಸೆತವನ್ನು ಹೊಡೆಯುವ ಪ್ರಯತ್ನದಲ್ಲಿ ಧೋನಿ ಪಡೆದ ಕ್ಯಾಚ್‌ಗೆ ಸಹಾ (54; 39ಎ, 4X5, 6X1) ನಿರ್ಗಮಿಸಿದರು. ಜೊತೆಯಾಟ ಮುರಿದುಬಿತ್ತು. ಆದರೆ ಸಾಯಿ ಆಟದ ವೇಗ ಹೆಚ್ಚಾಯಿತು!

ಕೊನೆಯ ಆರು ಓವರ್‌ಗಳಲ್ಲಿ ಸುದರ್ಶನ ಅಬ್ಬರದ ಆಟದಿಂದಾಗಿ 81 ರನ್‌ಗಳು ತಂಡದ ಮೊತ್ತಕ್ಕೆ ಸೇರಿದವು. ಪಥಿರಾಣ, ತೀಕ್ಷಣ, ತುಷಾರ್ ದೇಶಪಾಂಡೆ ಅವರ ಎಸೆತಗಳನ್ನು ಎಗ್ಗಿಲ್ಲದೇ ಸಿಕ್ಸರ್‌ಗೆ ಎತ್ತಿದ ಸುದರ್ಶನ್ ಮಿಂಚಿದರು.

204.26ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ ಸುದರ್ಶನ್ ಆರು ಸಿಕ್ಸರ್ ಹಾಗೂ ಎಂಟು ಬೌಂಡರಿ ಬಾರಿಸಿದರು. ವೈಡ್ ಎಸೆತಗಳು, ಯಾರ್ಕರ್, ಸ್ವಿಂಗ್ ಎಸೆತಗಳಿಗೂ ಜಗ್ಗಲಿಲ್ಲ. ಇನ್ನೊಂದು ಬದಿಯಲ್ಲಿದ್ದ ನಾಯಕ ಹಾರ್ದಿಕ್ ಪಾಂಡ್ಯ (ಔಟಾಗದೆ 21; 12ಎ) ಸುದರ್ಶನ್ ಆಟಕ್ಕೆ ಹೆಚ್ಚು ಅವಕಾಶ ನೀಡಿದರು.

ಆದರೆ ಶತಕದಂಚಿನಲ್ಲಿ ಸುದರ್ಶನ್ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಪಥಿರಾಣ ಸಂಭ್ರಮಿಸಿದರು.

ಧೋನಿ ದಾಖಲೆ: ಐಪಿಎಲ್‌ನಲ್ಲಿ ಅತಿ ಹೆಚ್ಚು ಫೈನಲ್ ಪಂದ್ಯಗಳನ್ನು ಆಡಿರುವ ಆಟಗಾರನೆಂಬ ಹೆಗ್ಗಳಿಕೆಗೆ ಮಹೇಂದ್ರಸಿಂಗ್ ಧೋನಿ ಪಾತ್ರರಾದರು. ಅವರು ಒಟ್ಟು 11 ಫೈನಲ್ ಆಡಿದ್ದಾರೆ. ಅವರ ನಂತರದ ಸ್ಥಾನಗಳಲ್ಲಿ ಸುರೇಶ್ ರೈನಾ, ಅಂಬಟಿ ರಾಯುಡು ಹಾಗೂ ರವೀಂದ್ರ ಜಡೇಜ ಇದ್ದಾರೆ. ಮೂವರೂ ತಲಾ ಎಂಟು ಬಾರಿ ಫೈನಲ್‌ನಲ್ಲಿ ಆಡಿದ್ದಾರೆ.

ಗುಜರಾತ್ ಟೈಟನ್ಸ್ ತಂಡದ ಸಾಯಿ ಸುದರ್ಶನ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಆರೆಂಜ್ ಕ್ಯಾಪ್ (ಹೆಚ್ಚು ರನ್)		
ಆಟಗಾರ	ತಂಡ	ರನ್
ಶುಭಮನ್	ಗುಜರಾತ್	890

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)		
ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	28

ಪರಿಷ್ಕೃತ ಗುರಿ

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಇನಿಂಗ್ಸ್ ವೇಳೆ ಮಳೆ ಬಂದ ಕಾರಣ ಆಟ ನಿಂತಿತು. ರಾತ್ರಿ 12.10ಕ್ಕೆ ಆಟ ಮುಂದುವರಿಸಲು ಅಂಪೈರ್‌ಗಳು ನಿರ್ಧರಿಸಿದರು. ಚೆನ್ನೈ ತಂಡದ ಗೆಲುವಿಗೆ 15 ಓವರ್‌ಗಳಲ್ಲಿ 171 ರನ್‌ಗಳ ಪರಿಷ್ಕೃತ ಗುರಿ ನೀಡಲಾಯಿತು.

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್ 4ಕ್ಕೆ214 (20 ಓವರ್‌ಗಳಲ್ಲಿ)

ಸಹಾ ಸಿ ಧೋನಿ ಬಿ ದೀಪಕ್ 54 (39ಎ, 4X5, 6X1)
ಶುಭಮನ್ ಸ್ಟಂಪ್ಡ್ ಧೋನಿ ಬಿ ಜಡೇಜ 39 (20ಎ, 4X7)
ಸುದರ್ಶನ್ ಎಲ್‌ಬಿಡಬ್ಲ್ಯು ಬಿ ಪಥಿರಾಣ 96 (47ಎ, 4X8, 6X6)
ಹಾರ್ದಿಕ್ ಔಟಾಗದೆ 21 (12ಎ, 6X2)
ರಶೀದ್ ಸಿ ಋತುರಾಜ್ ಬಿ ಪಥಿರಾಣ 0 (2ಎ)

ಇತರೆ: 4 (ಬೈ 1, ಲೆಗ್‌ಬೈ 1, ವೈಡ್ 2)
ವಿಕೆಟ್ ಪತನ: 1–67 (ಶುಭಮನ್ ಗಿಲ್; 6.6), 2–131 (ವೃದ್ಧಿಮಾನ್ ಸಹಾ; 13.6), 3–212 (ಸಾಯಿ ಸುದರ್ಶನ್; 19.3), 4–214 (ರಶೀದ್ ಖಾನ್; 19.6)
ಬೌಲಿಂಗ್: ದೀಪಕ್ ಚಾಹರ್ 4–0–38–1, ತುಷಾರ್ ದೇಶಪಾಂಡೆ 4–0–56–0, ಮಹೀಷ ತೀಕ್ಷಣ 4–0–36–0, ರವೀಂದ್ರ ಜಡೇಜ 4–0–38–1, ಮಥೀಷ ಪಥಿರಾಣ 4–0–44–2

ಜೂನಿಯರ್ ಏಷ್ಯಾ ಕಪ್ ಹಾಕಿ: ಸೆಮಿಗೆ ಭಾರತ

ಸಲಾಲ, ಒಮಾನ್(ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಪುರುಷರ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತು.

ಎ ಗುಂಪಿನ ಪಂದ್ಯದಲ್ಲಿ ಭಾರತ ತಂಡವು 17–0ಯಿಂದ ಥಾಯ್ಲೆಂಡ್ ವಿರುದ್ಧ ಜಯಿಸಿತು. ಅದರೊಂದಿಗೆ ಒಟ್ಟು ಹತ್ತು ಅಂಕ ಗಳಿಸಿ ನಾಲ್ಕನೇ ಘಟ್ಟ ಪ್ರವೇಶಿಸಿತು. ಭಾರತ ತಂಡದ ಅಂಗದ್ ವೀರ್ ಸಿಂಗ್ ಈ ಪಂದ್ಯದಲ್ಲಿ ನಾಲ್ಕು ಗೋಲು (13ನಿ, 33ನಿ, 47ನಿ ಹಾಗೂ 55ನಿ) ಗಳಿಸಿದರು.

ಅಂಗದ್ ಅವರಲ್ಲದೇ ಭಾರತದ ಯೋಗೆಂಬರ್ ರಾವತ್ (17ನಿ), ನಾಯಕ ಉತ್ತಮ್ ಸಿಂಗ್ (24ನಿ, 31ನಿ), ಅಮನದೀಪ್ ಲಾಕ್ರಾ (26ನಿ, 29ನಿ), ಅರೈಜಿತ್ ಸಿಂಗ್ ಹುಂಡಾಲ್ (36ನಿ), ವಿಷ್ಣುಕಾಂತ್ ಸಿಂಗ್ (38ನಿ), ಬಾಬಿ ಸಿಂಗ್ ಧಾಮಿ (45ನಿ), ಶಾರದಾನಂದ ತಿವಾರಿ (46ನಿ), ಅಮನದೀಪ್ (47ನಿ), ರೋಹಿತ್ (49ನಿ), ನುನಿತ್ ಲಾಕ್ರಾ (54ನಿ) ಮತ್ತು ರಾಜಿಂದರ್ ಸಿಂಗ್ (56ನಿ) ಗೋಲು ಗಳಿಸಿದರು.

ಈ ಪಂದ್ಯಕ್ಕೂ ಮುನ್ನ ಭಾರತ ತಂಡವು ಚೈನಿಸ್ ತೈಪೆ, ಜಪಾನ್ ವಿರುದ್ಧ ಗೆದ್ದಿತ್ತು. ಪಾಕಿಸ್ತಾನ ಎದುರಿನ ಹಣಾಹಣಿಯು ಡ್ರಾ ಆಗಿತ್ತು.

ಭಾರತ ಮತ್ತು ಥಾಯ್ಲೆಂಡ್ ಜೂನಿಯರ್ ಹಾಕಿ ತಂಡಗಳ ಹಣಾಹಣಿ –ಹಾಕಿ ಇಂಡಿಯಾ ಚಿತ್ರ

ಬಿ ಗುಂಪಿನಲ್ಲಿ ನಡೆಯಲಿರುವ ಒಮನ್ ಮತ್ತು ಮಲೇಷ್ಯಾ ಪಂದ್ಯ ಹಾಗೂ ಎ ಗುಂಪಿನಲ್ಲಿ ಜಪಾನ್ ಹಾಗೂ ಪಾಕಿಸ್ತಾನ ನಡುವಣ ಪಂದ್ಯದ ನಂತರವಷ್ಟೇ ಸೆಮಿಫೈನಲ್‌ನಲ್ಲಿ ಭಾರತಕ್ಕೆ ಮುಖಾಮುಖಿಯಾಗುವ ತಂಡವು ಖಚಿತಗೊಳ್ಳಲಿದೆ.

ಥಾಯ್ಲೆಂಡ್ ಎದುರಿನ ಪಂದ್ಯದಲ್ಲಿ ಭಾರತ ತಂಡವು ಸಂಪೂರ್ಣ ಪಾರಮ್ಯ ಮೆರೆಯಿತು. ಮೊದಲ ಕ್ವಾರ್ಟರ್‌ನಲ್ಲಿ ಅಂಗದ್ ಗೋಲು ಖಾತೆ ತೆರೆದರು. ಅಂತಿಮ ಕ್ವಾರ್ಟರ್ ಅಷ್ಟೊತ್ತಿಗೆ ಭಾರತ ತಂಡವು 10–0 ಮುನ್ನಡೆ ಸಾಧಿಸಿತ್ತು.

ಕ್ರೀಡಾಂಗಣದ ಅವ್ಯವಸ್ಥೆಗೆ ಪ್ರೇಕ್ಷಕರ ಅಸಮಾಧಾನ

ಮಹಿಗಾಗಿ ಮಳೆಯನ್ನೂ ಲೆಕ್ಕಿಸಲಿಲ್ಲ

ಅಹಮದಾಬಾದ್ (ಪಿಟಿಐ): ದೇಶದ ಬೇರೆ ಬೇರೆ ನಗರಗಳಿಂದ ಮಹೇಂದ್ರಸಿಂಗ್ ಧೋನಿ ಆಟವನ್ನು ನೋಡಲೆಂದೇ ಸಾವಿರಾರು ಅಭಿಮಾನಿಗಳೂ ಇಲ್ಲಿಗೆ ಬಂದಿದ್ದಾರೆ.

ಆದರೆ ಫೈನಲ್ ಪಂದ್ಯ ನಡೆಯಲಿದ್ದ ಭಾನುವಾರ ರಭಸದ ಮಳೆ ಸುರಿಯಿತು. ಸೋಮವಾರಕ್ಕೆ ಪಂದ್ಯ ಮುಂದೂಡಲಾಯಿತು. ಆದರೂ ಅಭಿಮಾನಿಗಳ ಉತ್ಸಾಹ ಕುಂದಿಲ್ಲ. ಆದರೆ ಕ್ರೀಡಾಂಗಣದ ಅವ್ಯವಸ್ಥೆಗಳ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಚೆನ್ನೈ, ಬೆಂಗಳೂರು, ಕೊಚ್ಚಿ, ದೆಹಲಿ, ಚಂಡೀಗಡ ಮತ್ತು ಮುಂಬೈ ನಗರಗಳಿಂದ ಬಂದು ಸೇರಿರುವ ಬಹುತೇಕ ಅಭಿಮಾನಿಗಳು ಭಾನುವಾರ ತಡರಾತ್ರಿ ಮತ್ತು ಸೋಮವಾರವೇ ತಮ್ಮ ಊರುಗಳಿಗೆ ಹಿಂದಿರುಗುವವರಿದ್ದರು. ಆದರೆ, ಪಂದ್ಯ ಮುಂದೂಡಿದ್ದರಿಂದ ತಮ್ಮ ವಿಮಾನಯಾನ ಟಿಕೆಟ್‌ಗಳನ್ನು ರದ್ದುಗೊಳಿಸಿದ್ದಾರೆ.

ಮಂಗಳವಾರದ ಟಿಕೆಟ್‌ಗಳಿಗೆ ಹೆಚ್ಚು ಹಣ ಕೊಟ್ಟು ಖರೀದಿಸಿದ್ದಾರೆ. ಪಂದ್ಯ ವೀಕ್ಷಿಸಿಯೇ ಮರಳಲು ನಿರ್ಧರಿಸಿದ್ದಾರೆ. ಕೆಲವರು ತಮ್ಮ ಹೋಟೆಲ್ ಕೋಣೆಗಳನ್ನು ಒಂದು ಹೆಚ್ಚುವರಿ ದಿನಕ್ಕೆ ಉಳಿಸಿಕೊಂಡಿದ್ದಾರೆ. ಇನ್ನಷ್ಟು ಜನರು ರಾತ್ರಿಯನ್ನು ರೈಲ್ವೆ ನಿಲ್ದಾಣದಲ್ಲಿ ಕಳೆದಿರುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ ಕೆಲವು ಅಭಿಮಾನಿಗಳು ಅನಿವಾರ್ಯ ಕಾರಣಗಳಿಂದ ತಮ್ಮ ಊರುಗಳಿಗೆ ಮರಳಿದ್ದಾರೆ.

ತಮ್ಮ ನೆಚ್ಚಿನ 'ಥಾಲಾ' ಧೋನಿಯವರ ವೃತ್ತಿಜೀವನದ ಕೊನೆಯ ಐಪಿಎಲ್ ಪಂದ್ಯ ಇದಾಗುವ ಸಾಧ್ಯತೆ ಇದೆ. ಮುಂದಿನ ವರ್ಷದ ಐಪಿಎಲ್‌ಗೂ ಮುನ್ನ ಅವರು ನಿವೃತ್ತಿ ಘೋಷಿಸಬಹುದು ಎನ್ನಲಾಗಿದೆ. ಆದ್ದರಿಂದಲೇ ಅವರ ಆಟವನ್ನು ಕಣ್ಮನ ತುಂಬಿಕೊಳ್ಳಲು ಅಭಿಮಾನಿಗಳು ಮುಗಿಬಿದ್ದಿದ್ದಾರೆ. 7 ಅಂಕಿ ಇರುವ ಹಳದಿ ಬಣ್ಣದ ಪೋಷಾಕು ತೊಟ್ಟು ಕ್ರೀಡಾಂಗಣದಲ್ಲಿ ಸೇರಿದ್ದರು.

'ನನ್ನ ಹತ್ತು ವರ್ಷದ ಮಗನಿಗೆ ಧೋನಿಯೆಂದರೆ ಅಚ್ಚುಮೆಚ್ಚು. ಅದಕ್ಕಾಗಿಯೇ ಡಗ್‌ಔಟ್ ಪಕ್ಕದ ಗ್ಯಾಲರಿಯ ಟಿಕೆಟ್ ಖರೀದಿಸಿದ್ದೆ. ಆದರೆ ಮಳೆಯಿಂದಾಗಿ ಅಲ್ಲಿ ಕೂರಲು ಸಾಧ್ಯವಾಗಲಿಲ್ಲ. ಜನಸಂದಣಿ ಹೆಚ್ಚಿದ್ದ ಕಾರಣ ಗ್ಯಾಲರಿಯೊಳಗೆ ಇರುವುದು ಸುರಕ್ಷಿತವೂ ಆಗಿರಲಿಲ್ಲ. ಆದ್ದರಿಂದ ಪತ್ನಿ, ಮಕ್ಕಳನ್ನು ಕರೆದುಕೊಂಡು ಹೊರಬರಬೇಕಾಯಿತು' ಎಂದು ಅಭಿಮಾನಿ ಕೆಡಿಯಾ ಬೇಸರ ವ್ಯಕ್ತಪಡಿಸಿದರು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ 1.32 ಲಕ್ಷ ಆಸನ ಸಾಮರ್ಥ್ಯವಿದೆ. ಆದರೆ ಭಾನುವಾರ ಮಳೆಯಿಂದಾಗಿ ನೀರು ಹರಿದು ಹೋಗುವ ವ್ಯವಸ್ಥೆ ಸರಿಯಿರದ ಕಾರಣ ಕೆಲವರು ಬೇಸರ ವ್ಯಕ್ತಪಡಿಸಿದ್ದಾರೆ.

'ನನಗೆ ಅಪಾರ ಬೇಸರವಾಗಿದೆ. ನನ್ನ ಪಾಲಿಗೆ ಕೆಟ್ಟ ಅನುಭವದ ದಿನ ಇದಾಗಿದೆ. ಗ್ಯಾಲರಿಯಲ್ಲಿ 30 ನಿಮಿಷ ಮಳೆಯಲ್ಲಿಯೇ ನಿಲ್ಲಬೇಕಾಯಿತು. ಚಾವಣಿ ಇದ್ದೆಡೆ ಜನರು ಮಳೆಯಿಂದ ತಪ್ಪಿಸಿಕೊಳ್ಳಲು ಕಿಕ್ಕಿರಿದು ನಿಂತಿದ್ದರು. ಒಳಚರಂಡಿ ನೀರು ಕೂಡ ಅಲ್ಲಲ್ಲಿ ನುಗ್ಗುತ್ತಿತ್ತು. ಬಹಳಷ್ಟು ಜನರು ಜಾರಿ ಬಿದ್ದಿದ್ದನ್ನು ನೋಡಿದೆ. ನಾನು ಇಲ್ಲಿಯ ಬಿಜೆ. ಮೆಡಿಕಲ್ ಕಾಲೇಜಿನ ಹಳೆಯ ವಿದ್ಯಾರ್ಥಿನಿ. ಆದ್ದರಿಂದ ವಸತಿಗೆ ಸಮಸ್ಯೆಯಾಗಲಿಲ್ಲ. ವಿಮಾನದ ಟಿಕೆಟ್‌ಗಳನ್ನು ಮಂಗಳವಾರಕ್ಕೆ ಮುಂದೂಡಿದೆ' ಎಂದು ಉತ್ತರಾಖಂಡದಿಂದ ಬಂದಿದ್ದ ಡಾ. ಅಭಿಲಾಷಾ ನೇಗಿ ಹೇಳಿದರು.

ಚೆನ್ನೈ ಸೂಪರ್ ಕಿಂಗ್ಸ್ ಪೋಷಾಕಿನಲ್ಲಿ ಅಭಿಮಾನಿಗಳ ಸಂಭ್ರಮ –ಪಿಟಿಐ ಚಿತ್ರ

ಸಿಂಧು, ಶ್ರೀಕಾಂತ್‌ಗೆ ಪ್ರಶಸ್ತಿ ನಿರೀಕ್ಷೆ

ಥಾಯ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ

ಬ್ಯಾಂಕಾಕ್ (ಪಿಟಿಐ): ಭಾರತದ ಪಿ.ವಿ. ಸಿಂಧು ಮತ್ತು ಕೆ.ಶ್ರೀಕಾಂತ್ ಅವರು ಮಂಗಳವಾರ ಇಲ್ಲಿ ಆರಂಭವಾಗಲಿರುವ ಥಾಯ್ಲೆಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ.

ಭಾನುವಾರ ಕೊನೆಗೊಂಡಿದ್ದ ಮಲೇಷ್ಯಾ ಮಾಸ್ಟರ್ಸ್ ಟೂರ್ನಿಯಲ್ಲಿ ಸಿಂಧು ಮಹಿಳೆಯರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಎಡವಿದ್ದರೆ, ಶ್ರೀಕಾಂತ್ ಅವರು ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಸೋತಿದ್ದರು.

ಎರಡು ಬಾರಿ ಒಲಿಂಪಿಕ್ಸ್ ಪದಕ ಗೆದ್ದಿರುವ ಸಿಂಧು, ಹಲವು ದಿನಗಳಿಂದ ಪ್ರಶಸ್ತಿ ಬರ ಎದುರಿಸುತ್ತಿದ್ದಾರೆ. ಮ್ಯಾಡ್ರಿಡ್ ಸ್ಪೇನ್ ಮಾಸ್ಟರ್ಸ್ ಟೂರ್ನಿಯ ಫೈನಲ್‌ನಲ್ಲಿ ಅವರು ಸೋತಿದ್ದರು. ಹೈದರಾಬಾದ್‌ನ 27 ವರ್ಷದ ಆಟಗಾರ್ತಿ ಮೊದಲ ಸುತ್ತಿನಲ್ಲಿ ಕೆನಡಾದ ಮಿಷೆಲ್ ಲಿ ವಿರುದ್ಧ ಪೈಪೋಟಿ ನಡೆಸುವರು. ಮೊದಲ ಸುತ್ತಿನ ತಡೆ ದಾಟುವಲ್ಲಿ ಯಶಸ್ವಿಯಾದರೆ, ಎರಡನೇ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಆಟಗಾರ್ತಿ ಚೀನಾದ ವಾಂಗ್ ಜಿ ಯಿ ಎದುರಾಗುವ ಸಾಧ್ಯತೆಯಿದೆ.

ಪಿ.ವಿ.ಸಿಂಧು

ಶ್ರೀಕಾಂತ್ ಅವರು ಮೊದಲ ಸುತ್ತಿನಲ್ಲಿ ಚೀನಾದ ವೆಂಗ್ ಹಾಂಗ್ ಯಾಂಗ್ ಅವರ ಸವಾಲು ಎದುರಿಸುವರು. ಭಾನುವಾರ ನಡೆದಿದ್ದ ಮಲೇಷ್ಯಾ ಮಾಸ್ಟರ್ಸ್ ಟೂರ್ನಿಯ ಫೈನಲ್‌ನಲ್ಲಿ ಚೀನಾದ ಆಟಗಾರ, ಭಾರತದ ಎಚ್.ಎಸ್.ಪ್ರಣಯ್ ಕೈಯಲ್ಲಿ ಪರಾಭವಗೊಂಡಿದ್ದರು.

ಲಕ್ಷ್ಯ ಸೇನ್ ಅವರು ಮೊದಲ ಸುತ್ತಿನಲ್ಲಿ ಚೀನಾ ತೈಪೆಯ ವಾಂಗ್ ತ್ಸು ವೀ ಅವರ ಸವಾಲು ಎದುರಿಸಲಿದ್ದಾರೆ. ಕಳೆದ ಕೆಲ ತಿಂಗಳುಗಳಿಂದ ಫಾರ್ಮ್ ಕಂಡುಕೊಳ್ಳಲು ಪರದಾಡುತ್ತಿರುವ ಲಕ್ಷ್ಯ ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರ 20 ರಲ್ಲಿ ಸ್ಥಾನ ಕಳೆದುಕೊಂಡಿದ್ದರು.

ಪ್ರಿಯಾಂಶು ರಾಜಾವತ್ ಅವರು ಮೊದಲ ಸುತ್ತಿನಲ್ಲಿ ಮಲೇಷ್ಯಾದ ಎಂಗ್ ತ್ಸೆ ಯಾಂಗ್ ಅವರನ್ನು ಎದುರಿಸುವರು.

ಎಫ್‌ಬಿಕೆ ಕೂಟ: ಹಿಂದೆ ಸರಿದ ನೀರಜ್

ನವದೆಹಲಿ (ಪಿಟಿಐ): ಭಾರತದ ಜಾವೆಲಿನ್ ಥ್ರೊ ಸ್ಪರ್ಧಿ ನೀರಜ್ ಚೋಪ್ರಾ ಅವರು ಮುಂದಿನ ತಿಂಗಳು ನೆದರ್ಲೆಂಡ್ಸ್‌ನಲ್ಲಿ ನಡೆಯಲಿರುವ ಎಫ್‌ಬಿಕೆ ಅಥ್ಲೆಟಿಕ್ ಕೂಟದಿಂದ ಹಿಂದೆ ಸರಿದಿದ್ದಾರೆ.

ನೀರಜ್

'ಇತ್ತೀಚೆಗೆ ತರಬೇತಿ ನಡೆಸುತ್ತಿದ್ದಾಗ ಸ್ನಾಯು ಸೆಳೆತಕ್ಕೆ ಒಳಗಾಗಿದ್ದೆ. ನೋವು ಉಲ್ಬಣಿಸುವ ಸಾಧ್ಯತೆಯಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಕೂಟದಿಂದ ಹಿಂದೆ ಸರಿಯಲು ನಿರ್ಧರಿಸಿದ್ದೇನೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ವಿಶ್ವ ಅಥ್ಲೆಟಿಕ್ಸ್‌ನ ಕಾಂಟಿನೆಂಟಲ್ ಗೋಲ್ಡ್ ಲೆವೆಲ್ ಕೂಟ ಎನಿಸಿರುವ ಎಫ್‌ಬಿಕೆ ಕೂಟವು ಜೂನ್ 4 ರಂದು ನಡೆಯಲಿದೆ.

25 ವರ್ಷದ ನೀರಜ್ ಅವರು ಈಚೆಗೆ ಜಾವೆಲಿನ್ ಥ್ರೊ ಸ್ಪರ್ಧಿಗಳ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದರು.

ಮೇ 5 ರಂದು ನಡೆದಿದ್ದ ದೋಹಾ ಡೈಮಂಡ್ ಲೀಗ್‌ನಲ್ಲಿ ಅವರು ಅಗ್ರಸ್ಥಾನ ಗಳಿಸಿದ್ದರು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೆ ಭಾರತ ತಂಡದ ಸಿದ್ಧತೆ

ಅಭ್ಯಾಸ ಆರಂಭಿಸಿದ ವಿರಾಟ್ ಕೊಹ್ಲಿ

ಅರುಂಡೆಲ್, ಸಸೆಕ್ಸ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಒಟ್ಟು ಎರಡು ಶತಕ ಸಿಡಿಸಿದ್ದ ವಿರಾಟ್ ಕೊಹ್ಲಿ ಈಗ ಟೆಸ್ಟ್ ಮಾದರಿಗೆ ಮರಳಲು ಸಿದ್ಧರಾಗಿದ್ದಾರೆ.

ಜೂನ್ 7ರಿಂದ ಇಂಗ್ಲೆಂಡ್‌ನ ಓವಲ್‌ನಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಕಣಕ್ಕಿಳಿಯಲಿರುವ ಭಾರತ ತಂಡವನ್ನು ಸೇರಿಕೊಂಡಿದ್ದಾರೆ. ಸೋಮವಾರ ಅರುಂಡೆಲ್ ಕ್ಯಾಸಲ್ ಕ್ರಿಕೆಟ್ ಕ್ಲಬ್‌ನಲ್ಲಿ ಎಡಗೈ ಮಧ್ಯಮವೇಗಿ ಜೈದೇವ್ ಉನದ್ಕತ್ ಅವರೊಂದಿಗೆ ಅಭ್ಯಾಸ ನಡೆಸಿದರು.

ಐಪಿಎಲ್‌ನಲ್ಲಿ ಆಡುವಾಗ ತಮ್ಮ ಎಡಭುಜದ ಗಾಯದ ಚಿಕಿತ್ಸೆಗಾಗಿ ಉನದ್ಕತ್ ತಂಡದಿಂದ ಹೊರಬಿದ್ದಿದ್ದರು. ಇದೀಗ ಅವರು ಫಿಟ್ ಆಗಿ ರಾಷ್ಟ್ರೀಯ ತಂಡಕ್ಕೆ ಮರಳಿದ್ದಾರೆ.

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ಮಂಗಳವಾರ ತಂಡವನ್ನು ಸೇರಿಕೊಳ್ಳುವರು. ಅವರ ನಾಯಕತ್ವದ ಮುಂಬೈ ಇಂಡಿಯನ್ಸ್ ತಂಡವು ಐಪಿಎಲ್‌ನಲ್ಲಿ ಪ್ಲೇಆಫ್ ಪ್ರವೇಶಿಸಿತ್ತು.

'ಭಾರತ ತಂಡದ ಆಟಗಾರರು ಆಸ್ಟ್ರೇಲಿಯಾ ಎದುರಿನ ಡಬ್ಲ್ಯುಟಿಸಿ ಫೈನಲ್‌ಗಾಗಿ ಅರುಂಡೆಲ್ ಕ್ಯಾಸಲ್ ಕ್ರಿಕೆಟ್ ಕ್ಲಬ್‌ನಲ್ಲಿ ಅಭ್ಯಾಸ ಆರಂಭಿಸಿದ್ದಾರೆ' ಎಂದು ಬಿಸಿಸಿಐ ಟ್ವೀಟ್ ಮಾಡಿದೆ.

ನೂತನ ಪೋಷಾಕು ಧರಿಸಿಕೊಂಡ ಕೊಹ್ಲಿ, ಉಮೇಶ್ ಯಾದವ್, ಮೊಹಮ್ಮದ್ ಸಿರಾಜ್ ಅವರು ಜಾಗಿಂಗ್ ಮಾಡಿದರು. ಆಫ್‌ಸ್ಪಿನ್ನರ್ ಆರ್. ಅಶ್ವಿನ್ ನೆಟ್ಸ್‌ನಲ್ಲಿ ಬೌಲಿಂಗ್ ಅಭ್ಯಾಸ ಮಾಡಿದರು. ಉನದ್ಕತ್ ಅವರು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹಾಗೂ ಬೌಲಿಂಗ್ ತರಬೇತುದಾರ ಪಾರಸ್ ಮಾಂಬ್ರೆ ಅವರೊಂದಿಗೆ ಸಮಾಲೋಚನೆ ನಡೆಸಿದರು.

ಚೇತೇಶ್ವರ್ ಪೂಜಾರ ಅವರು ಸಸೆಕ್ಸ್ ತಂಡದ ಪರವಾಗಿ ಕೌಂಟಿ ಕ್ರಿಕೆಟ್‌ನಲ್ಲಿ ಆಡುತ್ತಿದ್ದಾರೆ.

ಜೈಸ್ವಾಲ್ ಸೇರ್ಪಡೆ: ಮುಂಬೈ ತಂಡದ ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರನ್ನೂ ತಂಡಕ್ಕೆ ಆಯ್ಕೆ ಮಾಡಲಾಗಿದೆ. ಋತುರಾಜ್ ಗಾಯಕವಾಡ ಬದಲಿಗೆ ಜೈಸ್ವಾಲ್ ಅವರನ್ನು ಆಯ್ಕೆ ಮಾಡಲಾಗಿದೆ.

ಗಾಯಕವಾಡ್ ಅವರ ವಿವಾಹ ಸಮಾರಂಭವು ಜೂನ್ 3 ಮತ್ತು 4ರಂದು ನಡೆಯಲಿದೆ.

ಉಮೇಶ್ ಯಾದವ್, ಸಿರಾಜ್ ಮತ್ತು ವಿರಾಟ್ ಕೊಹ್ಲಿ ತಾಲೀಮು –ಪಿಟಿಐ ಚಿತ್ರ

ಆಸ್ಟ್ರೇಲಿಯಾ ತಂಡಕ್ಕೆ ಜೋಶ್

ಲಂಡನ್ (ಪಿಟಿಐ): ವೇಗಿ ಜೋಶ್ ಹ್ಯಾಜಲ್‌ವುಡ್ ಅವರಿಗೆ ಡಬ್ಲ್ಯುಟಿಸಿ ಫೈನಲ್‌ನಲ್ಲಿ ಆಡಲಿರುವ ಆಸ್ಟ್ರೇಲಿಯಾ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಸೋಮವಾರ 15 ಆಟಗಾರರ ತಂಡವನ್ನು ಕ್ರಿಕೆಟ್ ಆಸ್ಟ್ರೇಲಿಯಾ ಆಯ್ಕೆ ಮಾಡಿದೆ. ಪ್ಯಾಟ್ ಕಮಿನ್ಸ್ ತಂಡವನ್ನು ಮುನ್ನಡೆಸುವರು.

32 ವರ್ಷದ ಹ್ಯಾಜಲ್‌ವುಡ್ ಅವರು ಐಪಿಎಲ್‌ನಲ್ಲಿ ಆರ್‌ಸಿಬಿ ತಂಡವನ್ನು ಪ್ರತಿನಿಧಿಸಿದ್ದರು.

ತಂಡ : ಪ್ಯಾಟ್ ಕಮಿನ್ಸ್ (ನಾಯಕ), ಸ್ಕಾಟ್ ಬೊಲಾಂಡ್, ಅಲೆಕ್ಸ್ ಕ್ಯಾರಿ, ಕ್ಯಾಮರಾನ್ ಗ್ರೀನ್, ಮಾರ್ಕಸ್ ಹ್ಯಾರಿಸ್, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಉಸ್ಮಾನ್ ಖ್ವಾಜಾ, ಮಾರ್ನಸ್ ಲಾಬುಷೇನ್, ನೇಥನ್ ಲಯನ್, ಟಾಡ್ ಮರ್ಫಿ, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್, ಡೇವಿಡ್ ವಾರ್ನರ್.

ಅಥ್ಲೆಟಿಕ್ಸ್: ಸಬ್ಳೆಗೆ 10ನೇ ಸ್ಥಾನ

ರಬಾತ್, ಮೊರೊಕ್ಕೊ (ಪಿಟಿಐ): ಭಾರತದ ಅವಿನಾಶ್ ಸಬ್ಳೆ ಅವರು ಇಲ್ಲಿ ನಡೆದ ಡೈಮಂಡ್ ಲೀಗ್ ಕೂಟದ ಎರಡನೇ ಲೆಗ್‌ನ 3,000 ಮೀ. ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ನಿರೀಕ್ಷಿತ ಪ್ರದರ್ಶನ ನೀಡುವಲ್ಲಿ ವಿಫಲರಾಗಿ 10ನೇ ಸ್ಥಾನ ಪಡೆದರು.

2022ರ ಕಾಮನ್‌ವೆಲ್ತ್ ಕೂಟದ ಬೆಳ್ಳಿ ಪದಕ ವಿಜೇತ ಸಬ್ಳೆ, ಭಾನುವಾರ ನಡೆದ ಸ್ಪರ್ಧೆಯನ್ನು 8 ನಿ. 17.18 ಸೆ.ಗಳಲ್ಲಿ ಪೂರೈಸಿದರು. ತಮ್ಮ ಹೆಸರಿನಲ್ಲಿರುವ ರಾಷ್ಟ್ರೀಯ ದಾಖಲೆಯ (8 ನಿ. 11.20 ಸೆ.) ಸಮಯಕ್ಕಿಂತ ಆರು ಸೆಕೆಂಡುಗಳಷ್ಟು ತಡವಾಗಿ ಅವರು ಗುರಿ ತಲುಪಿದರು.

28 ವರ್ಷದ ಸಬ್ಳೆ ಕಳೆದ ವರ್ಷ ಇದೇ ಕೂಟದಲ್ಲಿ 8 ನಿ. 12.48 ಸೆ.ಗಳೊಂದಿಗೆ ಐದನೇ ಸ್ಥಾನ ಪಡೆದುಕೊಂಡಿದ್ದರು.

ವಿಶ್ವ ಮತ್ತು ಒಲಿಂಪಿಕ್ಸ್ ಚಾಂಪಿಯನ್ ಆಗಿರುವ ಮೊರೊಕ್ಕೊದ ಸೂಫಿಯಾನ್ ಎಲ್ ಬಕಾಲಿ ಅವರು 7 ನಿ. 56.68 ಸೆ.ಗಳೊಂದಿಗೆ ಅಗ್ರಸ್ಥಾನ ಪಡೆದರು.

ಸೆಲ್ವಪ್ರಭುಗೆ ಚಿನ್ನ: 18 ವರ್ಷದ ಸೆಲ್ವಪ್ರಭು ತಿರುಮಾರನ್ ಅವರು ಗ್ರೀಸ್‌ನಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್ ಕೂಟದ ಟ್ರಿಪಲ್ ಜಂಪ್‌ನಲ್ಲಿ 16.78 ಮೀ. ಸಾಧನೆಯೊಂದಿಗೆ ಚಿನ್ನ ಗೆದ್ದರು.